ಈ ಒಂದು ನಿಯೋಗ ದೆಹಲಿಗೆ ಹೋಗಿ ಬಂದಮೇಲೆ ಕೇಂದ್ರಸರ್ಕಾರದ ಅಭಿಪ್ರಾಯವೇನು ಎಂಬುದು ಸರ್ಕಾರಕ್ಕೆ ಗೊತ್ತಾಗುತ್ತದೆ.

ಸರ್ಕಾರದವರು ಈ ಸಭೆಯಲ್ಲಿ ಸ್ಪಷ್ಟವಾದ ನಿಲುವನ್ನು ಪ್ರಕಟಿಸಬೇಕು. ಈ ಒಂದು ಸಂಧಾನದಲ್ಲಿ ತಾವು ಕೈಗೊಂಡ ಕ್ರಮಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರು ಇದಕ್ಕೆ ಮುಕಂಡತ್ವವನ್ನು ವಹಿಸಿ ಒಂದು ತೀರ್ಮಾನಕ್ಕೆ ಬಂದುದಕ್ಕೆ ಅವರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್: ಸನ್ಮಾನ್ಯ ಅಧ್ಯಕ್ಷರೆ ಈಗಾಗಲೇ ತಾವು ದೆಹಲಿಯಿಂದ ನಿಯೋಗ ಬಂದ ಮೇಲೆ ಹೇಳಿಕೆಯನ್ನು ಕೊಡಬೇಕೆಂದು ಅಪ್ಪಣೆ ಕೊಡಿಸಿದ್ದೀರಿ. ಅದರಂತೆ ಸರ್ಕಾರ ಆಶ್ವಾಸನೆಯನ್ನು ಕೊಡುತ್ತದೆಂದು ಸರ್ಕಾರದ ಪರವಾಗಿ ಹೇಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಲೋಕೋಪಯೋಗಿ ವಿದ್ಯುಚ್ಛಕ್ತಿ ಮೀನುಗಾರಿಕೆ ನೀರಾವರಿ ಇಲಾಖೆಗಳು)

+ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಸದನದ ಮುಂದೆ ಇರತಕ್ಕಂಥ ಅನೇಕ ಬೇಡಿಕೆಗಳ ಮೇಲೆ ಅದರಲ್ಲೂ ವಿಶೇಷವಾಗಿ ಲೋಕೋಪಯೋಗಿ, ವಿದ್ಯುಚ್ಛಕ್ತಿ ಮತ್ತಿತರ ಬೇಡಿಕೆಗಳ ಬಗ್ಗೆ ನನ್ನ ಪ್ರಾರಂಭಿಕ ಅನಿಸಿಕೆಯನ್ನು ಪ್ರಸ್ತಾಪಮಾಡಿದ್ದೇನೆ. ತಮ್ಮ ಅನುಮತಿಯನ್ನು ಪಡೆದು ವಿದ್ಯುಚ್ಛಕ್ತಿ ಯೋಜನೆಗಳನ್ನು ಹೇಳುವ ಮುನ್ನ ಲೋಕೋಪಯೋಗಿ ಇಲಾಖೆಗೆ ಸೇರಿದಂಥ ಒಂದು ಮಾಹಿತಿಯೂ ನನಗೆ ಸಿಗಲಿಲ್ಲ. ಆದುದರಿಂದ ಅದನ್ನು ಪುನಃ ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಅಧ್ಯಕ್ಷರೆ ನಿನ್ನೆ ಪ್ರಾರಂಭಿಕವಾಗಿ ಇರಿಗೇಷನ್ ಮತ್ತು ಪಿ.ಡಬ್ಲ್ಯೂ.ಡಿ ಇಲಾಖೆಯ ಬೈಫರ್‌ಕೇಷನ್ ಬಗ್ಗೆ ಪ್ರಯತ್ನ ನಡೆಯುತ್ತಾ ಇದೆ ಎಂದು ಹೇಳಿದ್ದೇನೆ. ಇದರಿಂದ ಆಗಬಹುದಾದ ತೊಂದರೆಗಳ ವಿವರವನ್ನು ಈ ಸದನದಲ್ಲಿ ಪ್ರಸ್ತಾಪಮಾಡಿದ್ದೇನೆ. ಮಾನ್ಯ ನೀರಾವರಿ ಸಚಿವರು ಇಲ್ಲಿ ಇದ್ದಾರೆ. ಅವರ ಗಮನಕ್ಕೆ ಇನ್ನೊಂದು ವಿಚಾರವನ್ನು ಇಲ್ಲಿ ತರಬೇಕು. ದಿನಾಂಕ 3-8-91, 9-8-91 ಮತ್ತು 23-8-91 ಹೀಗೆ ಅನೇಕ ಬಾರಿ ಸೆಕ್ರೆಟರಿ-1, ಕಾಡಾ ಅವರು ಒಂದು ವರ್ಗಾವಣೆ ಆಜ್ಞೆಯನ್ನು ಹೊರಡಿಸಿದರು. ಈ ಆಜ್ಞೆಗೆ 23-3-1991ರವರೆಗೆ ಎಷ್ಟು ಇಂಥ ಆರ್ಡರ್‌ಗಳಾದವು. ಈ ಆಜ್ಞೆ ಇದುವರೆಗೆ ಜಾರಿಗೆ ಏಕೆ ಬರಲಿಲ್ಲ. ಹೀಗೆ ಜಾರಿಗೆ ಬರದೇ ಇರುವುದಕ್ಕೆ ಕಾರಣ ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಸೆಕ್ರೆಟರಿ 1 ಮತ್ತು ಸೆಕ್ರೆಟರಿ 2 ಅವರಲ್ಲಿ ಇರತಕ್ಕ ಅಧಿಕಾರದ ಹಸ್ತಾಂತರದ ಪ್ರಯತ್ನದ ಫಲವಾಗಿ ಸೆಕ್ರೆಟರಿ 1ರವರು ವರ್ಗಾವಣೆ ಆಜ್ಞೆ ಮಾಡುವುದು.

ಸೆಕ್ರೆಟರಿ 2ರವರು ವರ್ಗಾವಣೆಯನ್ನು ನಿಲ್ಲಿಸುವುದು. ಈ ಕೆಲಸ ಇಲ್ಲಿ ನಡೆಯುತ್ತಾ ಇದೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ ಹೀಗಾದರೆ ಹೇಗೆ? 1991ರ ಆಗಸ್ಟ್ ತಿಂಗಳಲ್ಲಿ ಎಷ್ಟು ವರ್ಗಾವಣೆಗೆ ಆಜ್ಞೆಗಳಾದುವು. ಅದಕ್ಕೆ ಪೂರ್ವಭಾವಿಯಾಗಿ ಆಗಸ್ಟ್ ತಿಂಗಳಲ್ಲಿ ನಡೆದಿರತಕ್ಕಂಥ ವರ್ಗಾವಣೆಗಳು ಎಷ್ಟು? ವರ್ಗಾವಣೆಯನ್ನು ಯಾಕೆ ಜಾರಿಗೆ ಕೊಟ್ಟಿಲ್ಲ. ಕೊಡದೇ ಇರುವುದರಿಂದ ಉಂಟಾಗಿರತಕ್ಕಂಥ ಪರಿಸ್ಥಿತಿಯೇನು? ವರ್ಗಾವಣೆ ಆಜ್ಞೆ ಹೋಗಿದೆ ಅದರ ಸ್ಟೇ ಆರ್ಡರ್ ಆಗಿದೆ ಅವರು ಅಲ್ಲೂ ಇಲ್ಲ ಇಲ್ಲೂ ಇಲ್ಲ. ಆದರೆ ಸರ್ಕಾರದ ಬೊಕ್ಕಸಕ್ಕೆ ಮಾತ್ರ ಮದ್ದು ಖರ್ಚಾಗುತ್ತಾ

ಇದೆ. ಅದು ಸುಮಾರು ಎಷ್ಟಾಗಿದೆಯೆಂದರೆ ನನ್ನ ಅಂದಾಜಿನ ಪ್ರಕಾರ ನಾಲ್ಕು ಲಕ್ಷಕ್ಕಿಂತ ಹೆಚ್ಚು. ಈ ಅಧಿಕಾರಿಗಳು ಹೋಗದೆ ಇರುವುದರಿಂದ ಸರ್ಕಾರಕ್ಕೆ ನಷ್ಟವಾಗಿದೆ. ಆದುದರಿಂದ ಈ ಅವಧಿಯಲ್ಲಿ ಸರ್ಕಾರ ಆಜ್ಞೆ ವರ್ಗಾವಣೆಯಾಗದೇ ಹೊರಬಿದ್ದು ಇದುವರೆಗೆ ಅದನ್ನು ಜಾರಿಗೆ ಕೊಡದೇ ಇರುವುದಕ್ಕೆ ಕಾರಣವೇನು? ಯಾರಿಂದ ಅಪರಾಧವಾಗಿದೆ? ಈ ಅಪರಾಧಿಗಳಿಂದ ಹಣವೇನಾದರೂ ವಸೂಲಿ ಮಾಡುತ್ತೀರಾ? ಇದಕ್ಕೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಸಮ್ಮತಿ ಇತ್ತೋ ಅಸಮ್ಮತಿ ಇತ್ತೋ ಆಡಳಿತದಲ್ಲಿ ಇರತಕ್ಕಂಥ ಇಂಥ ಸಣ್ಣ ಪುಟ್ಟ ದೋಷಗಳಿಂದಾಗಿ ಇದಕ್ಕೆ ಕನ್ನಡದಲ್ಲಿ ಒಂದು ಗಾದೆ ಇದೆ. ಕಲ್ಲಪ್ಪ ಗುಂಡಪ್ಪ ಸೇರಿ ಮೆಣಸಪ್ಪ ಪುಡಿಯಾದ ಎಂದು ಹಾಗೆ ನಿಮ್ಮ ಅಧಿಕಾರಿಗಳ ಒಂದಿಬ್ಬರ ದ್ವಂದ್ವದಿಂದಾಗಿ ಇಡೀ ರಾಜ್ಯ ಸರ್ಕಾರ ವಿಶೇಷವಾಗಿ ಪಿ.ಡಬ್ಲ್ಯೂ.ಡಿ ಇಲಾಖೆಯ ಆಡಳಿತ ಸ್ಥಗಿತವಾಗಿರತಕ್ಕಂಥ ಸ್ಥಿತಿಗೆ ಬಂದಿರುವುದು ತುಂಬಾ ಶೋಚನೀಯ ಸಂಗತಿ. ದಯವಿಟ್ಟು ಸದನದ ಗಮನಕ್ಕೆ ತರಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅಧ್ಯಕ್ಷರೆ ನಿನ್ನೆ ನಾನು ಇರಿಗೇಷನ್ ಪವರ್ ಎನರ್ಜಿ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಶರಾವತಿ ವಿದ್ಯುತ್ಗಾರದಲ್ಲಿ ಬಳಕೆಗೆ ಅವಕಾಶವಿದ್ದರೂ ಬಳಕೆ ಮಾಡಿಕೊಳ್ಳದೇ ಕೆ.ಇ.ಬಿ. ಮತ್ತು ನಿಗಮಕ್ಕೆ ಸುಮಾರು 125 ಕೋಟಿ ರೂಪಯಿಗಳಷ್ಟು ನಷ್ಟಕ್ಕೆ ಕಾರಣವಾಗಿರುವುದನ್ನು ತನಿಖೆ ನಡೆಸಿ ವರದಿಯನ್ನು ಈ ಸದನಕ್ಕೆ ಒಪ್ಪಿಸಬೇಕೆಂದು ಒಂದು ಪ್ರಸ್ತಾಪವನ್ನು ಮಾಡಿದೆ. ವಿದ್ಯುತ್ ವಿತರಣೆಗಾಗಿ ಬಳಸತಕ್ಕ both power transformers and distribution transformers ಈ ಟ್ರಾನ್ಸ್‌ಫಾರ್ಮರ್‌ಗಳು ನಮ್ಮ ಸೆಂಟ್ರಲ್ ಶಾಸನದ ಒಂದು ಮಾಹಿತಿ ಪ್ರಕಾರ ಸುಮಾರು 35 ವರ್ಷಗಳ ಕಾಲ ಬಳಕೆ ಮಾಡತಕ್ಕ ಆಯಸ್ಸು ಇರುತ್ತದೆ. ಆದರೆ ಮೂರು ವರ್ಷಗಳಲ್ಲಿ ಇಂತಹ ಟ್ರಾನ್ಸ್‌ಫಾರ್ಮರ್‌ಗಳು ಸುಮಾರು 7-8 ಸಾವಿರ ಸುಟ್ಟು ಹೋಗಿವೆ.

ಇದರಿಂದ ರಾಜ್ಯ ಸರ್ಕಾರಕ್ಕೆ 10 ಕೋಟಿ ರೂಪಾಯಿ ನಷ್ಟವಾಗಿದೆ. ಈಗ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿರುವುದಕ್ಕೆ ಕಾರಣ ಕಳಪೆದರ್ಜೆಯ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಂಡಿದ್ದು. ಅವುಗಳನ್ನು ಅತಿಯಾಗಿ ಬಳಸುವಾಗ ಓವರ್ 'ಲೋಡ್‌ನಿಂದ ಸುಟ್ಟಿರುವುದು. ಈ ಎರಡು ಕಾರಣಗಳು ಇವೆ ಎನ್ನುವುದನ್ನು ವರದಿ ಹೇಳಿದೆ. ಮೂರನೆಯದು ಬಹಳ ಮುಖ್ಯವಾಗಿರತಕ್ಕದ್ದು. ಏನೆಂದರೆ, ರೈತರ ಪಂಪ್‌ಸೆಟ್‌ಗಳ ವಿಚಾರದಲ್ಲಿ ಒಂದೊಂದು ವರದಿಯಲ್ಲಿ ಒಂದೊಂದು ವಿವರಗಳಿವೆ. ನಮ್ಮ ಇಂಧನ ಖಾತೆಯವರು ಒದಗಿಸಿರತಕ್ಕ ಲೆಕ್ಕದಲ್ಲಿ ಸುಮಾರು 69 ಸಾವಿರಕ್ಕಿಂತ ಹೆಚ್ಚು ಪಂಪ್‌ಸೆಟ್ಟುಗಳಿಗೆ ಎನರ್ಜೈಸ್ ಮಾಡಿದ್ದೇವೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಸುಮಾರು 78 ಸಾವಿರ ಪಂಪ್‌ಸೆಟ್ಟುಗಳಿಗೆ ಎನರ್ಜೈಸ್ ಮಾಡಿದ್ದೇವೆಂದು ಈ ಸಭೆಯ ಒಳಗೂ ಹೊರಗೂ ಹೇಳಿದ್ದಾರೆ. ನಾನು ಅದಕ್ಕಾಗಿ ಕೇಳಿದೆ, ನೀವು ಅಷ್ಟು ಪಂಪ್‌ಸೆಟ್ಟುಗಳಿಗೆ ಎನರ್ಜೈಸ್ ಮಾಡಿರುವುದನ್ನು ನಿಜವೆಂದು ಒಪ್ಪಿಕೊಂಡರೆ ಅವುಗಳಲ್ಲಿ ಎಷ್ಟು ಕೆಲಸ ಮಾಡುತ್ತಿವೆ ಎಂಬುದನ್ನು ಹೇಳಿ. ಕೆಲವು ಏತಕ್ಕೆ ಕೆಲಸ ಮಾಡುತ್ತಿಲ್ಲ? ಪಂಪ್‌ಸೆಟ್‌ಗಳಿಗೆ ಎನರ್ಜೈಸ್ ಮಾಡುವುದಕ್ಕೆ ಬೇಕಾಗಿರತಕ್ಕ ಇನ್‌ಫ್ರಾಸ್ಟ್ರಕ್ಚರ್ ಎಂದು ಏನು ಹೇಳುತ್ತೇನೆ, ಅದು ಟ್ರಾನ್ಸ್‌ಮಿಷನ್ ಇರಬಹುದು. ಟ್ರಾನ್ಸ್‌ಫಾರ್ಮರ್ ಇರಬಹುದು. ಹೀಗೇ ಬೇರೇ ಬೇರೆ ವಿವಿಧ ರೀತಿಯ ಸಲಕರಣೆಗಳನ್ನು ಸರಿಯಾಗಿ ಒದಗಿಸಿಕೊಳ್ಳದೆ ನಿಮ್ಮ ಉತ್ಸಾಹದಲ್ಲಿ ಪಂಪ್‌ಸೆಟ್‌ಗಳಿಗೆ ಎನರ್ಜೈಸ್ ಮಾಡಬೇಕೆನ್ನತಕ್ಕ ನಿರ್ಣಯವನ್ನು ತೆಗೆದುಕೊಂಡು ಆ ನಿರ್ಣಯವನ್ನು ಜಾರಿಗೆ ಕೊಡತಕ್ಕ ಉತ್ಸಾಹದಲ್ಲಿ, ಅದು ಸಹ ಪೇಪರ್‌ನಲ್ಲಿ ವರದಿಯಾಗಿದೆ. ಆದರೆ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಿಕ್ಕಿಲ್ಲ, ಒಂದು ವೇಳೆ ಸಿಕ್ಕಿದ್ದರೂ

ಆ ಪಂಪ್‌ಸೆಟ್‌ಗಳು ಸುಟ್ಟು ಹೋಗಿವೆ. ಅದಕ್ಕಾಗಿ ನಾನು ಹೇಳಿದೆ, 7-8 ಸಾವಿರ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದರೆ ಪಂಪ್‌ಸೆಟ್‌ಗಳು ಲೆಕ್ಕವಿಲ್ಲದಷ್ಟು ಸುಟ್ಟು ಹೋಗಿವೆ. ಟ್ರಿಪ್ ಆಗುತ್ತವೆ. ವೋಲ್ಟೇಜ್ ಕಡಿಮೆಯಾಗುತ್ತದೆ. ಹೀಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಕೋಲಾರ ಜಿಲ್ಲೆಯಲ್ಲಿ, ತುಮಕೂರಿನ ಕೆಲವು ಭಾಗಗಳಲ್ಲಿ ಒಂದು ಕಾಲಕ್ಕೆ 120-130 ಅಡಿಗೆ ನೀರು ಬಾವಿಗಳಲ್ಲಿ ಸಿಗುತ್ತಿತ್ತು. ಈಗ 500 ಅಡಿ ದಾಟಿ ಮುಂದೇ ಹೋಗಿದ್ದಾರೆ. ಪಂಪ್‌ಗಳನ್ನು ಅಳವಡಿಸುವುದಕ್ಕೆ ಅವರು ಮಾಡತಕ್ಕ ಕಾರ್ಯಭಾರ ಇದೆಯಲ್ಲ, ಅದು ಬಹುಶಃ ಒಂದು ಜನರೇಷನ್‌ನಲ್ಲಿ ಅವರು ಪಡುವಷ್ಟು ಕಷ್ಟವನ್ನು ರೈತರು ಪಂಪ್‌ಸೆಟ್‌ಗಳಿಗೆ ವಿದ್ಯುತ್ ತೆಗೆದುಕೊಳ್ಳುವುದಕ್ಕೆ ಅಷ್ಟು ಕಷ್ಟಪಟ್ಟಿದ್ದಾರೆ. ಈಗ ಏನು ನಿಬಂಧನೆಗಳು ಇವೆಯೆಂದರೆ, ಮೊದಲು ಅಪ್ಲಿಕೇಶನ್ ರಿಜಿಸ್ಟ್ರೇಶನ್ ಮಾಡಿಸಬೇಕು.

ಅದಕ್ಕೆ ಐದು ರೂಪಾಯಿ ಕೊಡಬೇಕು. ಅಪ್ಲಿಕೇಶನ್ ರಿಜಿಸ್ಟ್ರೇಶನ್ ಆದಮೇಲೆ ಸ್ಪಾಟ್ ಇನ್ಸ್‌ಪೆಕ್ಷನ್ ಆಮೇಲೆ ಪ್ರಿಪರೇಷನ್ ಆಫ್ ದಿ ಎಸ್ಟಿಮೇಟ್ ಅದು ಆದಮೇಲೆ ಸ್ಯಾಂಕ್ಷನ್ ಆಫ್ ದಿ ವರ್ಕ್, ವರ್ಕ್ ಸ್ಯಾಂಕ್ಷನ್ ಆದಮೇಲೆ ಅಲಾಟ್‌ಮೆಂಟ್ ಆಫ್ ದಿ ಮೆಟೀರಿಯಲ್ ಆಮೇಲೆ ಎಕ್ಸಿಕ್ಯೂಷನ್ ಆಫ್ ದಿ ವರ್ಕ್ಸ್ ಅದು ಆದಮೇಲೆ ಫೈನಲ್ ಇನ್ ದಿ ಕನೆಕ್ಷನ್ ಇಷ್ಟು ಸ್ಟೇಜ್‌ಗೆ ಪ್ರತಿಯೊಂದು ಹಂತದಲ್ಲೂ ಮಾಮೂಲಿಯಿರುವುದು ಜನಜನಿತವಾಗಿರತಕ್ಕ ವಿಚಾರ. ನಾನು ವಿಶೇಷವಾಗಿ ಪ್ರಸ್ತಾಪ ಮಾಡುತ್ತಿಲ್ಲ ನಾನೂ ಒಬ್ಬ ರೈತನಾಗಿ ಪಂಪ್‌ಸೆಟ್ಟನ್ನು ಅಳವಡಿಸಿದವನಾಗಿ ಅದರ ಅನುಭವದ ಕಹಿಯನ್ನು ಹೇಳಬೇಕಾದರೆ ಎಲ್ಲ ಹಂತದಲ್ಲಿ ಗ್ರೀಸಿಂಗ್ ಆಗಬೇಕು. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ರೈತ ಸಮುದಾಯದ ರೆಪ್ರೆಸೆಂಟೇಟೀವ್ಸ್ ಯಾರೂ ಇಲ್ಲವೆ? ಅಥವಾ ರೈತ ಕುಟುಂಬದಿಂದ ಬಂದಿರತಕ್ಕವರು ನಮ್ಮಲ್ಲಿ 40-45 ಸಾವಿರ ನೌಕರರಲ್ಲಿ ಯಾರೂ ಇಲ್ಲವೇ? ಏತಕ್ಕೆ ಹೀಗೆ ನಡೆಯುತ್ತದೆಯೋ ನನಗೆ ಗೊತ್ತಿಲ್ಲ ಈ ಹಂತಗಳನ್ನು ದಾಟಿ ಆದಮೇಲೆ ಅಲ್ಲಿ ಮತ್ತೆ ಕಂಟ್ರಾಕ್ಟರುಗಳು ಇರುತ್ತಾರೆ. ಎಲ್ಲಾ ಕೆಲಸಗಳಿಗೆ ಕೆ.ಇ.ಬಿ. ಕಂಟ್ರಾಕ್ಟರ್ ದರ ನಿಗದಿಯಾಗಿರುತ್ತದೆ. ಆ ದರದಂತೆ ಕಂಟ್ರಾಕ್ಟ್‌ಗಳಲ್ಲಿ ದುಡ್ಡು ಸಂದಾಯವಾಗುತ್ತದೆ.ಆದರೆ ರೈತನಿಗೆ ಬೇಕಾದಂಥ ಕಂಬಗಳು ಏನಿವೆ ಅವುಗಳನ್ನು ಅವನೇ ತನ್ನ ಗಾಡಿಯಲ್ಲಿ ಸಾಗಿಸಿಕೊಳ್ಳಬೇಕು. ಅವುಗಳನ್ನು ಸಾಗಿಸಿಕೊಂಡು ಅವನೇ ಗುಂಡಿಯನ್ನೂ ತೆಗೆದು ಅವನೇ ಆ ಕಂಬಗಳನ್ನೂ ನಿಲ್ಲಿಸಿಕೊಂಡು ಕೆ.ಇ.ಬಿ. ಅಧಿಕಾರಿಗಳಿಗೆ ಮೇಜವಾನಿ ಕೂಡ ಮಾಡಿಸಬೇಕು. ಅಂದರೆ ಅವನು ಒಂದು ವಿದ್ಯುತ್ ಪಂಪ್‌ಸೆಟ್ಟಿಗೆ ಛಾರ್ಜ್ ಮಾಡಿಸಿಕೊಳ್ಳಬೇಕಾದರೆ ಎಷ್ಟು ಕಷ್ಟ ಇದೆ ಎಂಬುದನ್ನು ತಾವು ಯೋಚನೆ ಮಾಡಬೇಕು ನೀವು ಈಗ ಮಂತ್ರಿಗಳಾಗಿರಬಹುದು ಆದರೆ ಒಬ್ಬ ಸಾಮಾನ್ಯ ರೈತನಾಗಿ ನಿಮ್ಮ ಅನುಭವವನ್ನು ಹೇಳಿ ನೀವು ಬಳ್ಳಾರಿಯಿಂದ ಬಂದಿರುವವರು ರೈತರಿಗಿರುವ ಈ ತೊಂದರೆಯನ್ನು ಯಾವರೀತಿ ಸರಿಪಡಿಸುತ್ತೀರಿ? ರೈತನನ್ನು ಈ ಶೋಷಣೆಯಿಂದ ಯಾವರೀತಿ ವಿಮುಕ್ತನನ್ನಾಗಿ ಮಾಡುತ್ತೀರಿ? ಇಷ್ಟೆಲ್ಲಾ ಮಾಡಿದಮೇಲೆ ನೀವು ಬೆನ್ನು ತಟ್ಟಿಕೊಳ್ಳುತ್ತೀರಿ ನಾವು 78 ಸಾವಿರ ಪಂಪ್‌ಸೆಟ್ಟುಗಳಿಗೆ ಎನರ್ಜೈಸ್ ಮಾಡಿದ್ದೇವೆ ಎಂದು ಇಷ್ಟೆಲ್ಲಾ ಅವರು ಕಷ್ಟಪಟ್ಟು ಏನೋ ಒಂದು ರೀತಿಯಲ್ಲಿ ನನಗೆ ಒಂದು ಪಂಪ್‌ಸೆಟ್ಟಿಗೆ ಎನರ್ಜೈಸ್ ಆಯಿತು ಎನ್ನತಕ್ಕ ಸಂತೋಷವನ್ನು ಅಭಿವ್ಯಕ್ತ ಮಾಡುವಂಥ ಕಾಲಕ್ಕೆ ಅಥವಾ ಅದರ ಫಲವನ್ನು ಅನುಭವಿಸುವ ಕಾರಕ್ಕೆ ನಿಮ್ಮದು ಮತ್ತೆ ಶುರುವಾಗುತ್ತದೆ.

(ಮಾನ್ಯ ಬಿ.ಎಂ. ಇದಿನಬ್ಬನವರು ಅಧ್ಯಕ್ಷ ಪೀಠಕ್ಕೆ ಬಂದರು)

ಅದೇನೆಂದರೆ ಪವರ್ ಷಟಿಂಗ್ ವೋಲ್ಟೇಜ್ ಷಡ್ಡಿಂಗ್ ಡ್ರಾಪಿಂಗ್ ಟ್ರಿಪಿಂಗ್ ಇನ್ನೂ ಮುಂತಾದ್ದು ಸ್ವಾಮಿ ನಾನು ಬೆಂಗಳೂರಿನ ಕೆಲವು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಕೋಲಾರದ ಬಹುತೇಕ ಭಾಗಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ ಶ್ರೀನಿವಾಸಪುರದಲ್ಲಿ ಗಲಾಟೆ ಆದದ್ದೂ ಕೂಡ ಈ ಕಾರಣಕ್ಕಾಗಿಯೇ ನೀವು ನಿರ್ಭಾಧಿತವಾಗಿ ಪವರ್‌ನ್ನು ಕೊಟ್ಟಿದ್ದರೆ ಬಹುಶಃ ಪೋಲೀಸರ ಬೂಟಿನ ಏಟನ್ನು ರೈತರು ತಿನ್ನಬೇಕಾಗಿರಲಿಲ್ಲ ನೀವು ನಿರ್ಬಾಧಿತವಾಗಿ ಪವರ್‌ನ್ನು ಕೊಟ್ಟಿದ್ದಿದ್ದರೆ ತುಮಕೂರಿನಲ್ಲಿ ಚೀಫ್ ಇಂಜಿನಿಯರ್‌ರವರ ಕಛೇರಿ ಬಾಗಿಲಿಗೆ ಬೀಗ ಹಾಕಿ ರೈತರು ಹೊರಗಡೆ ಕೂತುಕೊಳ್ಳಬೇಕಾಗಿರಲಿಲ್ಲ ಇದು ಏನು ಸೂಚನೆಯನ್ನು ಕೊಡುತ್ತದೆಂದರೆ ನಿಮ್ಮ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ರೈತರಿಗೆ ಆಗತಕ್ಕಂಥ ಧಾರುಣ ಹಿಂಸೆ ಏನಿದೆ ಅದು ಮುಂದೆ ಕಾನೂನು ಸುವ್ಯವಸ್ಥೆ ಪರಿವರ್ತನೆ ಆದಾಗ ಅವತ್ತು ನೀವು ಉತ್ತರವನ್ನು ಕೊಡುವುದಕ್ಕಿಂತ ಈ ಅವ್ಯವಸ್ಥೆಯನ್ನು ತಪ್ಪಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಈಗಲೇ ಮಾಡಬೇಕು ಹಾಗೆ ಮಾಡದಿದ್ದರೆ ಮುಂದೆ ಆಗಬಹುದಾದಂಥ ಪರಿಣಾಮಗಳನ್ನು ಅದರ ಪೂರ್ಣ ಜಾವಾಬ್ದಾರಿಯನ್ನು ಸರಕಾರದಮೇಲೆ ಮತ್ತು ಇಲಾಖೆಯಮೇಲೆ ನಾವು ಹೊರಿಸಬೇಕಾಗುತ್ತದೆ ಎಚ್ಚರಿಕೆ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ದಿವಸದ ಮತ್ತು ಕಳೆದ ಕೆಲವು ದಿವಸದಿಂದ ಪತ್ರಿಕೆಗಳಲ್ಲಿ ಬಂದಿರತಕ್ಕ ವರದಿಗಳನ್ನು ನಾನು ನೋಡಿದ್ದೇನೆ ತಾ 12-9-91ರ ಪ್ರಜಾವಾಣಿ ಪತ್ರಿಕೆಯಲ್ಲಿ ಜಲವಿದ್ಯುತ್ ಕೆಲಸಗಳು ಸ್ಥಗಿತ ಆಗಿವೆ ಎಂದು ಬಂದಿದೆ ಕರ್ನಾಟಕ ಕೆಲವು ಜಲ ವಿದ್ಯುತ್ ಯೋಜನೆಗಳಿಗೆ ನೀಡಬೇಕಾದ 1360 ಕೋಟಿ ರೂ ಸಾಲವನ್ನು ಈ ತಿಂಗಳ ಕೊನೆಗೆ ಸ್ಥಗಿತಗೊಳಿಸುವುದಾಗಿ ವಿಶ್ವಬ್ಯಾಂಕ್ ಬೆದರಿಕೆ ಹಾಕಿದೆ ಇದರಿಂದ ಉಂಟಾದ ಬಿಕ್ಕಟ್ಟಿನ ಪರಿಹಾರಕ್ಕೆ ರಾಜ್ಯಸರ್ಕಾರ ತಕ್ಷಣ ವಿದ್ಯುತ್ ಮಂಡಲಿಗೆ 65 ಕೋಟಿ ರೂ ನಗದು ಸಹಾಯ ನೀಡಲು ಯೋಜಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ ವಿಶ್ವಬ್ಯಾಂಕ್‌ನ ಬೆದರಿಕೆಯಿಂದ ಗೇರುಗೊಪ್ಪ ಅಣೆಕಟ್ಟು ಮತ್ತು ವಿಧ್ಯುದ್‌ಗಾರ ಕೊಡಸಳ್ಳಿ ಜನವಿದ್ಯುತ್ ಯೋಜನೆಗಳ ಕಾರ್ಯ ನಿಲ್ಲುವ ಭೀತಿ ಎದುರಾಗಿದೆ. ಅಲ್ಲದೆ ತಲಕಳಲೆ ಅಣೆಕಟ್ಟಿನ ದುರಸ್ತಿ ಕಾರ್ಯಕ್ಕೂ ಧಕ್ಕೆಯಾಗಲಿದೆ.

1987ರ ಡಿಸೆಂಬರ್‌ನಲ್ಲಿ ವಿಶ್ವಬ್ಯಾಂಕ್ ಈ ಜಲವಿದ್ಯುತ್ ಯೋಜನೆಗಳಿಗೆ 5900 ಲಕ್ಷ ಡಾಲರ್ ಸಾಲ ಮಂಜೂರು ಮಾಡಿತ್ತು ಈ ವರ್ಷ ಜುಲೈ ವರೆಗೆ ಇದರಲ್ಲಿ ಕೇವಲ 673 ಲಕ್ಷ ಡಾಲರ್ ಹಣ ಮಾತ್ರ ನೀಡಿದೆ ರಾಜ್ಯಗಳ ವಿದ್ಯುತ್ ಮಂಡಲಿಗಳಲ್ಲಿನ ನಷ್ಟ ಸರಿದೂಗಿಸಲು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ವಿಶ್ವಬ್ಯಾಂಕ್ ತನ್ನ ನೆರವು ಸ್ಥಗಿತಗೊಳಿಸುವ ಬೆದರಿಕೆ ಹಾಕಿದೆ. ಈ ಬೆದರಿಕೆ ನಿಜವಾದರೆ 5227 ದಶಲಕ್ಷ ಹಣದ ಕೊರತೆ ಉಂಟಾಗಲಿದೆ ಈ ಪರಿಸ್ಥಿತಿಯನ್ನು ನಿವಾರಿಸಲು ಈ ಸದನವನ್ನು ನಂಬಿಕೆಗೆ ವಿಶ್ವಾಸಕ್ಕೆ ತೆಗೆದುಕೊಂಡು ವಿಶ್ವಬ್ಯಾಂಕ್‌ನಿಂದ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ತಂದು ವಿದ್ಯುಚ್ಛಕ್ತಿ ಮಂಡಲಿಗೆ ಕೊಟ್ಟು ಇದು ತನ್ನ ವ್ಯವಹಾರವನ್ನು ನಡೆಸುವುದು ಸಾಧ್ಯವಿಲ್ಲದಿದ್ದರೆ ಇದಕ್ಕೆ ಕಾರಣವಾದರೂ ಏನು? ವಿದ್ಯುಚ್ಛಕ್ತಿ ಮಂಡಲಿಗೆ ಬರಬೇಕಾದಂಥ ಬಾಕಿ ಎಷ್ಟಿದೆ ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ ಅಂತೆಯೇ ನೀವೂ ಕೂಡ ಬಾಕಿ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಿ ಇದರ ಪ್ರಮಾಣ ಎಷ್ಟು ಎಂಬುದನ್ನು ನೀವೇ ನಿಷ್ಕರ್ಷೆ ಮಾಡಬಹುದು. ಇಲ್ಲಿ ಸುಮಾರು 3344 ಕೋಟಿಗಿಂತ ಹೆಚ್ಚು ಹಣ ವಿದ್ಯುಚ್ಛಕ್ತಿ ಇಲಾಖೆಗೆ ಬಾಕಿ ಬರಬೇಕೆಂದು ಹೇಳಿ ಪತ್ರಿಕೆಯವರು ಬರೆಯುತ್ತಾರೆ. 334 ಕೋಟಿ ರೂಪಾಯಿ ಈ ಬಾಕಿ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಬರತಕ್ಕಂಥದ್ದಾಗಲಿ, ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿ ಬರತಕ್ಕಂಥ

ಮತ್ತು ಖಾಸಗಿ ಕ್ಷೇತ್ರದಲ್ಲಿ ಬರತಕ್ಕಂಥ ಉದ್ಯಮಗಳಿಂದ ಬಾಕಿ ಇದೆ ಎನ್ನತಕ್ಕಂಥದ್ದನ್ನು ಪ್ರಸಿದ್ಧಿ ಮಾಡಿದ್ದೀರಿ. ಇವರಲ್ಲಿ ಬಹಳ ಮುಖ್ಯವಾಗಿ ಕೋರ್ಟಿನ ಒಂದು ಸ್ಟೇ ಆರ್ಡರ್ ನಿಂದಾಗಿ ಸುಮಾರು 34.01 ಕೋಟಿ ರೂಪಾಯಿ ಮೊತ್ತದ ಬಾಕಿಯು ನ್ಯಾಯಾಲಯದಲ್ಲಿ ವಿವಾದವಾಗಿ ಉಳಿದಿರುವುದು ಗೊತ್ತಾಗಿದೆ. ಉಳಿದಿರತಕ್ಕಂಥ 300 ಕೋಟಿಯನ್ನು ವಸೂಲು ಮಾಡುವುದಕ್ಕೆ ಇರತಕ್ಕಂಥ ತೊಂದರೆ ಏನು? ಸರ್ಕಾರಿ ಉದ್ಯಮಗಳಿಂದ ಬರತಕ್ಕಂಥದ್ದಕ್ಕೆ ನೀವು ಕಾರಣ ಏನು ಹೇಳುತ್ತೀರೋ ಗೊತ್ತಿಲ್ಲ. ರೈತರಿಂದ ಬಾಕಿ ಏನಾದರು ಒಂದು ರೂಪಾಯಿ ನಿಂತರೆ ಹೋಗಿ ಕರೆಂಟ್ ನಿಲ್ಲಿಸುತ್ತೀರಿ. ನಿಲ್ಲಿಸುವುದೇನು, ಆತ ಸುತ್ತ ಮುತ್ತ ಸುಳಿಯುವುದಕ್ಕೆ ಬಿಡುವುದಿಲ್ಲ. ಮೊದಲು ಅದನ್ನು ಮಾಡಿಬಿಡುತ್ತೀರಿ. ಇಲ್ಲಿ ಬಾರಿ ಬಾರಿ ಉದ್ಯಮಿಗಳು ಅಂದರೆ ಕೋಟ್ಯಾಂತರ ರೂಪಾಯಿ ಲಾಭ ಮಾಡತಕ್ಕಂತ ಉದ್ದಿಮೆಗಳು ಬಾಕಿ ನಿಲ್ಲಿಸಿಕೊಂಡಿವೆ ಎಂದರೆ ಸರ್ಕಾರ ಇದನ್ನು ವಸೂಲಿ ಏತಕ್ಕೆ ಮಾಡುತ್ತಿಲ್ಲ. ಇದಕ್ಕೆ ಕಾರಣವೇನು? ಸರ್ಕಾರಕ್ಕೂ ಮತ್ತು ಸಂಬಂಧಪಟ್ಟಿರತಕ್ಕಂಥ ಉದ್ದಿಮೆಗಳಿಗೂ ವಸೂಲಾತಿ ವಿಚಾರದಲ್ಲಿ ಏನಾದರೂ ವ್ಯವಹಾರ ಕುದುರಿದೆ ಎಂದು ಯಾರಾದರೂ ಹೇಳಿದರೆ ನೀವು ಮಾಡುತ್ತಿರತಕ್ಕಂಥ ರೀತಿ ನೋಡಿದರೆ ಅದು ಅಪರಾಧವೆನಿಸುವುದಿಲ್ಲ. ಆ ಅಪರಾಧ ಜಾಸ್ತಿಯಾಗುತ್ತದೆ. ನ್ಯಾಯವಾಗಿ ಬರಬೇಕಾಗಿರತಕ್ಕಂಥ ಸರ್ಕಾರಕ್ಕೆ ಅದು ಕೆ.ಇ.ಬಿ. ಇಲಾಖೆಗೆ ಆ ಹಣವನ್ನು ವಸೂಲು ಮಾಡತಕ್ಕಂಥ ಪ್ರಯತ್ನ ತಕ್ಷಣ ಮಾಡಬೇಕು. ಇದರಲ್ಲಿ ಎಂಥೆಂಥವರು ಇದ್ದಾರೆಂದರೆ ಮಂಗಳೂರು ರಸಗೊಬ್ಬರದ ಕಾರ್ಖಾನೆ, ಇತ್ತೀಚಿಗೆ ರಸಗೊಬ್ಬರವನ್ನು ಮಾರಾಟ ಮಾಡಿದೆ. ಮಾರಾಟ ಮಾಡುವಾಗಲಾದರೂ ನಿಮಗೆ ಬರತಕ್ಕಂಥ ಬಾಕಿ ವಸೂಲು ಮಾಡಬೇಕೆನ್ನತಕ್ಕಂಥ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಆದರೆ ಅದನ್ನು ಮಾಡಲಿಲ್ಲ. ತುಂಗಭದ್ರಾ ಫೈಬರ್ಸ್ ನಿಯಮಿತ ಅವರದ್ದು ಬಾಕಿ ಸುಮಾರು 2 ಕೋಟಿ 11 ಲಕ್ಷ ಇಂಡಾಲ್ ಅಲ್ಯೂಮಿನಿಯಮ್‌ನವರು 2 ಕೋಟಿಗಿಂತ ಹೆಚ್ಚು ಹಣ ಬಾಕಿಯನ್ನು ಕೊಡಬೇಕಾಗಿದೆ. ಈ ಫೆರೋ ಅಲಾಯಿಸ್ ಲಿಮಿಟೆಡ್‌ನವರು 10 ಲಕ್ಷಕ್ಕಿಂತ ಹೆಚ್ಚು ಬಾಕಿ ಇಟ್ಟುಕೊಂಡಿರತಕ್ಕಂಥದ್ದು ಇದೆ; ಬೋರೋಕಾ ಸ್ಟೀಲ್ ಲಿಮಿಟೆಡ್‌ನವರಿಗೆ ಏನಾಗಿದೆ ಸ್ವಾಮಿ? ದಾಂಡೇಲಿ ವೆಸ್ಟ್‌ಕೋರ್ಸ್ ಪೇಪರ್‌ಮಿಲ್ಸ್ ಲಿಮಿಟೆಡ್, ಪತ್ತೇಗಾಲ ರ‍್ಯಾಪಡ್ಡಿ ಲಿಮಿಟೆಡ್ ಇಂಥ ಅನೇಕ ಇಂಡಸ್ಟ್ರೀಸ್‌ಗಳಿಂದ ಬರತಕ್ಕಂಥ ಬಾಕಿ ವಸೂಲಾತಿಗೆ ಯಾವ ಕ್ರಮವನ್ನು ಹಾಕಿಕೊಂಡಿದ್ದೀರಿ. ಏತಕ್ಕೆ ವಸೂಲಾತಿ ಆಗುತ್ತಿಲ್ಲ. ವಸೂಲಾತಿ ಆಗದೆ ಇರುವುದರಿಂದ ನಮ್ಮ ಜಲವಿದ್ಯುತ್ ಕೆಲಸಗಳಿಗೆ ಸುಮಾರು 1350 ಕೋಟಿ ರೂಪಾಯಿಗಳು ವಿಶ್ವಬ್ಯಾಂಕ್‌ನಿಂದ ಬರತಕ್ಕಂಥ ನೆರವು ತಪ್ಪಿ ಹೋದರೆ ಏನು ಮಾಡುತ್ತೀರಿ? ಯಾರ ಅಪರಾಧದಿಂದ ಇದು ತಪ್ಪಿ ಹೋಗುತ್ತದೆ. ಇದರ ಲುಕ್ಸಾನು 4 ಕೋಟಿಗಿಂತ ಹೆಚ್ಚಿರತಕ್ಕಂಥ ಕನ್ನಡನಾಡಿಗೆ ಆಗುತ್ತದೆ.

ನೀವು ವೈಯಕ್ತಿಕ ವ್ಯವಹಾರಗಳನ್ನು ಒಂದೆಡೆಗೆ ಇಟ್ಟುಬಿಡಿ. ಜಲವಿದ್ಯುತ್ ಕೆಲಸಗಳು ಸ್ಥಗಿತವಾಗಿರತಕ್ಕಂಥ ಬಗ್ಗೆ ಒಂದು ಪತ್ರಿಕಾವರದಿ ಬಂದಿದೆ ಇದಕ್ಕೆ ದಯವಿಟ್ಟು ಸೂಕ್ತವಾಗಿರತಕ್ಕಂಥ ಉತ್ತರವನ್ನು ಈ ಸದನಕ್ಕೆ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಥರ್ಮಲ್ ವಿದ್ಯುತ್ ಆರಂಭ, ಸಹಯೋಗದೊಂದಿಗೆ ಸುಮಾರು 2,400 ಮೆಗಾವಾಟ್ ಶಾಕೋತ್ಪನ್ನ ವಿದ್ಯುತ್‌ಗಾರವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ಒಂದು ಕಾಲಕ್ಕೆ ತೀರ್ಮಾನವಾಗಿದೆ. ಇವತ್ತು ರಷ್ಯಾ ದೇಶದ

ಪರಿಸ್ಥಿತಿಯನ್ನು ನಾವು ಚರ್ಚೆ ಮಾಡುವುದಕ್ಕೆ ಹೋಗುತ್ತಿದಿಲ್ಲ.ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಈ ರಾಜ್ಯಕ್ಕೆ ಮತ್ತು ಸೋವಿಯತ್ ಒಕ್ಕೂಟದೊಳಗೆ ಆದಂತ ಒಪ್ಪಂದ ಇನ್ನೂ ಸಿಂಧುವಾಗಿದೆಯೇ ಅಥವಾ ಇಲ್ಲವೇ? ಒಂದು ವೇಳೆ ಅ ಸಿಂಧುವಾಗಿದ್ದರೆ ಈ ಒಂದು 2,400 ಮೆಗಾವಾಟ್ ಶಾಕೋತ್ಪನ್ನ ವಿದ್ಯುತ್ ಜಾರಿಗೆ ಕೊಡತಕ್ಕಂಥ ಬೇರೆ ರೀತಿಯ ಪ್ರಯತ್ನವನ್ನು ಏನು ಮಾಡಿದ್ದೀರಿ?

ಇದು ನನಗೆ ಎರಡನೇ ಪ್ರಶ್ನೆ. ಇವತ್ತು ಶರಾವತಿಯ ಒಂದು ಭಾಗದ ಕರ್ಮಕಾಂಡವನ್ನು ಹೇಳಿದ್ದೇನೆ. 120.03 ಕೋಟಿ ರೂಪಾಯಿ ಕೆ.ಇ.ಬಿ. ಮತ್ತು ಪವರ್ ಕಾರ್ಪೋರೇಷನ್‌ನವರು ಒಂದು ನೆಗ್ಲಿಜೆನ್ಸ್‌ನಿಂದ ರಾಜ್ಯ ಏನು ಲುಕ್ಸಾನು ಆಗಿದೆ. ಇದನ್ನು ನೀವು ಸೂಕ್ತವಾದ ವೇದಿಕೆಯಲ್ಲಿ ಪರಿಶೀಲನೆ ಮಾಡಬೇಕು ಮತ್ತು ಅಲ್ಲಿ ನಡೆದಿರತಕ್ಕ ದೋಷಕ್ಕೆ ಯಾರು ಹೊಣೆಗಾರರು ಎಂಬುದನ್ನು ವಿಚಾರಣೆ ಮೂಲಕ ಪತ್ತೆ ಮಾಡಿ ಅಂಥ ಹೊಣೆಗಾರಿಕೆಯಿಂದ ನುಣುಚಿಕೊಳ್ಳತಕ್ಕ ಅಧಿಕಾರಿಗಳಿಗೆ ಶಿಕ್ಷೆ ಮಾಡಿ ರಾಜ್ಯಕ್ಕೆ ಆಗತಕ್ಕ ಅಪವ್ಯಯವನ್ನು ತಪ್ಪಿಸಬೇಕೆಂಬ ಮಾತನ್ನು ಹೇಳಿದ್ದೆ. 17-9-91ರ ಡೆಕ್ಕನ್ ಹೆರಾಲ್ಡ್‌ನಲ್ಲಿ ಮತ್ತೊಂದು ಸುದ್ದಿ ಬಂದಿದೆ. ಅದು ಈ ರೀತಿ ಇದೆ.

Neglect downs Sharavathi Unit Huge Losses :

Neglect on the part of technical staff of the Karnataka Power Corporation resulted last week in a transformer burst, rendering the Sharavathi generaing unit of the Sharavathi Hydro-electric power station inoperation and causing a damage of Rs. 2.5 crores according to sources in the KPC here.

The staff responsible for maintaining the temperature of the water cooler at the base of a 220 KW transformer coil in a given range had failed to discharge this routine function causing the damage, it is learnt. It would take six months to repair the unit and loss in power generation which would have brought a revenue of Rs. 2 lakh everyday.

This serious lapse on the part of the maintenance staff has been sought to be suppressed. Hourly temperature readings have been recorded on the night the transformer burnt out, till 6 a.m. though the accident occurred at 2 a.m. it is reported.

ಎರಡು ಗಂಟೆ ರಾತ್ರಿಗೆ ಬೆಂಕಿ ಹತ್ತಿದರೆ ಬೆಳಗಿನ ತನಕ ಅದನ್ನು ಆರಿಸುವ ಪ್ರಯತ್ನ ನಿಮ್ಮ ಇಲಾಖೆಯಲ್ಲಿ ನಡೆಯುವುದಿಲ್ಲ ಅಂದರೆ ಯಾರಿಗಾದರೂ ಜವಾಬ್ದಾರಿ ಇದೆಯೇ? ನಾವು ಏತಕ್ಕೆ ಇಲ್ಲಿ ಕುಳಿತು ಚರ್ಚೆ ಮಾಡಬೇಕು?

The KPC Sources also said that the second unit of the power station was shut down on August 2, for modernisational. Well such shut downs are part of routine maintenance, its timing coincided with the filling up of Linganamakki reservoir. If the water released from the dam during August

had been used for power generation through Unit 2, the KPC would have earned additional Rs. 60 lakh,it is said.

ಅಂದರೆ ಲಿಂಗನಮಕ್ಕಿ ರಿಸರ್‌ವಾಯರ್‌ಗೆ ನೀರು ಬಂದಿದೆ. ಅಲ್ಲಿ ಇದ್ದಂತಹ 18-20 ಟಿ.ಎಂ.ಸಿ. ನೀರನ್ನು ಸಮುದ್ರಕ್ಕೆ ಬಿಟ್ಟರು. ಇರುವ ನೀರನ್ನು ಬಳಸಿಕೊಳ್ಳೋಣ ಅಂದರೆ ಒಂದು ಯೂನಿಟ್ ಷಟ್‌ಡೌನ್ ಆಗಿದೆ. ಇನ್ನೊಂದು ರಿಪೇರಿಗೆ ಹೋಗಿದೆ. ನೀವು ಇದನ್ನು ಸರಿಪಡಿಸುವುದಿಲ್ಲ. cuts in power supply. ಏನಿದೆ ಇದನ್ನೆಲ್ಲ ಸರಿಪಡಿಸಿ ಎಲ್ಲೆಲ್ಲಿ ದೋಷಗಳಿವೆ ಅದನ್ನು ಸರಿಪಡಿಸಿ ಜನರಿಗೆ ವಿದ್ಯುತ್ ಕೊಡಿ ಎಂದರೆ ಪ್ರತಿದಿನ ಮುಕ್ಕಾಲು ಗಂಟೆವಿದ್ಯುತ್ ಸ್ಥಗಿತ.ಇದು ಈ ಇಲಾಖೆಯಲ್ಲಿ ಇರತಕ್ಕ ದೋಷಗಳು. ತಾಂತ್ರಿಕವಾಗಿ ಆಗತಕ್ಕ ದೋಷಗಳು. ಇಲಾಖೆಯ ತಾಂತ್ರಿಕ ವ್ಯವಸ್ಥೆಯನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಹೊತ್ತಿರತಕ್ಕ ಅಧಿಕಾರಿಗಳು ಮಾಡತಕ್ಕ ಅಪರಾಧಕ್ಕಾಗಿ ಇಡೀ ದೇಶದ ಜನ ಶಿಕ್ಷೆ ಅನುಭವಿಸಬೇಕಾಗಿದೆ. ಇವತ್ತಿನ ಪತ್ರಿಕೆಗಳಲ್ಲಿ ರಾಜ್ಯಾದ್ಯಂತ ಪ್ರತಿನಿತ್ಯ 45 ನಿಮಿಷ ವಿದ್ಯುತ್ ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಜಾರಿಗೆತಂದಿದೆ ಎಂದು ತಿಳಿದು ಬಂದಿದೆ. ನಿಜವಾಗಿ ವಿದ್ಯುತ್ ಇಲ್ಲವೆಂದರೆ, ಜನರಿಗೆ ಕೊಡಿ. ಅಧಿಕೃತವಾಗಿ ಹೇಳಿಕೆ ಕೊಡಿ. ಆದರೆ ಅಂಥ ಪರಿಸ್ಥಿತಿ ಈಗ ಇಲ್ಲ. ನಗರದ ಕೆಲವು ಭಾಗಗಳಲ್ಲಿ ಇಂದು ಬೆಳಿಗ್ಗೆ ವಿದ್ಯುತ್ ಸ್ಥಗಿತವಾಗಿತ್ತು. ಬೇರೆ ಬೇರೆ ಭಾಗಗಳಲ್ಲಿ ಸರದಿ ಮೇಲೆ ಸ್ಥಗಿತವಾಗುತ್ತದೆ.ಇಲ್ಲಿ ಶಾಸನ ಸಭೆ ನಡೆಯುತ್ತಿದೆ, ಸಂಬಂಧಪಟ್ಟ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ, ಇಂಥ ಸಂದರ್ಭದಲ್ಲಿ ಅಧಿಕಾರಿಗಳು ಎಷ್ಟು ದೂರಕ್ಕೆ ಹೋಗಿದ್ದಾರೆಂದರೆ ಬೆಂಗಳೂರು ನಗರದಲ್ಲಿ ಮುಕ್ಕಾಲು ಗಂಟೆ ಕಾಲ ವಿದ್ಯುತ್ ಅನ್ನು ವಿವಿಧ ವೇಳೆಯಲ್ಲಿ ಸ್ಥಗಿತಗೊಳಿಸುತ್ತಿದ್ದೇವೆನ್ನುವ ಸದನ ಹೇಳಿಕೆಯನ್ನು ಈ ಸದನ ನಡೆಯುವ ಕಾಲದಲ್ಲಿ ಪ್ರಸಿದ್ಧಿ ಪಡಿಸಿದ್ದಾರೆ. ಹಾಗಿದ್ದರೆ ಸದನ ಏತಕ್ಕೆ ಸೇರಬೇಕು? ನಾವು ಏತಕ್ಕೆ ಇಲ್ಲಿ ಬಂದು ಕುಳಿತಿರಬೇಕು?

ಶ್ರೀ ಆರ್.ಎಲ್. ಜಾಲಪ್ಪ : ಬೆಂಗಳೂರು ನಗರದಲ್ಲಿ ಮುಕ್ಕಾಲು ಗಂಟೆ ವಿದ್ಯುತ್ ಸ್ಥಗಿತವಾಗದರೆ ಹಳ್ಳಿಗಳಲ್ಲಿ ಮುಕ್ಕಾಲು ದಿವಸವೇ ವಿದ್ಯುತ್ ಇರುವುದಿಲ್ಲ.

ಶ್ರೀ ಸಿ.ಬೈರೇಗೌಡ : ಬೆಂಗಳೂರು ನಗರದಲ್ಲಿ ಮಾತ್ರವಲ್ಲ, ಹಳ್ಳಿಗಳಲ್ಲಿ ಸಹ ವಿದ್ಯುತ್ ಇಲ್ಲವೇ? ಇಲ್ಲ. ನಮ್ಮ ಕೋಲಾರದಲ್ಲಿ ಬೆಳಗಿನಿಂದ ಕರೆಂಟ್ ಇಲ್ಲ. 4 ಸಾರಿ ನನಗೆ ಫೋನ್ ಬಂದಿದೆ. ಕೆಲವು ಕಡೆ ಮಳೆ ಆಗಿದೆ ಮತ್ತೆ ಕೆಲವು ಕಡೆ ಮಳೆ ಆಗಿಲ್ಲ. ಮಳೆ ಆಗದ ಕಡೆ ಬೆಳೆ ಹಾಳಾಗಿ ಹೋಗಿದೆ.

ಏನಾದರೂ ಮಾಡಿ ಏನಾದರೂ ಮಾಡಿ, ಅಸೆಂಬ್ಲಿಯಲ್ಲಿ ಏನು ಮಾಡುತ್ತಾ ಇದ್ದೀರಿ ಎಂದು ಜನ ನಮ್ಮನ್ನು ಇವತ್ತಿನ ದಿವಸ ಪ್ರಶ್ನೆ ಮಾಡುತ್ತಿದ್ದಾರೆ. ನಾವು ಊರಿನ ಕಡೆ ಹೋಗಬೇಕೋ ಬಿಡಬೇಕೋ ಅಥವಾ ಇಲ್ಲೇ ತಲೆ ಮರೆಸಿಕೊಂಡು ಬೆಂಗಳೂರಿನಲ್ಲಿ ಇರಬೇಕೋ ಎಂಬ ಯೋಚನೆ ಇವತ್ತಿನ ದಿವಸ ನನ್ನನ್ನಂತೂ ಕಾಡಿಸುತ್ತಿದೆ. ಬಹಳ ತೀವ್ರವಾದ ಪರಿಸ್ಥಿತಿ ಇದೆ. ನನಗೆ ಅರ್ಥವಾಗುತ್ತಿಲ್ಲ. ಒಂದು ಕಡೆ ಹಳ್ಳಿಗೆ ಹೋದರೆ ಒಂದು ಪ್ರಶ್ನೆ ಕೇಳುತ್ತಾರೆ. ಏನಪ್ಪ, ಎಲ್ಲಾ ರಿಸರ್ವಾಯರ್‌ಗಳೂ ತುಂಬಿದೆ, ಕರೆಂಟ್ ಉತ್ಪತ್ತಿ ಮಾಡುವ ಜಲಾಶಯಗಳಲ್ಲಿ ಪ್ರವಾಹ ಬಂದು ಜನರು ಸಾಯುತ್ತಿದ್ದಾರೆ ಎಂದು ರೇಡಿಯೋದಲ್ಲಿ ಕೇಳುತ್ತೇವೆ, ಪತ್ರಿಕೆಯಲ್ಲಿ ಓದುತ್ತೇವೆ, ಇಲ್ಲಿ ನೋಡಿದರೆ ನಮಗೆ ಕರೆಂಟೇ ಇಲ್ಲ, ಏನಿದರ ಕಥೆ, ನೀವು ಏನು ಮಾಡುತ್ತಾ

ಇದ್ದೀರಿ ನೀವೇನು ನಿದ್ದೆ ಮಾಡುತ್ತಿದ್ದೀರಾ? ಏನು ಮಾಡುತ್ತಿದ್ದೀರಿ ಎಂದು ನಮ್ಮನ್ನು ಕೇಳುವ ಪ್ರಶ್ನೆ ಬಂದಿದೆ. ನಾನು ಅನೇಕ ಸಾರಿ ಇದೇ ಸದನದಲ್ಲಿ ಹೇಳಿದ್ದೇನೆ, ನಮ್ಮ ಕೋಲಾರ ಜಿಲ್ಲೆಯಲ್ಲಿ ಅಂತೂ ಲಾ ಅಂಡ್ ಆರ್ಡರ್ ಸಿಚುಯೇಷನ್ ಕ್ರಿಯೇಟ್ ಆಗುತ್ತದೆಂದು ಹೇಳಿದ್ದೇನೆ. ಮೊನ್ನೆ ಶ್ರೀನಿವಾಸಪುರದಲ್ಲಿ ಪ್ರತಿಫಲ ಹೊರಬಿದ್ದಿದೆ. ಪರಿಸ್ಥಿತಿ ಇನ್ನೂ ಭೀಕರವಾಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳದೇ ಇರುವುದಕ್ಕೆ ಸಾಧ್ಯವಿಲ್ಲ. ನಾಳೆ ಆಗುವಂಥದ್ದನ್ನು ಇವತ್ತೇ ಹೇಳುತ್ತಿದ್ದೇನೆ. ಮೊನ್ನೆ ಶ್ರೀನಿವಾಸಪುರದಲ್ಲಿ ಏನು ನಡೆಯಿತು ಅದು ಪ್ರತಿ ತಾಲ್ಲೂಕಿನಲ್ಲಿ ನಡೆಯುತ್ತದೆ, ಪ್ರತಿ ಹಳ್ಳಿಯಲ್ಲಿ ನಡೆಯುತ್ತದೆ, ಸರ್ಕಾರಕ್ಕೂ ಜನಕ್ಕೂ ತೀವ್ರ ಘರ್ಷಣೆ ಈ ವಿಚಾರದಲ್ಲಿಯಂತೂ ನಡೆಯುತ್ತದೆ. ಇದಕ್ಕೆ ಸರ್ಕಾರ ಏನಾದರೂ ಮಾಡಿಕೊಂಡು ಹೋಗಲಿ, ಸತ್ತರೆ ಏನಾಗುತ್ತದೆ? ನಾಲ್ಕು ಜನ ರೈತರು ಸಾಯಬಹುದು, ಸತ್ತರೂ ಚಿಂತೆಯಿಲ್ಲ.ಅದಕ್ಕಂತೂ ಇವತ್ತಿನ ದಿವಸ ನಮ್ಮಲ್ಲಿರತಕ್ಕ ರೈತರು ತಯಾರಾಗುತ್ತಿದ್ದಾರೆ. ನಮ್ಮನ್ನು ಓಡಾಡುವುದಕ್ಕೆ ಬಿಡದೇ ಇರುವ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ಎಷ್ಟೋ ಸಾರಿ ಹೇಳಿದರೂ ಎಷ್ಟೋ ಸಾರಿ ಚರ್ಚೆಯಾದರೂ ಕೂಡ ಏನೂ ಪ್ರಯೋಜನ ಇಲ್ಲ, ದಿನ ಕಳೆದಂತೆ ಇದು ಎಷ್ಟು ಹೊಲಸಾಗುತ್ತಿದೆ ಎಂದರೆ ತಲೆ ಎತ್ತಿಕೊಂಡು ಹೋಗುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಅವಮಾನವಾಗುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ರೆಗ್ಯುಲೇಟರ್ ಓಲ್ಟೇಜ್ ಪ್ರಾರಂಭವಾದಾಗ ಮಧ್ಯದಲ್ಲಿ ಹೈ ಓಲ್ಟೇಜ್ ಏತಕ್ಕೆ? ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿ. ಬೈರೇಗೌಡ: ಓಲ್ಟೇಜ್ ಸಾಕಾಗಿಲ್ಲ. ಬನ್ನಿ ನಿಮಗೆ ಓಲ್ಟೇಜ್ ತೋರಿಸುತ್ತೇನೆ. ಹಳ್ಳಿಗೆ ಹೋಗೋಣ ಬನ್ನಿ. ಮಾನ್ಯ ಮಲ್ಲಾರಿಗೌಡ ಪಾಟೀಲರೇ, ಹಳ್ಳಿಗೆ ಹೋಗೋಣ ಬನ್ನಿ ಜನ ನಿಮಗೆ ತೋರಿಸುತ್ತಾರೆ ಓಲ್ಟೇಜ್.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನೀವು ಕರೆದಾಗ ನಾನು ಯಾವಾಗಲೂ ಬರುತ್ತೇನೆ ಎಂಬ ವಿಶ್ವಾಸ ಇದೆಯಲ್ಲ ನಿಮಗೆ?

ಶ್ರೀ ಸಿ. ಬೈರೇಗೌಡ : ಆಯಿತು, ಬನ್ನಿ, ನಡೆಯಿರಿ ಹೋಗೋಣ ಹಳ್ಳಿಗೆ.

ಶ್ರೀ ಡಿ.ಎ. ಚಿನ್ನಪ್ಪ : ನಡೆಯಿರಿ.

ಶ್ರೀ ಸಿ. ಬೈರೇಗೌಡ : ಬನ್ನಿ, ನಾನು ಮಾತನಾಡಬೇಕು ಈಗ. ಆದರೂ ನಾನು ಬರುವುದಕ್ಕೆ ತಯಾರಿದ್ದೇನೆ. ಹೋಗೋಣ ನಡೆಯಿರಿ. ನಾನು ಮಾತನಾಡಬೇಕಾಗಿದೆ. ಅದನ್ನು ತಪ್ಪಿಸುವುದಕ್ಕೆ ಇದನ್ನು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಯ ಕಣ್ಣುಮುಚ್ಚಾಲೆ ನಡೆದೇ ಇದೆ. ಇದಕ್ಕೆ ಕಾರಣ ಏನು ಕೊಡುತ್ತಾರೆ? ಈ ವ್ಯತ್ಯಾಸಕ್ಕೆ ಕಾರಣ ಏನು ಕೊಡುತ್ತಾರೆ? ರಾಜ್ಯದಲ್ಲಿ ಪ್ರತಿನಿತ್ಯ 47ರಿಂದ 48 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಬೇಡಿಕೆ ಇದೆ, ಬೇಡಿಕೆ ಮತ್ತು ಪೂರೈಕೆ ನಡುವೆ ಶೇಕಡ 40 ರಷ್ಟು ಅಂತರ ಇದ್ದು 5 ಸಾವಿರ ಕಿಲೋವ್ಯಾಟ್ ಬೇಡಿಕೆ ತೆಗೆದಿದ್ದರಿಂದ ಈ ಸ್ಥಗಿತ ಅನಿವಾರ್ಯ ಎಂದು ಹೇಳುತ್ತಾರೆ. ನಾನು ಹೇಳಿದೆ, ಇದು ಅನಿವಾರ್ಯ ಅಲ್ಲ, ಉತ್ಪಾದನೆ ಮಾಡಬೇಕಾದಂಥ ಕಾಲದಲ್ಲಿ ಆ ನೀರನ್ನು ಬಳಕೆ ಮಾಡಿಕೊಳ್ಳದೆ ವ್ಯರ್ಥ ಮಾಡುತ್ತೀರಿ. ಅದರ ಪರಿಣಾಮ ಏನು?

ನಾನು ಅದಕ್ಕಾಗಿ ತಾರೀಖು ಕೊಟ್ಟಿದ್ದೇನೆ. 13-6-1991 ರಂದು 1757 ಅಡಿ ನೀರಿದ್ದು ಇನ್ನೂ 20-25 ಅಡಿ ನೀರಿನ ಬಳಕೆ ಮಾಡಬಹುದಿತ್ತು. ಮಾಡದೇ ಇರುವುದರಿಂದ 14-7-91ಕ್ಕೆ ಪ್ರವಾಹ ಏರುತ್ತಾ ಬಂದು ಸುಮಾರು 18 ರಿಂದ 20 ಟಿ.ಎಂ.ಸಿ. ನೀರನ್ನು ಸಮುದ್ರಕ್ಕೆ ನೀವು ಬಿಡುತ್ತೀರಿ. ಇಲ್ಲಿ ಬೇಡಿಕೆಗೂ ಮತ್ತು ಗ್ರಾಹಕರ ಪೂರೈಕೆಗೂ ನಡುವೆ 40 ರಷ್ಟು ಕಡಿಮೆ ಇದೆ, ಆದ್ದರಿಂದೆ ಕಡಿಮೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಎಲ್ಲಾದರೂ ಒಂದು ಕಡೆ ನಿಜ ಹೇಳತಕ್ಕ ಪ್ರಯತ್ನ ಮಾಡಿ. ಇಲ್ಲಿ ಏನು ಹೇಳುತ್ತೀರಿ? 1990-91ನೇ ಸಾಲಿನಲ್ಲಿ ನಿಮ್ಮ ವಾರ್ಷಿಕ ವರದಿಯಲ್ಲಿ 40ಸಾವಿರ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗದಿಪಡಿಸಲಾಗಿತ್ತು. ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದೀಕರಣವನ್ನು ತೀವ್ರಗೊಳಿಸುವ ಸಲುವಾಗಿ ಗುರಿಯನ್ನು 60 ಸಾವಿರಕ್ಕೆ ಹೆಚ್ಚಿಸಲಾಯಿತು. ಮತ್ತು 69, 607 ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುದ್ದೀಕರಿಸಿ ಹೊಸ ವಿಕ್ರಮವನ್ನು ಮಂಡಲಿ ಸಾಧಿಸಿದೆ ಎಂದು ಹೇಳಿದ್ದೀರಿ.

ಇದು ಎಂತಹ ವಿಕ್ರಮ ಸ್ವಾಮಿ? 69 ಸಾವಿರ ವಿಕ್ರಮಕ್ಕೆ ಯಾವ ಆಧಾರವೂ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು 78 ಸಾವಿರ ಪಂಪುಸೆಟ್ಟುಗಳಿಗೆ ಕೊಡುತ್ತೇವೆಂದು ಹೇಳುತ್ತಾರೆ. ನಿಮ್ಮ ಫಿಗರ್‍ಸ್‌ಗೂ ನಿಮ್ಮ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟೀಸ್‌ಗೂ ಏನು ಸಂಬಂಧ? ತಾವು ಏನು ಮಾಡಿದ್ದೀರಿ? ಟ್ರಾನ್ಸ್‌ಮಿಷನ್ ಲಾಸ್ ಎಷ್ಟು ಆಗಿದೆ, ಪವರ್ ಟ್ರಿಪ್ ಏನಾಗುತ್ತಿದೆ, ರೈತರು ಏತಕ್ಕೆ ದಿನ ಈ ಸಮಸ್ಯೆ ಎದುರಿಸುತ್ತಿದ್ದಾರೆ. ಎನ್ನುವ ಬಗ್ಗೆ ನಾನು ತಮ್ಮಿಂದ ವಿವರಗಳನ್ನು ನಿರೀಕ್ಷೆ ಮಾಡುತ್ತೇನೆ. ತಾವು ಏನು ಹೇಳಿದ್ದೀರಿ?

"1991-92ನೇ ಸಾಲಿನಲ್ಲಿ 300 ಉಪಗ್ರಾಮಗಳು, 600 ಹರಿಜನ ಬಸ್ತಿಗಳು, 50 ಗಿರಿಜನ ಕಾಲೋನಿಗಳಿಗೆ ವಿದ್ಯುದೀಕರಣಗೊಳಿಸಲು ಉದ್ದೇಶಿಸಲಾಗಿದೆ. 60 ಸಾವಿರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸುವ ಗುರಿಯನ್ನು ಹೊಂದಲಾಗಿದೆ. 20 ಸಾವಿರ ಫಲಾನುಭವಿಗಳಿಗೆ ಭಾಗ್ಯಜ್ಯೋತಿ ಅಡಿಯಲ್ಲಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು?"

ಇದೆಲ್ಲಾ ಏಕೆ? ಆಗದೇ ಇರುವುದು ಏಕೆ? ಕೈಲಾಗದೆ ಇರುವ ಕೆಲಸಕ್ಕೆ ಮೈ ಪರಚಿಕೊಂಡ ಎನ್ನುವ ಹಾಗೆ ಸುಮ್ಮನೆ ಪ್ರಸಿದ್ಧಿಗೆ ಇವೆಲ್ಲಾ ಏಕೆ? ತಾವು ನೇರವಾಗಿ ಎಲ್ಲವನ್ನೂ ಹೇಳಿ, ನಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇವೆ, ನಿಮ್ಮಲ್ಲಿ ಇರುವಂಥ ವಸ್ತುಸ್ಥಿತಿ ಇಷ್ಟು ಎಂದು ಹೇಳಿ. 42 ಸಾವಿರ ಪಂಪುಸೆಟ್ಟುಗಳಿಗಿಂತಾ ಹೆಚ್ಚು ಕೊಡುವುದಕ್ಕೆ ನಿಮ್ಮಲ್ಲಿ ಸಾಧನ ಇರಲಿಲ್ಲ, ಡಬಲ್ ಕೊಡುತ್ತೇವೆಂದು ಏನು ಪುಸ್ತಕದಲ್ಲಿ ಅಚ್ಚುಹಾಕಿದ್ದೀರಿ ಅದಕ್ಕೆ ಯಾವುದೇ ಅರ್ಥ ಇಲ್ಲ, ಬಹಳ ಮುಖ್ಯವಾದ ಒಂದೆರಡು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾದುದು ಇದೆ. ಇಲಾಖೆಯಲ್ಲಿ ಇವತ್ತು ಏನು ನಡೆಯುತ್ತಿದೆ? ಮೊನ್ನೆ ತಾ:: ಸಂಜೆವಾಣಿ ಪತ್ರಿಕೆಯಲ್ಲಿ "ವಿದ್ಯುತ್ ಮಂಡಳಿಯ ಅವ್ಯವಹಾರ,ಅಲ್ಲಿನ ಅಧ್ಯಕ್ಷರ ಬದಲಾವಣೆಗೆ ಆಗ್ರಹ"- ಎಂದು ಸುದ್ದಿ ಬಂತು. ಯಾರು ಇದನ್ನು ಮಾಡಿದ್ದು? ಯಾರು ಆಗ್ರಹ ಮಾಡಿದ್ದಾರೆ? "ಕರ್ನಾಟಕ ವಿದ್ಯುತ್ ಮಂಡಲಿಯಲ್ಲಿ ಭಾರಿ ಅವ್ಯವಹಾರ ನಡೆಯುತ್ತಾ ಇದ್ದು, ಮಂಡಲಿಯ ಅಧ್ಯಕ್ಷರಾದ ಪಿ. ನರಸಿಂಹಮೂರ್ತಿಯವರು ಕೂಡಲೇ ಮಂಡಲಿಯ ಅಧ್ಯಕ್ಷ ಸ್ಥಾನದಿಂದ ಬದಲಾವಣೆ ಮಾಡಬೇಕು ಎಂದು ಇದು ನಡೆದ ಕಾಂಗ್ರೆಸ್-ಐ ಶಾಸಕಾಂಗ ಪಕ್ಷದ ಸಭೆಯಲ್ಲಿ ಒತ್ತಾಯಿಸಿದರು". ಇದು ಒಂದು ಒಳ್ಳೆಯ ಕೆಲಸವನ್ನು

ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾಡಿದ್ದಾರೆ. ನಿಮ್ಮ ಶಾಸಕಾಂಗ ಪಕ್ಷದ ಸಬೆಯಲ್ಲಿ ಏನು ನಡೆಯುತ್ತದೋ ಬಿಡುತ್ತದೋ, ಒಟ್ಟಿನಲ್ಲಿ ಇದು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ, ಮಾನ್ಯ ಅಧ್ಯಕ್ಷರೆ, ಆಗ ಮುಖ್ಯ ಕಾರ್ಯದರ್ಶಿಗಳಾಗಿದ್ದ ಎಂ. ಶಂಕರನಾರಾಯಣ್‌ರವರನ್ನು ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ತೆಗೆದಾಗ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯವರು ಒಂದು ಇಂಟರ್‌ವ್ಯೂ ಮಾಡಿದೆ. ಅದು ಜನವರಿ 6, 1991 ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ. ಅದರಲ್ಲಿ ಏನು ಹೇಳುತ್ತಾರೆ ಅವರು? ಪತ್ರಿಕೆಯವರು ಒಂದು ಪ್ರಶ್ನೆ ಕೇಳುತ್ತಾರೆ. Why did you stoutly resist the transfer of officers like Mr. B.R. Prabhakar and G.K. Sangameshwar the then Managing Director of Mysore sales International Ltd, Marketing Agency for India.

ಅದಕ್ಕೆ ಅಂದಿನ ಮುಖ್ಯ ಕಾರ್ಯದರ್ಶಿಗಳಾಗಿದ್ದವರ ಉತ್ತರ ಹೀಗಿದೆ. Mr. B.R. Prabhakar is one of our outstanding officers. An officer of his calibre should have become an additional Secretary to Government of India.

ಶ್ರೀ ಎಂ. ರಾಮಪ್ಪ : ಇದರ ಬಗ್ಗೆ ಮಾತನಾಡಬೇಕಾದರೆ ತಾವು ಜನರಲ್ ಡಿಸ್‌ಕಷನ್‌ನಲ್ಲಿ ಮಾತನಾಡಬಾರದು. ಈಗ ಕೇಳಿಬಿಗೆ ಸಂಬಂಧಪಟ್ಟ ಹಾಗೆ ತಾವು ಮಾತನಾಡಿ. ಸುಮ್ಮನೇ ಎಲ್ಲವನ್ನೂ ತೆಗೆದುಕೊಂಡು ಬಂದು ಪ್ರಭಾಕರ್‌ರವರ ಬಗ್ಗೆ ಹಾಗೂ ಇನ್ನಿತರ ವಿಷಯದ ಬಗ್ಗೆ ಇಲ್ಲಿ ಈಗ ಹೇಳುವುದು ಬೇಡ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಏನು ಹೇಳುತ್ತೇನೆ ಎಂಬುದನ್ನು ತಾವು ಕೇಳಿ. ನಿಮಗೆ ಇದು ತಿಳಿಯದೇ ಇದ್ದರೆ ಹೇಗೆ? ತಾವು ಒಂದು ನಿಮಿಷ ಕುಳಿತುಕೊಳ್ಳಿ. ನಿಮಗೆ ಎಲ್ಲವೂ ಗೊತ್ತಾಗುತ್ತದೆ.

ಶ್ರೀ ಸಿ. ಬೈರೇಗೌಡ : ಅವರಿಗೆ ತೆಲುಗಿನಲ್ಲಿ ಹೇಳಿದರೆ ಗೊತ್ತಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕನ್ನಡ ಚೆನ್ನಾಗಿ ಮಾತನಾಡುತ್ತಾರೆ, ಅಷ್ಟಕ್ಕೆ ಪಾಪ ಅವರಿಗೆ ನಾವು ಅಭಾರಿಯಾಗಿರಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅದ್ಯಕ್ಷರೆ, ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಬಿ.ಆರ್. ಪ್ರಭಾಕರ್‌ರಾವ್ was the Chairman of your KEB ನಾನು ಈ ಸಭೆಯ ಸಮಯವನ್ನು ಹಾಳುಮಾಡಬೇಕೆಂದು ಇದನ್ನೆಲ್ಲಾ ಹೇಳುತ್ತಿಲ್ಲ. ಅವರು ಏನು ಹೇಳುತ್ತಾರೆ ಅಂದರೆ B.R. Prabhakar is one of the outstanding Officers. An officer of his calibre should have become an additional secretary to the Goverment of India. But for a tenure problem and empanellment both I and the then Chief Minister Sri Veerendra Patil felt that he should have been given a job of heading the Karnataka Electricity Board. One of the Karnatakas largest public undertakings Which has not been working too efficiently.

ಇದು ಬಹಳ ಮುಖ್ಯವಾದ ವಿಚಾರ. ವಿದ್ಯುಚ್ಛಕ್ತಿ ಇಲಾಖೆ ಎಫಿಸಿಯೆಂಟಾಗಿ ಕೆಲಸ ಮಾಡುತ್ತಿಲ್ಲ, ಆದ್ದರಿಂದ ಪ್ರಾಮಾಣಿಕವಾದ ಮತ್ತು ದಕ್ಷ ಅಧಿಕಾರಿಯನ್ನು ಹಾಕಬೇಕೆಂದು ಹೇಳಿ ಶ್ರೀಮಾನ್ ಪ್ರಭಾಕರರಾವ್ ಅವರನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲ್‌ರವರು ಮತ್ತು ಅಂದಿನ ಮುಖ್ಯ ಕಾರ್ಯದರ್ಶಿಯವರು ಆಯ್ಕೆ

ಮಾಡಿದ್ದಾರೆ. Prabhakar, was given his postings in September. He was transferred in the month of November, within two months.

ಹೇಗೆ ಮಾಡುತ್ತೀರಿ? ಆಮೇಲೆ ಏನು ಮಾಡಿದ್ದೀರಿ? ಇದು ಸರ್ಕಾರದ ಒಂದು ನೀತಿಯ ಪ್ರಶ್ನೆ. ಏನು ಆ ನೀತಿ? ಯಾವ ಅಧಿಕಾರಿ ರಿಟೈರ್ಡ್ ಆಗಿದ್ದಾರೆ, ನಿವೃತ್ತರಾದ ಅಧಿಕಾರಿಗಳಿಗೆ. ಎಕ್ಸ್‌ಟೆನ್ಷನ್ ಕೊಡುವುದಾಗಲೀ ಹೊಸ ಅಪಾಯಿಂಟ್‌ಮೆಂಟ್ ಕೊಡುವುದಕ್ಕಾಗುವುದಿಲ್ಲವೆಂದು ಜನರಲ್ ಆಗಿ ಅದು ಇಲ್ಲವೆಂದು ಮಾನ್ಯ ವೀರೇಂದ್ರ ಪಾಟೀಲ್‌ರವರು ಹೇಳಿದ್ದಾರೆ.

ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಇದನ್ನು ಹೇಳಿದ್ದರು. ಎರಡನೇಯದು ಕೆಇಬಿಗೆ ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಬೇಕಾದರೆ ಇನ್‌ಸರ್ವೀಸ್‌ನಲ್ಲಿರತಕ್ಕವರನ್ನು ನೇಮಕ ಮಾಡಬೇಕು. ಇನ್ ಸರ್ವೀಸ್‌ನಲ್ಲಿದ್ದವರು ವಿಶ್ವೇಶ್ವರಯ್ಯ ಎಂದು ಕಾಣುತ್ತದೆ, ಅಂತಹವರನ್ನು ಬಿಟ್ಟು ಅವರಿಗೆ ನಿವೃತ್ತರಾಗುವ ಸಮಯ ಮೂರು ತಿಂಗಳೋ ಆರು ತಿಂಗಳೋ ಸಮಯವಿತ್ತು, ಅಂತಹವರನ್ನು ಬಿಟ್ಟು ಇಲಾಖೆಯಲ್ಲಿ ಹೊಂದಿಕೊಳ್ಳತಕ್ಕ ಇಲಾಖೆಯಲ್ಲಿ ಜವಾಬ್ದಾರಿಯನ್ನು ಹೊರತಕ್ಕ ಸೀನಿಯರ್ ಅಧಿಕಾರಿಗಳು ಇಲ್ಲವೆನ್ನುವ ಕಾರಣಕ್ಕೆ ಐಎಎಸ್ ಅಧಿಕಾರಿ ಪ್ರಭಾಕರ್ ರಾವ್ ಅವರನ್ನು ತಂದಿರಿ. ಇದು ಕಾಂಗ್ರೆಸ್ ಸರ್ಕಾರ ಹೇಳುವಂತಹ ಮೂಲ ನೀತಿ. ಇದನ್ನು ನಾನು ಹೇಳಿದ್ದಲ್ಲ. ನೀವು ಹೇಳುವುದಕ್ಕೆ ಒಂದು, ತಿನ್ನುವುದಕ್ಕೆ ಮತ್ತೊಂದು. ಪುಸ್ತಕದ ಬದನೆಕಾಯಿ ತಿನ್ನುವುದಕ್ಕ ಬರುವುದಿಲ್ಲ ಎನ್ನುವುದು ನಮಗೆ ಈಗ ಗೊತ್ತಾಗುತ್ತಿದೆ. ಏನನ್ನು ಈ ಸದನದಲ್ಲಿ ಹೇಳಿದ್ದಾರೆ ಸದನದ ಹೊರಗೆ ಹೇಳಿದ್ದಾರೆ? ಕಾಂಗ್ರೆಸ್ ಸರ್ಕಾರ ನಿವೃತ್ತರಾದವರನ್ನು ಪುನರ್ ನೇಮಕ ಮಾಡುವುದಿಲ್ಲವೆಂದು ಅದರ ಜೊತೆಗೆ ಯಾವ ಅಧಿಕಾರಿಗಳಿಗೂ ಎಕ್ಸ್‌ಟೆನ್ಷನ್ ಕೊಡುವುದಿಲ್ಲವೆಂದು ಹೇಳಿದ್ದಾರೆ. ಆಮೇಲೆ ಇದೇ ಸರ್ಕಾರದಲ್ಲಿ ಮುಖ್ಯಮಂತ್ರಿಗಳ, ಬದಲಾವಣೆ, ಆದತಕ್ಷಣ ಏನು ಮಾಡುತ್ತೀರಿ? ನರಸಿಂಹಮೂರ್ತಿ ಚೀಫ್ ಇಂಜಿನಿಯರ್ (ಜನರಲ್) ಅವರು ರಿಟೈರ್ಡ್ ಆಗಿದ್ದಂತಹ. ನಿವೃತ್ತರಾಗಿದ್ದವರನ್ನು, ತೆಗೆದುಕೊಂಡು ಬಂದು ಇವತ್ತು ಕೆಇಬಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅಂತಹ ವಿಶೇಷವೇನು? ಯಾವ ಗುಣಲಕ್ಷಣಗಳನ್ನು ಅವರಲ್ಲಿ ಕಂಡಿರಿ? ನನಗೆ ಕಾಣುತ್ತವೆ, ಇಲ್ಲಿ ಯಾರನ್ನೇ ಆಯ್ಕೆ ಮಾಡಿಕೊಳ್ಳಬೇಕಾದರೂ ಅವರಲ್ಲಿ ಯಾವುದಾದರೂ ಒಂದು ದೋಷವಿರಲೇಬೇಕು. ಅದು ಚೀಫ್ ಸೆಕ್ರೆಟರಿಯವರ ಆಯ್ಕೆ ಇರಲಿ, ಬೇರೆ ಬೇರೆ ಇಲಾಖೆಗಳಲ್ಲಿ ಯಾವುದೇ ಇರಲಿ, ನಾನು ಅದರ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಪುನಃ ಹೇಳುತ್ತಿದ್ದೇನೆ, ನಮ್ಮ ಲೋಕೋಪಯೋಗಿ ಇಲಾಖೆಯ ಸೆಕ್ರೆಟರಿ-2 ಅವರ ಬಗ್ಗೆ ಏನು ದೂರುಗಳಿವೆ, ಅವರನ್ನು ಇಲ್ಲಿ ಏತಕ್ಕೆ ತಂದಿರಿ ಎನ್ನುವುದನ್ನು ನಾನು ನಿನ್ನೆ ಹೇಳಿದ್ದೇನೆ. ನನ್ನ ಮಾಹಿತಿ ಪ್ರಕಾರ ಅವರ ಮೇಲೆ ಲೋಕಾಯುಕ್ತದಲ್ಲಿ ಕೇಸುಗಳು ಪೆಂಡಿಂಗ್‌ನಲ್ಲಿದ್ದವು. ಅದು ಏನಾಯಿತೋ ವಿಚಾರಣೆ ಆಯಿತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ, ಯಾರ್‍ಯಾರು ತನ್ನ ಮಾರ್ಗಕ್ಕೆ ಅಡ್ಡಿ ಬರುತ್ತಾರೆ ಅಂತಹವರನ್ನೆಲ್ಲ ಒಂದು ಜಾಗಕ್ಕೆ ಸರಿಸಿ ಇಂತಹ ಕೀರ್ತಿ ಇರತಕ್ಕವರನ್ನು ಏತಕ್ಕೆ ಮೇಲ್ದರ್ಜೆಯ ಹುದ್ದೆಗಳಿಗೆ ತರುತ್ತೀರಿ? ಅವರ ಉದ್ದೇಶವೇನು? ಉದ್ದೇಶ ಏನೆಂಬುದರ ಬಗ್ಗೆ ನನ್ನ ಪತ್ರಿಕೆ ಮಾಹಿತಿಗಳು ಇವೆ, ಅದನ್ನು ತಮಗೆ ಕೊಡುತ್ತೇನೆ, ತಾವು ಪರಿಶೀಲನೆ ಮಾಡಿ. ಇವತ್ತು ಏನಾಗಿದೆ, ನಮ್ಮ ರಾಜ್ಯದಲ್ಲಿ ವಾರ್ಷಿಕವಾಗಿ ಕೆಇಬಿಗೆ ಬೇಕಾಗಿರತಕ್ಕ ಕಂಡಕ್ಟರುಗಳು ಇರಬಹುದು, ಟ್ರಾನ್ಸ್‌ಮಿಷನ್, ಟವರ್ಸ್ ಇರಬಹುದು. ಅದು ಏನೋ ತ್ರಿಶೂಲಗಳು ಕೆಲವು ಪಾರ್ಟ್ಸ್‌ಗಳು ಅವುಗಳು ಇರಬಹುದು ಅವುಗಳನ್ನು ಖರೀದಿ

ಮಾಡುವುದಕ್ಕೆ ಒಂದು ಪರ್ಚೇಸ್ ಕಮಿಟಿಯೆಂದು ಇದೆ. ಆ ಕಮಿಟಿಯ ಅಗತ್ಯತೆ ಏನು? ಪೂರೈಕೆ ಎಷ್ಟಾಗಬೇಕೆಂಬುದನ್ನು ಆ ಕಮಿಟಿಯವರು ನಿರ್ಧಾರ ಮಾಡುವುದು.

ಆ ಕಮಿಟಿಯ ನಿರ್ಧಾರ ಏನೆಂದು ಸುಮಾರಾಗಿ ನಾನು ಕಳೆದ ಎರಡು-ಮೂರು ವರ್ಷದ್ದು ನೋಡಿದ್ದೇನೆ. 90 ರಿಂದ 95 ಕೋಟಿವರೆಗೆ ಅಥವಾ ಹೆಚ್ಚೆಂದರೆ ನೂರು ಕೋಟಿವರೆಗೆ, ಒಂದು ವರ್ಷಕ್ಕೆ ಬೇಕಾಗಿರತಕ್ಕಂಥ ಸಾಮಗ್ರಿಗಳನ್ನು ಈ ಇಲಾಖೆ ಕೊಳ್ಳುತ್ತದೆ. ಈ ವರ್ಷ ಮುನ್ನೂರು ಕೋಟಿ ರೂಪಾಯಿಗಳಷ್ಟು ಕೊಂಡಿದ್ದಾರೆ ಅಂತ ಹೇಳಿ ನನ್ನ ಹತ್ತಿರ ಮಾಹಿತಿ ಇದೆ. ಮೂರು ವರ್ಷಗಳಿಗೆ ಬೇಕಾದಂತ ಕಂಡಕ್ಟರ್ಸ್, ಟ್ರಾನ್ಸ್‌ಫಾರ್ಮರ್ಸ್‌ನ್ನು ಕೊಂಡಿಲ್ಲ ಎನ್ನುವುದಾದರೆ ತಾವು ದಯವಿಟ್ಟು ಮಾಹಿತಿ ಕೊಡಿ. ಮಂತ್ರಿಗಳು ಇದ್ದಾರಲ್ಲ, ಕೊಂಡಿದ್ದರೆ ಯಾವ ರೀತಿ ಕೊಂಡಿದ್ದಾರೆ ಎಂದು ತಮಗೆ ನಾನು ಹೇಳುತ್ತೇನೆ ಇದು ತ್ರಿಶೂಲಗಳು ಅಂತ ಹೇಳಿದೆ. ಎಲ್ಲೆಲ್ಲಿ ಆರ್ಡರ್ ಕೊಟ್ಟರು ಅಂತ ಅದರ ನಕಲುಗಳು ಇವೆ. ತಮ್ಮ ಹತ್ತಿರ ಇಲ್ಲದಿದ್ದರೆ ಅವುಗಳನ್ನು ನಾನು ಕಳಿಸಿಕೊಡುತ್ತೇನೆ. ತಮ್ಮ ಹತ್ತಿರ ಇದ್ದರೆ ನಾನು ಓದುವುದಕ್ಕೆ ಹೋಗುವುದಿಲ್ಲ, ಅನೇಕ ಜನ there are various manufacturers ಆ ಮಾನ್ಯುಫ್ಯಾಕ್ಚರರ್ಸ್‌ಗೆಲ್ಲ ಟೆಂಡರ್ಸ್ ಕರೆಯುತ್ತಾರೆ. ಕಡಿಮೆ ದರ ಇರುವವನಿಗೆ ಕ್ವಾಲಿಟಿ ನೋಡಿಕೊಂಡು ಟೆಂಡರನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತಾರೆ. ಬಿಐಬಿಸಿ ಕೆಇಬಿ 2066/90-91ಇದರಲ್ಲಿ ಈ ತ್ರಿಶೂಲಗಳನ್ನು ಪರ್ಚೇಸ್ ಮಾಡುವುದಕ್ಕೆ ಒಂದು ಲೆಟರ್ ಆಫ್ ಇಂಡೆಂಟ್‌ನ್ನು 90ನೇ ಇಸವಿಯ ಏಪ್ರಿಲ್ ತಿಂಗಳಲ್ಲಿ ಕೊಡುತ್ತಾರೆ. ಬೇರೆ ಬೇರೆ ಮ್ಯಾನುಫಾಕ್ಚರರ್ಸ್ ಅರ್ಜಿಗಳನ್ನು ದಾಖಲು ಮಾಡುತ್ತಾರೆ. Subsequently all the letter of intents were withdrawn and the above tender,\it is cancelled. On the adhoc basis exclusive purchas orders issued without any enquiry about the prices but higher than the price quoted by the lowest tender. Please get the matter examined.

ಕೊನೆಯವನು ಏನು ಕಡಿಮೆ ದರ ಕೊಟ್ಟಿದ್ದಾನೋ, ಅವನಿಗಿಂತ ಹೆಚ್ಚು ದರ ಯಾರು ಕೋಟ್ ಮಾಡುತ್ತಾರೆ ಅವನಿಗೆ ಇದನ್ನು ನಿಗದಿ ಮಾಡುತ್ತಾರೆ. If I am wrong, I am always subject to correction.

ಶ್ರೀಮತಿ ನರಸಿಂಹಮೂರ್ತಿಯವರು ಫ್ರಾನ್ಸ್ ದೇಶಕ್ಕೆ ವಿದೇಶ ಪ್ರವಾಸ ಹೋಗುತ್ತಾರೆ ಅದಕ್ಕೆ ಬೇಕಾಗಿರತಕ್ಕಂಥ ವಿದೇಶಿ ವಿನಿಮಯ ಮತ್ತು ಟಿಕೇಟುಗಳನ್ನು ಯಾರುಕೊಂಡರು? ದಯಮಾಡಿ, ಈ ಸದನಕ್ಕೆ ನೀವು ತಿಳಿಸಬೇಕು. ಅಲ್ಲಿ ಭರತ್‌ಲಾಲ್ ಮೀನಾ ಅಂತ ಹೇಳಿ. ಐ.ಎ.ಎಸ್. ಅಧಿಕಾರಿಗಳು ಸೆಕ್ರಟರಿ, ಇದಕ್ಕೆ ಒಪ್ಪಿಕೊಂಡಿಲ್ಲ ಅಂತ ಹೇಳಿ ನಿಮ್ಮ ಅಧ್ಯಕ್ಷರು ಏನು ಹೇಳುತ್ತಾರೆ? ಇದಕ್ಕೆ ಒಪ್ಪದೇ ಇದ್ದರ ನೀವು ಈ ಇಲಾಖೆಯಲ್ಲಿ ಇರುವುದಕ್ಕೆ ಕೊಡುವುದಿಲ್ಲ, ಎಂಟೇ ದಿವಸಕ್ಕೆ ಅವರ ವರ್ಗಾವಣೆ ಆಗುತ್ತದೆ. 80 ಲಕ್ಷ ರೂಪಾಯಿಗಳ ತ್ರಿಶೂಲಗಳು ಡೀಲ್ ಆಗುತ್ತದ. ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತೇನೆ. ಈ ವ್ಯವಹಾರಗಳನ್ನು ಕುದುರಿಸತಕ್ಕಂಥ ಒಬ್ಬರು ಶ್ರೀ ಎಸ್.ಡಿ. ಪಟೇಲ್ ಎನ್ನುವವರು ಇದ್ದಾರೆ. ಛೇರ್ಮನ್ ನರಸಿಂಹಮೂರ್ತಿಗಳು ಪಟೇಲರ ಮನೆಗೆ ಇವರು ಯಾರು ಎಂದರೆ ಕಂಡಕ್ಟರ್ಸ್ ಮಾನ್ಯೂಫಾಕ್ಚರ್ ಮಾಡತಕ್ಕಂಥ ಅಸೋಸಿಯೇಷನ್ನಿನ ಸದಸ್ಯ ಸಿಕೆಡಿ-6732 ಅಧಿಕೃತ ಮಾರುತಿ ಕಾರಿನಲ್ಲಿ ಸಪ್ಟೆಂಬರ್ 1ನೇ ತಾರಿಖು ಬೆಳಿಗ್ಗೆ ಅಲ್ಲಿರುತ್ತಾರೆ ಅವರು. ಕೆ.ಇ.ಬಿ.ಗೆ ಸಂಬಂಧಪಟ್ಟಂಥ ಸಿಕೆಡಿ-6732 ಮಾರುತಿಕಾರಿಗೆ ಈ ಕಂಪೆನಿಯ ಎಸ್.ಡಿ. ಪಟೇಲರ್ ಮನೆಯಲ್ಲಿ ಕೆಲಸ ಏನು? ಇದರ ಜೊತೆಗೆ ಇನ್ನೊಂದು ಕಾರು ನಂಬರನ್ನು ನೋಟ್ ಮಾಡಿಕೊಳ್ಳಿ.

ಕೆವಿ-2. ಎಂ. 691 ಮಾರುತಿ. ಬೆಳಗಿನ ಜಾವ 5.45ರ ಸಮಯ. ನಾವೆಲ್ಲರೂ ವಾಕ್ ಮಾಡತಕ್ಕ ಸಮಯದಲ್ಲಿ ಆ ಗಾಡಿ ಅಲ್ಲಿ ನಿಕ್ಕೆ ಇತ್ತು. ಅಂದರೆ, ಯಾರು ಈ ಇಲಾಖೆಯಲ್ಲಿ ನಷ್ಟ ಮಾಡತಕ್ಕಂಥವರು ಇದ್ದಾರೆ. ಅವರ ಮನೆಗೆ ಅಧ್ಯಕ್ಷರು ಹೋಗಿ ವ್ಯವಹಾರ ಕುದುರಿಸತಕ್ಕ ಸ್ಥಿತಿಗೆ ಬಂದರೆ, ನಿಮ್ಮ ಕೆ.ಇ.ಬಿ. ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ತಮ್ಮ ಮೂಲಕ ಸದನದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

Patel is the Representative of S.A.E. a firm making the Transmission lines and Towers. 18 ಕೋಟಿ ರೂಪಾಯಿ ಆರ್ಡರನ್ನು ಪ್ಲೇಸ್ ಮಾಡಿದ್ದಾರೆ. ನನಗೆ ಗೊತ್ತಿಲ್ಲ. ಸರಿಸುಮಾರು 36ಲಕ್ಷ ರೂಪಾಯಿವರೆಗೆ ಇದರಲ್ಲಿ ಕಮೀಷನ್ ನಿಗದಿಯಾಗಿದೆ ಎನ್ನುವುದು ತಿಳಿದು ಬಂದಿದೆ. ನೀವು ದಯವಿಟ್ಟು ತನಿಖೆ ಮಾಡಿಸಿ. ಇದನ್ನು ಸಿ.ಬಿ.ಐ.ಗೆ ಒಪ್ಪಿಸಿ ನಾನು ಬೇಕಾದರೆ ಮಾಹಿತಿಯನ್ನು ಕೊಡುತ್ತೇನೆ. ಒಪ್ಪಿಸದೇ ಇದ್ದರೆ ಈ ಕರ್ಮಕಾಂಡವನ್ನು ಒಪ್ಪಿ, ಸರಿಯಾದವರನ್ನು ನೇಮಿಸಿ ಇಡೀ ರೈತ ಸಮುದಾಯ ಕೆ.ಇ.ಬಿ. ಇಲಾಖೆಯ ಈ ಪತೋಟ ಇದೆಯಲ್ಲ ಈ ಒಂದು ಅನಧಿಕೃತವಾದ ಯಜಮಾನಿಕೆಯ ಪತೋಟೆಯಿಂದ ತಪ್ಪಿಸಿ. ಮಾನ್ಯ ಅಧ್ಯಕ್ಷರೇ ವಾರ್ಷಿಕವಾಗಿ ಒಂದು ಅನಧಿಕೃತವಾದ ಮೂಲಗಳಿಂದ ಒಬ್ಬ ವೆಲ್‌ವಿಷರ್ ಒಂದು ಪತ್ರವನ್ನು ನನಗೆ ಬರೆಯುತ್ತಾರೆ. ಅವರ ಪತ್ರ ಎಷ್ಟರಮಟ್ಟಿಗೆ ನಿಜವೋ ಏನೋ ಆದರೆ ನನಗೆ ಬಂದಿರುವ ಕೆಲವು ಭಾಗಗಳನ್ನು ಓದುತ್ತೇನೆ. ಎಲ್ಲವನ್ನೂ ಓದಿದರೆ ನಿಮಗೆ ಅರ್ಥವಾಗದೇ ಇರಬಹುದು.

3.35 ಪಿ.ಎಂ.

(ಗೊಂದಲ)

ಅಧ್ಯಕ್ಷರು : (ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು : ಆರ್ಡರ್, ಆರ್ಡರ್, ಆರ್ಡರ್.... ಪ್ಲೀಸ್... ದಯವಿಟ್ಟು ಕುಳಿತುಕೊಳ್ಳಿ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

Sri H. Ekanthaiah : You address the Chair....

ಶ್ರೀ ಬಿ.ಹೆಚ್. ಬನ್ನಿಕೋಡ್ : ವಿರೋಧ ಪಕ್ಷದನವರನ್ನು ಹೆದರಿಸುತ್ತಿದ್ದಾರೆ....

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು ನಾನು ಏನಾಯಿತು ಎಂದು ಅರ್ಥ ಮಾಡಿಕೊಳ್ಳಬೇಕಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತಿದ್ದೆ.

(ಗೊಂದಲ)

ಅಧ್ಯಕ್ಷರು : ನಿಯಮಗಳ ಚೌಕಟ್ಟಿನಲ್ಲಿ ಒಬ್ಬ ಸದಸ್ಯರು ಇನ್ನೊಬ್ಬ ಸನ್ಮಾನ್ಯ ಸದಸ್ಯರ ಮೇಲೆ ಈ ರೀತಿಯ ಯಾವುದೇ ರೀತಿಯಲ್ಲಿ ವೈಯಕ್ತಿಕವಾಗಿ ಅವರ

ಚಾರಿತ್ರ್ಯಕ್ಕೆ ಸಂಬಂಧಪಟ್ಟ ವಿಚಾರವನ್ನು ಸಭೆಯ ಮುಂದೆ ಹೇಳಬೇಕಾದಂತಹ ಅನಿವಾರ್ಯವಾದ ಪರಿಸ್ಥಿತಿ ಬಂದರೆ ಅದಕ್ಕೆ ಈ ಸಭೆಯ ರೂಲ್ಸ್‌ನಲ್ಲಿ ಅವಕಾಶ ಉಂಟು. ಮೊದಲು ಸಭಾಧ್ಯಕ್ಷರಿಗೆ ಬರೆದು ಕೊಡಬೇಕು. ನಾನು ಇಂತಹ ಮಾನ್ಯ ಸದಸ್ಯರ ಬಗ್ಗೆ ಇಂತಹ ವಿಚಾರದ ಬಗ್ಗೆ ಈ ರೀತಿ ಪ್ರಸ್ತಾಪ ಮಾಡುತ್ತಿದ್ದೇನೆ ಹಾಗೆ ಅಂತ ಹೇಳಿ ಆನಂತರ ನಾನು ಸಂಬಂಧಪಟ್ಟ ಸದಸ್ಯರಿಗೆ ಅದನ್ನು ಕಳುಹಿಸಿ ನಿಮ್ಮ ವಿಚಾರದಲ್ಲಿ ಈ ರೀತಿ ಪತ್ರ ಬಂದಿದೆ. ನೀವು ಅದಕ್ಕೆ ರೆಡಿಯಾಗಬೇಕು ಎಂದು ತಿಳಿಸುತ್ತೇನೆ. ಆದರೆ ಮಾನ್ಯ ಸದಸ್ಯರು ಯಾರೂ ಇದುವರೆಗೂ ನನಗೆ ಪತ್ರ ಕೊಟ್ಟಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸಭೆಯ ನಡವಳಿಕೆಗಳು ಏನೇನು ನಡೆದಿದೆ ಅವೆಲ್ಲವನ್ನೂ ಕೂಡ ನಾನು ಸಭೆಯ ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೇ ನೋ ನೋ ....

Mr. Speaker : When it is not part of the Proceedings of this House...

Shri D.B. Chandre Gowda : Let me say.

Mr. Speaker : You might have your say.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ತಮ್ಮಿಂದ ಏನು ಅಪೇಕ್ಷೆ ಮಾಡುತ್ತೇನೆಂದರೆ ನಾನು ಇಲ್ಲಿ ವೈಯಕ್ತಿಕವಾಗಿ ಯಾರ ಮೇಲೂ ಚಾರ್ಜ್ ಮಾಡಿಲ್ಲ.

Shri T.M. Manjunath : You have made allegations against the Chief Minister.

Mr. Speaker : If there is an allegation against the Chief Minister I will also look into that. If any member wants to make allegations against the Chief Minister in his personal capacity, he has to give some kind of notice to me which I will pass it on to the Chief Minister.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಬಗ್ಗೆ ನಾನು ಏನು ಹೇಳುತ್ತಿದ್ದೆ ಅಂದರೆ ಇಂತಹ ಅನಾಮಧೇಯ ಪತ್ರಗಳು ಬರುತ್ತಿವೆ. ನೀವು ಇಲ್ಲಿ ಇಟ್ಟುಕೊಂಡಿರುವ ಅಧಿಕಾರಿಗಳು ಮಾಡಿರತಕ್ಕಂತ ಅಪರಾಧಗಳಿಂದ ಈ ಅಪಾದನೆಗೆ ನೀವೇತಕ್ಕೆ ಗುರಿಯಾಗುತ್ತೀರಿ ಅಂತ ಹೇಳುತ್ತಿದ್ದೆ. ಈ ಅಧಿಕಾರಿಗಳು ಏನಿದ್ದಾರೆ ಈ ಅಧಿಕಾರಿಗಳು ಮಾಡಿರತಕ್ಕಂಥ Please hear me Mr. Thimmappa, I am also equally senior as you are and as responsible as you are.

(Interruptions)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ ಸದನದಲ್ಲಿ ಸೀನಿಯರ್ ಮೆಂಬರ್ ಜೂನಿಯರ್ ಮೆಂಬರ್‌ಗೂ ಏನಾದರೂ ವ್ಯತ್ಯಾಸ ಇದೆಯೇ? ಹಾಗಿದ್ದರೆ ಹೇಳಿ ನಾವು ಒಂದೆ ಹೋಗಿ ಕೂಡುತ್ತೇವೆ.

ಅಧ್ಯಕ್ಷರು : ಈ ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರು ಸಮಾನರು.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಬಹಳ ಕಷ್ಟಪಟ್ಟು ಹಿಂದಿನಿಂದ ಮುಂದೆ ಬಂದಿದ್ದಾರೆ. ಈಗ ಅವರನ್ನು ಹಿಂದಕ್ಕೆ ಕಳುಹಿಸಬೇಕೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು ನಾನು ಬಹಳ ಕಷ್ಟಪಟ್ಟು ಮುಂದೆ ಬಂದಿದ್ದೇನೆಂದು. ನಾನು ಕಷ್ಟಪಟ್ಟು ಮುಂದೆ ಬಂದಿಲ್ಲ, ಅವರಿಗೂ ಗೊತ್ತಿದೆ. ನಾನು ಕಷ್ಟಪಟ್ಟು ಮುಂದೆ ಬರುವ ಅಭ್ಯಾಸ ಇಲ್ಲ. ದಯಮಾಡಿ ಅವರು ಮಾತನಾಡುವಾಗ ಸ್ವಲ್ಪ ಆಲೋಚನೆ ಮಾಡಿ ಮಾತನಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಇನ್ನೂ ಮುಂದೆ ಬನ್ನಿ ಪರವಾಗಿಲ್ಲ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನೀವು ಈ ರೀತಿ ಅಪೇಕ್ಷೆ ಪಟ್ಟು ಇವತ್ತು ಅಲ್ಲಿ ಬಂದು ಕೂತಿದ್ದೀರಿ. ಅದನ್ನು ತಾವ್ಯಾರು ಮರೆಯಬೇಡಿ.

ಅಧ್ಯಕ್ಷರು : ಈ ಸದನದಲ್ಲಿ ಸೀನಿಯರ್ ಮೆಂಬರ್ಸ್ ಎಂದು ಇಲ್ಲ ಜೂನಿಯರ್ ಮೆಂಬರ್ಸ್ ಎಂದು ಇಲ್ಲ ಆದರೆ ಕೆಲವು ವಡೋತಿ ಸದಸ್ಯರು ಇದ್ದಾರೆ. ಅವರ ತೂಕದ ಆಧಾರದ ಮೇಲೆ .

ಶ್ರೀ ಡಿ.ಬಿ. ಚಂದ್ರೇಗೌಡ : ಕಾಗೋಡು ತಿಮ್ಮಪ್ಪನವರಿಗೆ ಕೋಪ ಏತಕ್ಕೆ ಬಂತೋ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಕೋಪದಿಂದ ಮಾತನಾಡುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ನನಗೆ ಒಂದು ಅನಧಿಕೃತ ಪತ್ರ ಬಂದಿದೆಯೆಂದು ಹೇಳಿದರು.

ಅಧ್ಯಕ್ಷರು : ಅನಾಮಧೇಯ ಪತ್ರ.

ಶ್ರೀ ಕಾಗೋಡು ತಿಮ್ಮಪ್ಪ : ಅನಾಮಧೇಯ ಪತ್ರ ಬಂದಿದೆಯೆಂದು ಹೇಳಿ ಅದನ್ನು ಓದುವುದಕ್ಕೆ ಪ್ರಾರಂಭ ಮಾಡಿದರು. ಆಗ ನಾನು ಏನು ಹೇಳಿದೆ ಎಂದರೆ, ಆಧಾರ ಇಲ್ಲವೆ ಇಲ್ಲ ಜವಾಬ್ದಾರಿಯಾಗುತ್ತದೆ. ಯಾವ್ಯಾವುದೋ ಬರುತ್ತೆ.....

Mr. Speaker : Right Absolutely correct.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲವೆಂದರೆ ಅನಾಮಧೇಯ ಮಾಡಿ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ಬಂದಿದ ಎಂದರೆ ಸರ್ಕಾರಕ್ಕೆ ಅದನ್ನು ತಾವು ಕಳುಹಿಸಿಕೊಟ್ಟರೆ ಅದನ್ನು ವಿಚಾರಣೆ ಮಾಡುತ್ತಾರೆ ಅದಕ್ಕೋಸ್ಕರ I raised a point of order. That is all objection. ನೀವು ಆಪಾದನೆ ಮಾಡುವುದಕ್ಕೆ ಅಧಿಕಾರ ಇದೆ.

Sri D.E. Chandre Gowda : My reference to the letter, the context is totally different

ಶ್ರೀ ಪಿ.ಜಿ.ಆರ್. ಏಕಾಂತಯ್ಯ : ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಭ್ರಷ್ಟಾಚಾರ ಇದೆ ಎಂಬ ಮಾತನ್ನು ಹೇಳುವುದಕ್ಕೆ ನಾವು ಯಾರ ಪರವಾನಿಗೆಯನ್ನೂ ಪಡೆಯಬೇಕಾಗಿಲ್ಲ. ಸನ್ಮಾನ್ಯ ಅಧ್ಯಕ್ಷರೆ ಇವತ್ತಿನ ದಿವಸ ನಾನು ಸರ್ಕಾರದ ವಿರುದ್ಧವಾಗಿ ಆರೋಪ ಮಾಡುತ್ತಿದ್ದವರೆ ನಾವು ಪ್ರತಿಯೊಂದನ್ನೂ ರುಜುವಾತು ಮಾಡಬೇಕಾಗಿಲ್ಲ. ಆದರೆ ಸಂದರ್ಭ ಸಾಕ್ಷಿಗಳನ್ನು ಹೇಳುವುದಕ್ಕೆ ನಮಗೆ ಅನುಮತಿ ಇದೆ. ಪ್ರತಿಯೊಂದನ್ನೂ, ಅವರು ಹಣ ತೆಗೆದುಕೊಂಡರೆಂದು ಅದನ್ನು ಪ್ರೂಫ್ ಮಾಡುವ ಅವಶ್ಯಕತೆ ಇಲ್ಲ. ಆದರೆ ಅವರ ನಡುವಳಿಕೆ ಏನಿದೆ ಅಥವಾ ಸರ್ಕಾರದ ಕಾರ್ಯನಿರ್ವಹಣೆ ಏನಿದೆ ಆ ಕಾರ್ಯನಿರ್ವಹಣೆ ಬಗ್ಗೆ ಸಂದರ್ಭ ಸಾಕ್ಷಿಗಳ ಮುಖಾಂತರ ಹೇಳಿದರೆ ತಪ್ಪೇ?

ಅಧ್ಯಕ್ಷರು : ಕಾರ್ಯ ನಡವಳಿಕೆಗಳ ಬಗ್ಗೆ ನೀವು ಟೀಕೆ ಮಾಡಬಹುದು.

Sri H. Ekanthaiah : What are the circumstances?

ಕಾನೂನಿಗೆ ವಿರುದ್ಧವಾಗಿದೆ. ಸದುದ್ದೇಶ ಇದರಲ್ಲಿ ಕಾಣುತ್ತಿಲ್ಲ. ಸ್ವಜನಪಕ್ಷಪಾತ ಮಾಡಿದ್ದಾರೆಂದು ಹೇಳುವುದರಲ್ಲಿ ತಪ್ಪೇನು?

ಅಧ್ಯಕ್ಷರು : ಅದು ಹೇಳಿ.

ಶ್ರೀ ಹೆಚ್. ಏಕಾಂತಯ್ಯ : ಅದಕ್ಕೆ ಏನಾದರೂ ರುಜುವಾತು ಮಾಡಬೇಕಾ?

ಶ್ರೀ ಕಾಗೋಡು ತಿಮ್ಮಪ್ಪ : ಅದನ್ನು ಹೇಳ್ರಿ.

ಅಧ್ಯಕ್ಷರು : ಏನೋ ಮಂಜುನಾಥ್‌ರವರು ಹೇಳುವುದಕ್ಕೆ ಬಹಳ ಕಷ್ಟಪಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ಪ್ರತಿಯೊಂದು ಮಾತು ಎತ್ತಿದಾಗ, ಕಾಗೋಡು ತಿಮ್ಮಪ್ಪ ಡಾಕ್ಯುಮೆಂಟ್ ಎಲ್ಲಿ? ಡಾಕ್ಯುಮೆಂಟ್ಸ್ ಎಲ್ಲಿ ಎಂದು ಹಿಡಿದುಕೊಂಡು ಬಿಡುತ್ತಾರೆ. ತಿಮ್ಮಪ್ಪನವರದು ಬಹಳ ಕಷ್ಟವಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ಕರೆಂಟಿನ ಮಂತ್ರಿಗಳು ಏನೋ ಬಾಯಿ ಬಿಟ್ಟರು ಸ್ವಲ್ಪ ಕೇಳೋಣ.

ಶ್ರೀ ಎಂ. ರಾಮಪ್ಪ : ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ತಾವು ಗ್ರ್ಯಾನೈಟ್ ವಿಷಯ ಸಹ ಹೇಳುತ್ತೀರಿ. ಇದೇನು ಹೊಸ ವಿಚಾರವಲ್ಲ. ಅವರು ಡಾಕ್ಯುಮೆಂಟ್ಸ್ ತೋರಿಸಿ ಎಂದು ಕೇಳಿದರೆ ಅದು ತಪ್ಪಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಿಮ್ಮಪ್ಪನವರು ನಿಮ್ಮ ಮಾತನ್ನು ಒಪ್ಪುವುದಿಲ್ಲ. ಗ್ರ್ಯಾನೈಟ್‌ದು ಹೊಸ ವಿಚಾರವೆಂದು ಅವರು ಹೇಳುವುದಿಲ್ಲ. ಗ್ರ್ಯಾನೈಟ್ ಬಗ್ಗೆ ತಿಮ್ಮಪ್ಪನವರಿಗೆ ಗೊತ್ತಿದೆ. ನಿಮ್ಮ ಮಾತು ಅವರು ಒಪ್ಪುವುದಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ ಖಾತೆ ರಾಜ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ ನಮ್ಮ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಬಹಳ ಅನುಭವಿಗಳು. ನಾನು ಹೇಳಬೇಕಾದ್ದು ಏನೂ ಇಲ್ಲ. ಆದರೆ ಇವತ್ತು ಅವರು ಏನು ಕಾರ್ಯ ಮಾಡಿದ್ದಾರೆ? ಎಲ್ಲರ ಮನಸ್ಸಿಗೂ ನೋವನ್ನು ತಂದಿದ್ದಾರೆ. ಅವರು ಸರ್ಕಾರವನ್ನು ಟೀಕೆ ಮಾಡಬೇಕಾದರೆ ಸರ್ಕಾರದ ತಪ್ಪುನೆಪ್ಪುಗಳನ್ನು ಎತ್ತಿಹಿಡಿಯಬೇಕಾಗಿದ್ದರೆ ಒಂದು ಮಟ್ಟ ಇದೆ. ಅವರು ಸ್ಟೇಟ್‌ಮೆಂಟ್ ಕೊಡುತ್ತಾ ಏನು ಹೇಳಿದರು? ಯಾರೋ ನಮ್ಮ ಕೆ.ಇ.ಬಿ. ಛೇರ್ಮನ್‌ರು ಇಂಥವರ ಕಾರಿನಲ್ಲಿ ಹೋದರು. ಅವರಿಗಾಗಿ ಇಷ್ಟು ಹಣ ಶೇಖರಣೆಯಾಗಿದೆ ಮತ್ತು ನಮ್ಮ ಮುಖ್ಯ ಮಂತ್ರಿಗಳಿಗೆ ಈ ರೀತಿ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆಂದು ಕಾಗದ ಬಂದಿದೆಯೆಂದು ಹೇಳಿ ಆಪಾದನೆ ಮಾಡಬೇಕಾದರೆ ಈ ಸದನದಲ್ಲಿ ಏನಾಗುತ್ತೆ ಅಧ್ಯಕ್ಷರೆ, ಇಲ್ಲಿ ಪತ್ರಿಕಾ ವರದಿಗಾರರಿದ್ದಾರೆ.

ತಪ್ಪು ನೆಪ್ಪುಗಳು ಗೊತ್ತಿಲ್ಲ. ಪತ್ರಿಕೆಗಳಲ್ಲಿ ಅವು ಬರುತ್ತವೆ. ಬಂದಂಥ ಕಾಲದಲ್ಲಿ ಅದು ನಿಜ. ಸತ್ಯ ಅನ್ನತಕ್ಕಂಥ ವಿಮರ್ಶೆ ಮಾಡತಕ್ಕಂಥ ಮಧ್ಯ ಕಾಲದಲ್ಲಿ ಸರ್ಕಾರ ನಡೆಸತಕ್ಕಂಥವರ ಬಗ್ಗೆ ಜನಗಳ ಮನಸ್ಸಿಗೆ ಭಾವನೆ ಏನು ಬರುತ್ತದೆ ಎಂಬ ಅರಿವು ಸ್ವಲ್ಪ ವಿರೋಧ ಪಕ್ಷದ ನಾಯಕರಲ್ಲಿ ಬರಬೇಕು. ಅವರು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ತಾವು ಜವಾಬ್ದಾರಿಯಿಂದ ಇದ್ದೀರಿ. ಇದನ್ನು ದಯಮಾಡಿ ಮತ್ತೊಮ್ಮೆ ಅರ್ಥ ಮಾಡಿಕೊಳ್ಳಿ. ತಾವು ಏನು ಮಾತನಾಡುತ್ತಿದ್ದೀರೋ ಅದಕ್ಕೆ

ಏನಾದರೂ ಆಧಾರ ಇದೆಯೇ? ಮತ್ತೊಂದು ಇದೆಯೇ? ಆಧಾರವನ್ನು ತಾವು ಕೊಡತಕ್ಕಂಥಾದ್ದು ಏನಾದರೂ ಇದೆಯೇ ಎಂದು ತಾವು ದಯಮಾಡಿ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಬಹಳ ಇವತ್ತು ಅನುಕೂಲವಾಗಿದೆ. ಏಕೆಂದರೆ ಏನೋ ಪಾಪ ನನಗೆ ಬುದ್ಧಿ ಹೇಳಿದ್ದಾರೆ. ಬಹಳ ಸಂತೋಷ. ನನಗೆ ದುಃಖ ವ್ಯಥೆ ಏನೂ ಆಗಲಿಲ್ಲ. ನಾನು ಏನು ಓದಿದೆ ಎಂದರೆ ಬಹುಶಃ ಕಾಗೋಡು ತಿಮ್ಮಪ್ಪನವರಿಗೆ ಇದು ತಿಳಿದೇ ಇರಬಹುದು. ಉತ್ತರ ಏನು ಬರೆದಿದ್ದಾರೆ ಅವರು? I tell you "It is a universal truth in Karnataka..." K.E.B. Chairman.......

Mr. Speaker : No, please Are you taking responsibility for this statement?

ಅದನ್ನು ನೀವು ಓದುವುದಕ್ಕೆ ಮೊದಲು ಸಮಜಾಯಿಷಿ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ಯಾರೋ ಸದಸ್ಯರಿಗೆ ಸಂಬಂಧಪಟ್ಟದ್ದು ಇಲ್ಲವೇ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿದ್ದು ಆದರೆ.....

(ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ : 20 ವರ್ಷದ ಅನುಭವ ಇಟ್ಟುಕೊಂಡು ಹೀಗೆ ಅವರು ಮಾತನಾಡುತ್ತಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ : ಈ ಬಗ್ಗೆ ನನ್ನ ಕ್ರಿಯಾಲೋಪ ಇದೆ. ಏನೆಂದರೆ ಸರ್ಕಾರದ ಆಡಳಿತ ನಿರ್ವಹಣೆಗೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರಿ ಮೇಲೆ ಭ್ರಷ್ಟಾಚಾರದ ಆರೋಪವನ್ನು ಈ ಕಡೆಯ ಸದಸ್ಯರು ಮಾಡಬೇಕಾದರೆ ಅದನ್ನು ರುಜುವಾತು ಮಾಡಬೇಕು ಎಂಬ ನಿಯಮ ಇದೆಯೊ? ಹಾಗಿದ್ದರೆ ನಾವು ಯಾರೂ ಇಲ್ಲಿ ಆರೋಪ ಮಾಡುವುದೇ ಬೇಕಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ರುಜುವಾತು ಮಾಡಬೇಕೆಂದು ಕೇಳಲಿಲ್ಲ. ಅವರು ಹೇಳಿದ ಧಾಟಿ ಸರಿಯಿಲ್ಲ.

(ಗೊಂದಲ)

Sri H. Ekanthaiah : I am on a Point of Order....

ಶ್ರೀ ಎ.ಕೆ. ಅನಂತಕೃಷ್ಣ : ಅವರು ಅನಾಮಧೇಯ ಪತ್ರ ಎಂದು ಹೇಳಿದ ಮಾತಿಗೆ ನಾನು ಹೇಳುತ್ತಿದ್ದೇನೆ.

Mr. Speaker : Let us take this Proposition.

ನಿಮ್ಮ ಕಂಟೆನ್‌ಷನ್ ಏನು ಎಂದು ಹೇಳಿದರೆ ಯಾವುದೇ ಅಧಿಕಾರಿ ಮೇಲೆ ನೀವು ಭ್ರಷ್ಟಾಚಾರ ಆರೋಪ ಮಾಡಿದಾಗ ಅದನ್ನು ಪ್ರೂವ್ ಮಾಡಬೇಕಾದಂತಹ ಹೊಣೆಗಾರಿಕೆ ತಮ್ಮ ಮೇಲೆ ಇಲ್ಲ ಹಾಗೆ ಎಂದು ತಾನೇ ತಾವು ಹೇಳುತ್ತಾ ಇರುವುದು.

Sri H. Ekanthaiah : I want your guidance.

Mr. Speaker : As a responsible Legislator. I would go a step further and say, that you should own that responsibility to prove it.

ಶ್ರೀ ಹೆಚ್. ಏಕಾಂತಯ್ಯ : ಯಾವುದು? ಎಲ್ಲಿಯವರಿಗೆ ನಾನು ಕೋರ್ಟ್‌ಗೆ ಹೋಗಿ ರುಜುವಾತು ಮಾಡುವಂತಹ ರುಜುವಾತನ್ನು ಈ ಸಭೆಯಲ್ಲಿ ಮಾಡಬೇಕಾಗಿಲ್ಲ. ನಾನು ಯಾವುದೇ ಸರ್ಕಾರದಲ್ಲಿ ಪಬ್ಲಿಕ್‌ಸರ್ವೆಂಟ್ ಎಂದು ಯಾರು ಇದ್ದಾರೆ. ಮಂತ್ರಿ ಇರಬಹುದು ಅಥವಾ ಮುಖ್ಯಮಂತ್ರಿ ಇರಬಹುದು. ಅವರ ಕರ್ತವ್ಯ ನಿರ್ವಹಣೆಯಲ್ಲಿ ಏನಾದರೂ ಸಂದರ್ಭ ಸಾಕ್ಷಿಗಳನ್ನು ಅನುಸರಿಸಿ ಇಲ್ಲಿ ಸಂಶಯ ಬರುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಲ್ಲಿ ಭ್ರಷ್ಟಾಚಾರ ಇದೆ ಎಂದು ಹೇಳುವುದಕ್ಕೆ ನಮಗೆ ಅಧಿಕಾರ ಇದೆ.

ಅಧ್ಯಕ್ಷರು : ಸಂಶಯ ಬರುತ್ತದೆ ಎಂದು ಹೇಳುವುದಕ್ಕೋ....

ಶ್ರೀ ಹೆಚ್. ಏಕಾಂತಯ್ಯ : ತಮ್ಮ ಅನುಮತಿ ಪಡೆದು ಹೇಳುತ್ತೇನೆ. ಇದೇ ಮಾನ್ಯ ಬಂಗಾರಪ್ಪನವರು ಶ್ರೀಮಾನ್ ರಾಮಕೃಷ್ಣಹೆಗಡೆ ಅವರ ಸರ್ಕಾರ ಇದ್ದಂತಹ ಕಾಲದಲ್ಲಿ ಅವರು ಅನೇಕ ಅವ್ಯವಹಾರಗಳನ್ನು ಮಾಡಿದ್ದಾರೆ ಎಂಬ ಮಾತನ್ನು ಹೇಳಿದರು. ಅನೇಕ ಅಧಿಕಾರಿಗಳ ಮೇಲೆ ಹೇಳಿದ್ದಾರೆ. ಈ ಸದನದಲ್ಲಿ ಎಲ್ಲ ಕಾಲದಲ್ಲಿಯೂ ಹೇಳಿದ್ದಾರೆ. ಅವರ ಕಾಲದಲ್ಲಿಯೂ ಅಲ್ಲ ಎಲ್ಲ ಕಾಲದಲ್ಲಿಯೂ ಹೇಳಿದ್ದಾರೆ. ತಾವು ಇಲ್ಲಿದ್ದಾಗ ಏನು ಹೇಳಿದ್ದೀರೋ ನನಗೆ ಗೊತ್ತಿಲ್ಲ. ಆದರೆ ಆರೋಪವನ್ನು ಮಾಡುವಂತಹ ಹಕ್ಕು ನಮಗೆ ಇದೆ...

ಅಧ್ಯಕ್ಷರು : ನನಗೂ ಜ್ಞಾಪಕ ಇಲ್ಲ. ನಾನು ಏನು ಹೇಳಿದ್ದೇನೆಂದು ಮರೆತು ಬಿಟ್ಟಿದ್ದೇನೆ.

ಶ್ರೀ ಹೆಚ್ ಏಕಾಂತಯ್ಯ : ನನಗೂ ಗೊತ್ತಿಲ್ಲ. ಇರಲಿ. ಆರೋಪ ಮಾಡುವಂತಹ ಹಕ್ಕು ಇದೆಯಾ? ಈ ಆರೋಪ ಮಾಡಿದಾಕ್ಷಣ ಅದನ್ನು ರುಜುವಾತು ಮಾಡುವುದಾದರೆ ಮಾತ್ರ ಎಂದು ತಾವು ಹೇಳುವುದಾದರೆ ಐ ಅಗ್ರೀ. ದಯವಿಟ್ಟು ಇದಕ್ಕೆ ಕನ್ಸಿಡರ್ಡ್ ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. Speaker : Let us hear Sri Kagodu Thimmappa on this particular definition.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಏಕಾಂತಯ್ಯನವರು ಪ್ರಸ್ತಾಪ ಮಾಡಿರತಕ್ಕದ್ದು ಎರಡು ವಿಚಾರಗಳು. ಸರ್ಕಾರ ಭ್ರಷ್ಟಚಾರ ಮಾಡಿದೆ. ಅಥವಾ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ ಎನ್ನತಕ್ಕದ್ದು, ಮೊಗುಮ್ ಆಗಿ, ಅಂಬಿಗ್ಯುಯಸ್ ಆಗಿ ಆಪಾದನೆ ಮಾಡಿದಾಗ ಏನೂ ತೊಂದರೆ ಇಲ್ಲ. ಆದರೆ ನಿರ್ದಿಷ್ಟವಾದಂತಹ ಆಪಾದನೆ ಅಂದರೆ ಯಾರೋ ಅಧಿಕಾರಿ ಇಷ್ಟು ದುಡ್ಡು ತೆಗೆದುಕೊಂಡಿದ್ದಾನೆ ಅಥವಾ ಇಂತಹ ಕೆಲಸ ಮಾಡಿದ್ದಾನೆ ಅಂದರೆ then he must prove it. ಆಗ ಮಾತ್ರ ಈ ಸದನ ಏನಾದರೂ ತೀರ್ಮಾನ ಮಾಡಬಹುದು. ಅಥವಾ ವಿಚಾರಣೆಗೆ ಗುರಿ ಪಡಿಸಬಹುದು. ಏನೇ ಆಗಲಿ. ಆ ಸಂದರ್ಭದಲ್ಲಿ ಯಾರು ಆಪಾದನೆ ಮಾಡಿರುತ್ತಾರೆ. ಅವರು ಅದರ ಬಗ್ಗೆ ರುಜುವಾತು ಮಾಡಬೇಕು ಎನ್ನುವಂತಹ ಜವಾಬ್ದಾರಿ ಇದ್ದೇ ಇದೆ. ಎರಡು ತರಹದ ಆಪಾದನೆಗಳಲ್ಲಿ ಇದು ಒಂದು. ಕೇವಲ ಮೊಗುಮ್ ಆಗಿ ಹೇಳುವುದು ಬೇರೆ ಇದೆ.

ಅಧ್ಯಕ್ಷರು : ಜನರಲ್ ಆಗಿ ಹೇಳುವುದು.

ಶ್ರೀ ಕಾಗೋಡು ತಿಮ್ಮಪ್ಪ : ಜನರಲ್ ಆಗಿ ಹೇಳುವುದೇ ಬೇರೆ ಇದೆ. ನಿರ್ದಿಷ್ಟವಾಗಿ ನಿಖರವಾಗಿ ಇಂತಹವನು ಇಷ್ಟೇ ಹಣ ತೆಗೆದುಕೊಂಡಿದ್ದಾನೆ. ಈ

ಕೆಲಸ ಮಾಡಿದ್ದಾನೆ ಎಂದು ಹೇಳಿದರೆ ಆಗ ರುಜುವಾತು ಮಾಡಬೇಕಾದಂತಹ ಹೊಣೆಗಾರಿಕೆ ಆಪಾದನೆ ಮಾಡಿದವರು ಹೊರಬೇಕಾಗುತ್ತದೆ. ಆದರೆ ಕೆಲವು ವ್ಯವಹಾರಗಳು ನಡೆಯುತ್ತವೆ. ಮಾನ್ಯ ಚಂದ್ರೇಗೌಡರು ಯಾವುದೋ ಒಂದು ಪತ್ರ ಬಂದಿದೆ ಎಂದು ಹೇಳಿದರು. ಯಾವುದೋ ಕಡಿಮೆ ದರವನ್ನು ಕೋಟ್ ಮಾಡಿರುವುದನ್ನು ಬಿಟ್ಟು ಹೆಚ್ಚಿಗೆ ದರವನ್ನು ಕೋಟ್ ಮಾಡಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ಇದರಲ್ಲಿ ಏನೋ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿರುವುದರಿಂದ ಅದರಲ್ಲಿ ರುಜುವಾತು ಮಾಡಬೇಕಾದ್ದಿಲ್ಲ. subject to verification of so many things. ಆದರೆ ನಿರ್ಧಿಷ್ಟವಾಗಿ ಹೇಳಿ ಅನಾಮಧೇಯ ಪತ್ರದಲ್ಲಿ ಏನೋ ಒಂದು ಪದ ಇದೆ. ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಹೇಳಿ ಹೇಳಿ ಅನಾಮಧೇಯ ಆಗಿರತಕ್ಕದ್ದನ್ನು ಅಧಿಕೃತ ದಾಖಲೆಯಲ್ಲಿ ಹೋಗುವುದಕ್ಕೆ ಎಷ್ಟು ಬೇಕೋ ಅಷ್ಟು ವ್ಯವಸ್ಥೆ ಆಗಿದೆ. ಆದರಿಂದ ನಿರ್ಧಿಷ್ಟವಾದಂತಹ ಆಪಾದನೆ ಮಾಡಬೇಕು.

Mr. Speaker : I am getting...ನಾನು ಏನು ರೆಕಾರ್ಡ್ ಆಗಿದೆ ಎನ್ನುವುದನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳುತ್ತಾ ಹೇಳುತ್ತಾ ಇಂತಹವರು ಇಷ್ಟು ಕೊಟ್ಟಿದ್ದೇವೆಂದು ಬರೆದಿದ್ದಾರೆ ಎಂದು ಹೇಳಿರುವುದರಿಂದ ಅಲ್ಲಿ ನಾನು ಅಬ್ಜೆಕ್ಷನ್ ರೈಸ್ ಮಾಡಿರುವುದು.

ಶ್ರೀ ಹೆಚ್. ಏಕಾಂತಯ್ಯ : ಬರೆದಿದ್ದಾನೆ ಅಂದರೆ ಏನು ಅರ್ಥ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆರೋಪ ಮಾಡುವಂತಹ ಸಂದರ್ಭದಲ್ಲಿ ಬಂದು ತನಿಖಾ ಆಯೋಗ ಅಥವಾ ಲೋಕಾಯುಕ್ತ ತನಿಖೆ ಮಾಡಿ ನಿರ್ಧಿಷ್ಟವಾದಂತಹ ಅವ್ಯವಹಾರಗಳು ನಡೆದಿದೆ ಎಂದು ಹೇಳಿ. ಆರೋಪಗಳನ್ನು ಹೊರಿಸಿದಾಗ ಅದೇ ಸರಿ ಎಂದು ಸಾಬೀತು ಮಾಡಿ ಕೊಳ್ಳುವ ಈ ಸರ್ಕಾರಕ್ಕೆ ಏನು ಹೇಳುವುದು? ಉದಾಹರಣೆಗೆ ನಾನು ಎಕ್ಸೈಜ್ ಕಮೀಷನರ್ ಬಗ್ಗೆ ಪ್ರಸ್ತಾಪ ಮಾಡಿದೆ. ದಾಖಲೆಗಳನ್ನು ಓದಿದ ಮೇಲೆ, ಲೋಕಾಯುಕ್ತದ ಛಾರ್ಜಸ್ ಅನ್ನು ಓದುವುದಕ್ಕೆ ಶುರು ಮಾಡಿದಾಗ ನಾನು ಪೂರ್ಣ ವಿವರ ಕೊಡುವುದಕ್ಕೆ ಆಗಲಿಲ್ಲ. ಆಮೇಲೆ ತಾವು ರೂಲಿಂಗ್ ಕೊಟ್ಟಿರಿ. ಆದರೆ ಲೋಕಾಯುಕ್ತ ನಿರ್ಧಿಷ್ಟವಾಗಿ ಭ್ರಷ್ಟ ಇದ್ದಾನೆ ಲೂಟಿ ಆಗಿದೆ. ಸಸ್ಪೆಂಡ್ ಮಾಡಬೇಕು. ಎನ್‌ಕ್ವೈರಿ ಆಗಬೇಕು. ಮುಂದಿನ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದಾಗ ಅವರನ್ನೇ ಉಳಿಸಿಕೊಳ್ಳುವಂತಹ ಪ್ರಯತ್ನ ಈ ಸರ್ಕಾರ ಮಾಡಿದೆ. ಇದರಿಂದಾಗಿ ಯಾವುದರ ಬಗ್ಗೆ ಪ್ರಸ್ತಾಪ ಮಾಡಬೇಕು ಯಾವುದರ ಬಗ್ಗೆ ಮಾಡಬಾರದು ಎಂಬ ಅನುಮಾನ ಆಗಿದೆ. ಪ್ರತಿ ಒಂದು ಕ್ಷಣದಲ್ಲಿ ನಮಗೆ ಪತ್ರಗಳು ಬರುತ್ತವೆ.

ಈ ರೀತಿ ಅವ್ಯವಹಾರಗಳು ನಡೆಯುತ್ತಾ ಇದೆ. ಇಂತಹ ಮಂತ್ರಿಗಳು ಈ ರೀತಿ ಮಾಡುತ್ತಾರೆ ಎಂದು ಈ ರೀತಿ ಪತ್ರಗಳು ಬರುತ್ತವೆ. ಆಗ ಅದು ಸರಿಯೋ ತಪ್ಪೋ ಎಂಬ ಅನುಮಾನ ನಮಗೆ ಬರುತ್ತದೆ. ಇದು ಆಗಿರಬಹುದೆಂದು ಅನಿಸುತ್ತದೆ ಎಂದು ನಾವು ಇಲ್ಲಿ ಹೇಳುತ್ತಿದ್ದೇವೆ. ಈ ಮಟ್ಟಕ್ಕೆ ಈ ನಮ್ಮ ಸರಕಾರ ಎಲ್ಲಾ ರಂಗಗಳಲ್ಲಿಯೂ ಅವ್ಯವಹಾರಗಳಲ್ಲಿ ಪಾಲ್ಗೊಳ್ಳುತ್ತದೆ ಎಂಬ ಜನಜನಿತವಾದಂಥ ವಿಚಾರದಿಂದ ವಿಚಿತ್ರವಾದಂಥ ಪರಿಸ್ಥಿತಿ ಬಂದಿದೆ. ಅದು ಅಲ್ಲ ಎಂದು ಸರಕಾರ ಹೇಳುತ್ತದೆಯೇ?

ಶ್ರೀ ಸಿ. ಬೈರೇಗೌಡ : ಸರಕಾರದವರು ಈ ಸದನದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟಿರತಕ್ಕಂಥಾದ್ದು ಇದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಅವರ

ಅವಿಶ್ವಾಸ ನಿರ್ಣಯದ ಬಗ್ಗೆ ಉತ್ತರ ಕೊಡಬೇಕಾಗಿದ್ದರೆ ರಾಜ್ಯದ ಮುಖ್ಯಕಾರ್ಯದರ್ಶಿಗಳ ಮೇಲೆ ಎನ್‌ಜಿಇಫ್‌ನಲ್ಲಿ ನಡೆದಿರತಕ್ಕಂತ ಹಗರಣದ ಬಗ್ಗೆ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿರುತ್ತಾರೆ. 2.47 ಕೋಟಿಗಳಷ್ಟು ಎಇಜಿ ಯಿಂದ ಕಮಿಶನ್ ಬರಬೇಕಾಗಿದೆ. ಎಂಬುದಾಗಿ ಹೇಳಿರುತ್ತಾರೆ. ಅದನ್ನು ಉಲ್ಲೇಖ ಮಾಡಿ ನಾನು ಪ್ರಶ್ನೆ ಮಾಡಿದರೆ, ಅವರು ಈ ರೀತಿ ಹೇಳಿದರು. ಇವರು ಆ ರೀತಿಯಾಗಿ ಹೇಳಿದರು ಹಿಂದೆ ಯಾರೋ ಹೇಳಿದರು. ಮುಂದೆ ಹೇಳಿದರು ಎಂದು ಹೇಳಿದ್ದಾರೆ. ಕೊನೆಗೂ ಅದಕ್ಕೆ ಸಂಬಂಧಪಟ್ಟ ಹಾಗೆ ನೇರವಾದಂಥ ಉತ್ತರವನ್ನು ಅವರಿಂದ ಕೊಡುವುದಕ್ಕೆ ಆಗಲಿಲ್ಲ. ಆದರೆ ಹಿಂದೆ ನನ್ನ ಪ್ರಶ್ನೆಗೆ ಇಲ್ಲಿಯೇ ಉತ್ತರವನ್ನು ಒಬ್ಬ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಕೊಟ್ಟಿದ್ದಾರೆ.

Mr. Speaker : We are going away from the main point.

ಶ್ರೀ ಎಲ್.ಆರ್. ಶಿವರಾಮೇಗೌಡ : ಹೀಗೆ ಆದರೆ ನೋಟೀಸ್ ಕೊಡುತ್ತಾರೆ.....

ಶ್ರೀ ಸಿ. ಬೈರೇಗೌಡ : ನೋಟೀಸ್‌ನ ವಿಚಾರ ಆಮೇಲೆ ನೋಡೋಣ. ಬಹುಶಃ ದೆಲ್ಲಿಯಲ್ಲಿ ಇವೊತ್ತು ನೋಟೀಸ್ ಕೊಡುತ್ತಿದ್ದಾರೆ ಎಂದು ಕಾಣುತ್ತದೆ... ಅಧ್ಯಕ್ಷರೆ, ಈ ಸದನದ ಸೊತ್ತು ಆಗಿರತಕ್ಕಂಥಾದ್ದನ್ನು ಮುಚ್ಚತಕ್ಕಂಥ ಪ್ರಯತ್ನವು ಯಥಾಪ್ರಕಾರವಾಗಿ ಸಾರೋದ್ಧಾರವಾಗಿ ನಡೆಯುತ್ತಾ ಇದೆ. ನಾವು ಇಲ್ಲಿ ಈ ವಿಚಾರಗಳನ್ನು ಹೇಳಬಹುದೇ ಹೊರತಾಗಿ ಬೇರೆ ಅದಕ್ಕಿಂತ ಹೆಚ್ಚಿಗೆ ಏನೂ ಮಾಡುವ ಹಾಗಿಲ್ಲ

ಶ್ರೀ ಬಿ. ಸ್ವಾಮಿರಾವ್ : ಅಧ್ಯಕ್ಷರೆ, ನಮ್ಮ ಆಪಾದನೆ ಇಷ್ಟೇನೆ...

ಅಧ್ಯಕ್ಷರು : ನೀವು ಆಪಾದನೆ ಮಾಡಬೇಕಾದರೆ ಬರೆದು ಕಳುಹಿಸಿರಿ.....

ಶ್ರೀ ಬಿ. ಸ್ವಾಮಿರಾವ್ : ಮಾನ್ಯ ಚಂದ್ರೇಗೌಡರು ಅನಾಮಧೇಯ ಪತ್ರವನ್ನು ಓದಿದ್ದಾರೆ ಎಂಬ ಬಗ್ಗೆ ಮಾತ್ರ ನಮ್ಮ ಆಕ್ಷೇಪಣೆ.

ಅಧ್ಯಕ್ಷರು : ಅದರ ಬಗ್ಗೆ ನಾನು ಪ್ರತ್ಯೇಕವಾಗಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಅದಕ್ಕೆ ಸಂಬಂಧಪಟ್ಟ ನಡವಳಿಕೆಯನ್ನು ತರಿಸುತ್ತಾ ಇದ್ದೇನೆ. ಅದನ್ನು ನೋಡಿ ತೀರ್ಮಾನ ಕೊಡುತ್ತೇನೆ. ನೀವು ಆಪಾದನೆ ಮಾಡಬೇಕಾಗಿದ್ದರೆ ನಿಯಮ 311ರ ಪ್ರಕಾರ ಬರೆದುಕಳುಹಿಸಿ ಅದನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಆ ಮೇಲೆ ಅದನ್ನು ಸದನದ ಮುಂದೆ ನಿಮಗೆ ಪ್ರಸ್ತಾಪಿಸಲು ಅವಕಾಶ ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ವಿಚಾರ ಇಷ್ಟೊಂದು ಗಾಬರಿಗೆ ಏತಕ್ಕೆ ಕಾರಣವಾಯಿತೋ ನನಗೆ ಗೊತ್ತಿಲ್ಲ. ನಾನು ಕೆ.ಇ.ಬಿ. ಅಧ್ಯಕ್ಷರ ಮೇಲೆ ಇರತಕ್ಕಂಥ ಆಪಾದನೆ ಎಷ್ಟು ದೊಡ್ಡ ಪ್ರಮಾಣದ್ದು ಎಂದು ಹೇಳುವುದಕ್ಕೆ ಹೊರಟೆ. ಇದಕ್ಕೂ ಇವರಿಗೆ ಇಷ್ಟು ಸಂಕಟ ಆದರ ನಾವು ಮಾತನಾಡುವುದು ಬೇಡವೆ? ಕೆಇಬಿ ಚೇರ್ಮನ್‌ರ ಬಗ್ಗೆ ಬರೆದಿರತಕ್ಕಂಥ ಪತ್ರ ಅನಾಮದೇಯ ಪತ್ರ. ನಾನು ವಿವರಣೆ ಹೋಗಿಲ್ಲ.

ಅಧ್ಯಕ್ಷರು : ನಾನು ವಿಚಾರದ ಬಗ್ಗೆ ಹೇಳುವುದು ಬೇಡ ಎಂದು ನಿಮಗೆ ಹೇಳುವುದಿಲ್ಲ. ಹಾಗೆ ಬೇಡ ಎಂದು ಹೇಳುವುದಕ್ಕೆ ನಾನು ಯಾರು? ತಾವುಗಳು ಹೇಳ ಬೇಕಾದುದನ್ನು ಎಲ್ಲವನ್ನೂ ಹೇಳಬೇಕು. ಆದರೆ ಇಲ್ಲಿ ತೊಂದರೆ ಬಂದಿರತಕ್ಕಂಥಾದ್ದು ಯಾವುದೋ ಅನಾಮಧೇಯ ಪತ್ರವನ್ನು ಬೇಸಿಸ್ ಮಾಡಿಕೊಂಡು ನೀವು ಮಾತನಾಡುತ್ತಾ ಇದ್ದೀರಿ. ಅದಕ್ಕೆ ಮೊದಲು ಯಾವುದಾದರೂ ನಾಮಾಂಕಿತ

ಹೊಂದಿರತಕ್ಕಂಥ ಪತ್ರದ ಬಗ್ಗೆ ನೀವು ಜವಾಬ್ದಾರಿ ತೆಗೆದುಕೊಂಡು ಹೇಳುವುದಾದರೆ ಇಡೀ ಸಭೆ ನಿಮ್ಮನ್ನು ಶ್ಲಾಘಿಸುತ್ತದೆ.

ಶ್ರೀ ಆರ್.ಎನ್. ನಾಯ್ಕ : ಮೊದಲು ಅಧಿಕೃತ ಎಂದು ಪ್ರಾರಂಭವಾಗಿ ನಂತರ ಅನಾಮಧೇಯವಾಗಿ ಹೀಗೆ ತಿರುಗು ಮುರುಗು ಮಾಡಿದರು.

ಶ್ರೀ ಹೆಚ್. ಏಕಾಂತಯ್ಯ : ನೇರವಾದಂಥ ಆಪಾದನೆಗಳನ್ನು ಮಾಡುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ನಿಯಮಗಳು ಇವೆ. ಆದರೆ ಸರಕಾರದ ಕರ್ತವ್ಯ ನಿರ್ವಹಣೆ ಮಾಡತಕ್ಕಂಥ ಪಬ್ಲಿಕ್ ಸರ್ವೆಂಟ್ ಎಂದು ಏನು ಹೇಳುತ್ತಾರೆ. ಅವರ ಮೇಲೆ ಆರೋಪ ಮಾಡಬೇಕಾದರೆ ಇದು ಯಾವ ನಿಯಮ ಪ್ರಕಾರ ಅದರ ಬಗ್ಗೆ ನಾವು ಚಾರ್ಜಸ್‌ನ್ನು ಹೇಳಬೇಕು ರುಜುವಾತು ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳುತ್ತಾರೆ ಅದರ ಬಗ್ಗೆ ರಕ್ಷಣೆ ಇರಬೇಕು.

ಅಧ್ಯಕ್ಷರು : ಇಲ್ಲಿ ಪ್ರಶ್ನೆ ಬಂದಿರತಕ್ಕಂಥಾದ್ದು ನೀವು ಮಾಡಿರುವ ಚಾರ್ಜ್ ಬಗ್ಗೆ ಅಲ್ಲ. ಅನಾಮಧೇಯ ಪತ್ರದ ಬಗ್ಗೆ ಮಾತ್ರ.

ಶ್ರೀ ಹೆಚ್. ಏಕಾಂತಯ್ಯ : ಹಾಗಾದರೆ ಅನಾಮಧೇಯದ ಪತ್ರದ ಬಗ್ಗೆ ಮಾತ್ರ ಇದ್ದರೆ ನಮ್ಮದು ಆಕ್ರೋಶ ಇಲ್ಲ. ಆದರೆ ಅದರ ನೆಪದಲ್ಲಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆಯೂ ಆರೋಪ ಮಾಡಬೇಡಿ ಅಂದರೆ ಏನು ಅರ್ಥ.

ಅಧ್ಯಕ್ಷರು : ನಾನು ಅರ್ಥಮಾಡಿಕೊಂಡಿರತಕ್ಕಂಥಾದ್ದು ಅವರು ಅನಾಮಧೇಯಪತ್ರವನ್ನು ಬೇಸಿಸ್ ಮಾಡಿಕೊಂಡಿದ್ದಾರೆ ಎಂದು.

ಶ್ರೀ ಎ.ಕೆ. ಅನಂತಕೃಷ್ಣ : ಅನಾಮಧೇಯ ಪತ್ರವನ್ನು ಓದುತ್ತಿದ್ದೀರಲ್ಲ ಅದಕ್ಕೆ ಒಂದು ವ್ಯಕ್ತಿತ್ವ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ಅನಾಮಧೇಯವೇ ಒಬ್ಬ ವ್ಯಕ್ತಿ.

ಶ್ರೀ ಎ.ಕೆ. ಅನಂತಕೃಷ್ಣ : ಅನಾಮಧೇಯ ವ್ಯಕ್ತಿ ಆಗುವುದಿಲ್ಲ. ಅನಾಮದೇಯ ಅನಾಮಧೇಯವೆ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ತಾವು ಬರುವುದಕ್ಕಿಂತ ಮುಂದೆ ಕೆಇಬಿ ಯವರು 11-7-91ರಂದು ನಾಲ್ಕು ಆರ್ಡರ್‌ಗಳನ್ನು ಕಳುಹಿಸಿದ್ದಾರೆ. ಅದರ ನಕಲು ಕೂಡ ನನ್ನ ಹತ್ತಿರ ಇದೆ. ಎಂಬ ವಿಚಾರವನ್ನು ಹೇಳಿದ್ದೇನೆ. ಇದನ್ನು ನೋಡಿದಾಗ ಇದರ ಮೇಲೆ ಮೇಲ್ನೋಟಕ್ಕೆ ಏನು ನಡೆದಿದೆ ಎನ್ನತಕ್ಕಂಥಾದ್ದು ಗೊತ್ತಾಗುವುದಿಲ್ಲ. ವಿ-1 ಪಿಸಿ : ಕೆಇಬಿ 2068-90-91ರಲ್ಲಿ ಯಾವ ಮೊದಲನೆ ಟೆಂಡರ್ ವಾಪಸ್ ತೆಗೆದುಕೊಂಡು ಪುನಃ ಲೊಯೆಸ್ಟ್ ಟೆಂಡರ್‌ಗಳನ್ನು ಬಿಟ್ಟು ಹೈಯೆಸ್ಟ್ ಟೆಂಡರ್‌ಗೆ ಕೊಟ್ಟರು ಎಂದು ಹೇಳಿ ಪತ್ರವನ್ನು ಓದಿದ್ದೇನೆ.

ಅದರ ಅಧ್ಯಕ್ಷರ ಮೇಲೆ ಹಲವಾರು ಪತ್ರಗಳು ಬಂದಿದ್ದರೂ ಅವುಗಳಲ್ಲಿ ದೊಡ್ಡ ಪ್ರಮಾಣದ ಅಪಾದನೆಗಳನ್ನು ಮಾಡಿದ್ದರೂ ಕೂಡ ನನಗೆ ವಿಶ್ವಾಸ ಬಂದಿರಲಿಲ್ಲ ಆದರೆ ಈ ಪತ್ರಕ್ಕೂ ಇಲ್ಲಿ ನಡೆದಿರುವ ವ್ಯವಹಾರ ನೋಡಿದ ಮೇಲೆ ಈ ಪತ್ರದಲ್ಲಿ ಏನೋ ವಿಶ್ವಾಸಾರ್ಹತೆ ಇದೆ ಎಂಬ ಒಂದು ರೀತಿಯ ಶಂಕೆ ನನಗೆ ಉಂಟಾಗುತ್ತದೆಂಬ ಕಾರಣದಿಂದ ಈ ಪತ್ರ ಓದಿದೆ. ಅಧ್ಯಕ್ಷರೆ ಕೆಇಬಿಗೆ ಪ್ರತಿವರ್ಷಕ್ಕೆ ಬೇಕಾಗಿರುವ ಒಟ್ಟಾರೆ ಮೆಟರಿಯಲ್ಸ್ 90ರಿಂದ 95 ಕೋಟಿ ಆದರೆ ಈ ಸಾರಿ ಆದರೆ 300 ಕೋಟಿಯಷ್ಟು ಕೊಂಡಿದ್ದಾರೆ. ಏನು ಕೊಂಡಿದ್ದಾರೆಂದರೆ ಕಂಡ್ಕರ್‌ಗಳನ್ನು ಅವೆಲ್ಲ ಈ ಪತ್ರದಲ್ಲಿ ಸೇರಿವೆ. ಸುಮಾರು 18 ಕೋಟಿ ರೂಪಾಯಿನ ಆರ್ಡರ್ಸ್‌ನ್ನು

ಫ್ಲೇಸ್ ಮಾಡಿದ್ದಾರೆ. ನಮಗೆ ಬೇಕಾಗಿರುವ ಕಂಡಕ್ಟರ್ 30 ಸಾವಿರ ಕಿಮೀನಷ್ಟು ರಾಮಪ್ಪನವರೇ ನಿಮ್ಮ ಕೆಇಬಿಯಲ್ಲಿ ಸ್ಕಿರಲ್ ಎಂದು ಕರೆಯುತ್ತಾರೆ. ಪರ್ಚೇಸ್ ಮಾಡಬೇಕಾದರೆ 6 ಸಾವಿರ ತಲಾ ಕಿಮಿ.ಗೆ ಅಂಥಾದ್ದು 15 ಸಾವಿರ ಕಿಮಿ ವಿಜಲ್ ಎಬೌಟ್ 8 ಸಾವಿರ ಕಿಮೀ. ತಲಾ. ಇದರಿಂದ ಸುಮಾರು 40 ರಿಂದ 50 ಪಂಪ್‌ಸೆಟನ್ನು ಎನರ್ಜೈಸ್ ಮಾಡಲು ಬೇಕಾಗಿರುವ ಟ್ರಾನ್ಸ್‌ಮಿಷನ್.

ಇದರಲ್ಲಿ ಸ್ಪೆಸಿಫಿಕೇಷನ್ ಏನು? ಕಂಡಕ್ಟರ್ಸ್‌ಗೆ ಐಎಸ್‌ಐ ಮಾರ್ಕ್ ಸ್ಪೆಸಿಫಿಕೇಷನ್ ಫ್ಲಸ್ ಅಥವಾ ಮೈನಸ್ ಟು, ಕಂಡಕ್ಟರ್‌ಗಳ ಡಯಾಮಿಟರ್‌ನಲ್ಲಿನ ವೆರಿಯೇಶನ್. ಇಂಥಾದ್ದನ್ನು ಕೆಇಬಿ ಅಥವಾ ಬೇರೆ ಇಲಾಖೆಗಳಲ್ಲಿ ಕೊಳ್ಳಬಹುದೆಂದು ಒಂದು ನಿಯಮ ಇದೆ. ಆದರೆ ಕೆಇಬಿಯಲ್ಲಿ ಒಂದು ನಿಯಮ ಮಾಡಿದ್ದರು ಏನೆಂದರೆ ಮೈನಸ್ ಟು ಕಂಡಕ್ಟರ್ರ್‌ಗಳನ್ನು ಕೊಂಡುಕೊಳ್ಳಬಾರದೆಂದೂ ಬರೀ ಪ್ಲಸ್‌ಟು ಕಂಡಕ್ಟರ್‌ಗಳನ್ನು ಕೊಳ್ಳಬೇಕೆಂದು 1990ರ ಡಿಸೆಂಬರ್‌ನಲ್ಲಿ ನೀವು ಕೊಟ್ಟಿರುವ ಆರ್ಡರ್ ಪ್ಲಸ್ ಟುಗೆ ಸಂಬಂಧಪಟ್ಟದ್ದು.

When the orders were placed in December, 1990, it was only The new Chairman Mr. Narasimha Murthy reverted back the KEB rules at the time of purchase and directed that even 2 or negative tolerable was also acceptable to KEB. There are three things.

ಟ್ರಾನ್ಸ್‌ಫಾರ್ಮರ್ಸ್ ಎಂದರೆ ವಯರ್ಸ್. ಡಯಾಮೀಟರ್-2 ಬರುತ್ತದೆ. ಮೈನಸ್ ಪ್ಲಸ್ ಟು ಬರುತ್ತದೆ. ಸ್ಟಾಂಡರ್ಡ್ ಪ್ಲಸ್ ಟು ತೆಗೆದುಕೊಳ್ಳುವುದಕ್ಕೆ ಯಾರದೂ ಅಡೆತಡೆ ಇಲ್ಲ ಅದನ್ನೇ ತೆಗೆದುಕೊಳ್ಳತ್ತಿದ್ದು ನಿಮ್ಮ ಕೆಇಬಿಯವರು 30 ಸಾವಿರ ಕಿಮಿ ಮೈನಸ್ ಟು ಪ್ಲಸ್ 15 ಸಾವಿರ ಕಿಮಿ ಮೈನಸ್ ಹೀಗೆ ಒಟ್ಟು 45 ಸಾವಿರ ಕಿಮಿ ತೆಗೆದುಕೊಳ್ಳುವುದಕ್ಕೆ ಇದ್ದಂತಹ ಕಾರಣವಾದರೂ ಏನು? ಅದೂ ಮೂರುಪಟ್ಟು ಪರ್ಚೆಸ್ ಮಾಡುವಾಗ ಮೈನಸ್ ಟು ತೆಗೆದುಕೊಳ್ಳದಕ್ಕೆ ಕಾರಣ ಏನಿತ್ತು ಇದಕ್ಕೆ ನಾನು ರಾಮಪ್ಪನವರಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ಇಂದು ವಿರೋಧಪಕ್ಷದ ನಾಯಕರಿಂದ ಚರ್ಚೆ ನಡೆದಿದೆ. ಈ ವಿದ್ಯುತ್ತಿನ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ಇವತ್ತು ಬೇಡಿಕೆಗಳ ಮೇಲೆ ಚರ್ಚೆ ನಡೆದಿದೆ. ಇಂತಹ ಸಂದರ್ಭದಲ್ಲಿ ಕೆಇಬಿಯ ಅಧ್ಯಕ್ಷರು ಇಲ್ಲಿರಬೇಕಾದ್ದು ಮತ್ತು ನಾವು ಹೇಳುವ ಅಹವಾಲುಗಳನ್ನು ಗಮನಿಸಬೇಕಾಗುವುದು ಅವರ ಕರ್ತವ್ಯ.

Mr. Speaker : Is he responsible to the House or is the Minister responsible?

Sri C. Byregowda : Minister is responsible. ನಾನು ಒಪ್ಪುತ್ತೇನೆ.

ಶ್ರೀ ಎಂ. ರಾಮಪ್ಪ : ಸ್ವಾಮಿ, ಇವತ್ತು ಆ ಮನೆಯಲ್ಲೂ ಇದೇ ವಿದ್ಯುತ್ತಿನ ಮೇಲೆ ಸಬ್ಜೆಕ್ಟ್ ಇದೆ. ಅವರು ಅಲ್ಲಿರಬಹುದು.

ಶ್ರೀ ಸಿ. ಬೈರೇಗೌಡ : ಅವರು ಇಲ್ಲಿರಬೇಕಾದ್ದು ಅವರ ಕರ್ತವ್ಯ.

4.05 ಪಿ.ಎಂ

ಎಷ್ಟು ಸಾರಿ ನೆನೆಸಿಕೊಂಡರೂ ಆ ವಿದ್ಯುತ್‌ನ ಬಗ್ಗೆ ನನಗಂತೂ ಮೈ ಉರಿಯುತ್ತದೆ. ಅಂಥ ಕಷ್ಟವನ್ನು ನಾವು ಅನುಭವಿಸುತ್ತಿದ್ದೇವೆ. ಒಂದು ಸಾರಿ ಅಲ್ಲ, ನೂರಾರು ಸಾರಿ ಹೇಳಿದ್ದೇನೆ. ಇವತ್ತು ಕೆ.ಇ.ಬಿ. ಅಧ್ಯಕ್ಷರು ಈ ಸಭೆಯಲ್ಲಿ ಇದ್ದಿದ್ದರೆ

ಅರ್ಥವಾಗುತ್ತದೆ: ಮಂತ್ರಿಗಳು ಇದ್ದಾರೆ ನಿಜ ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಕಾರ್ಯಗತ ಮಾಡಬೇಕಾಗಿರತಕ್ಕಂಥವರು ಆ ಮಂಡಳಿಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು. ಅವರು ಇರಬೇಕಾಗಿರತಕ್ಕಂಥದ್ದು ಅತಿ ಅವಶ್ಯಕ. ಈ ಸದನಕ್ಕೆ ಅಲ್ಲಿ, ಅವರು ನಮ್ಮ ಲೆಜಿಸ್ಲೇಚರ್ ಕಮಿಟಿಯಲ್ಲೂ ನಮ್ಮ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಗೂ ಕೂಡಾ ಬಾರದೇ ಚಕ್ಕರ್ ಹಾಕಿರತಕ್ಕಂಥದ್ದು ಉಂಟು. ಲೆಜಿಸ್ಲೇಚರ್ ಕಮಿಟಿಗಳು ಎಂದರೆ ಇಷ್ಟೊಂದು ನಿಕೃಷ್ಟವಾಗಿ ಭಾವನೆ ಬರತಕ್ಕಂಥ ಅಧಿಕಾರಿಯನ್ನು ಇಟ್ಟುಕೊಂಡಿದ್ದಾರಲ್ಲಾ? ಇದಕ್ಕೆ ಅರ್ಥವೇನು? ಇಷ್ಟೊಂದು ನಿಕೃಷ್ಟವಾಗಿ ....

(ಗೊಂದಲ)

Mr. Speaker : I think you are giving much importance to an officer, which really is not befitting to the dignity of this House

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಅಷ್ಟೊಂದು ಪ್ರಭಾವಿಗಳು.

(ಗೊಂದಲ)

ಶ್ರೀ ಸಿ. ಬೈರೇಗೌಡ : ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ಆದರೆ ನಮಗೆ ಇರತಕ್ಕಂಥ ಕಷ್ಟ, ನೋವು ಆಗುತ್ತಿರತಕ್ಕಂಥ ಅನ್ಯಾಯ ಏನು ಇದೆ ಅದನ್ನು ಅವರು ಗಮನಿಸಬೇಕು.

Mr. Speaker : I beg to differ from Sri Byre Gowda's submission. I have got a totally different opinion.

ಶ್ರೀ ವಾಟಾಳ್ ನಾಗರಾಜ್ : ನಾನು ಅದಕ್ಕೆ ಸಹಮತವನ್ನು ಕೊಡುತ್ತೇನೆ ಸ್ವಾಮಿ. ಮಂತ್ರಿಗಳು ಇರುವಾಗ ಅವರೇ ಅದನ್ನು ಹೇಳಬೇಕು. ಅಧಿಕಾರಿಗಳನ್ನು ಒಳಗಡೆ ಕರೆಸಿಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಆ ಒಂದು ವ್ಯವಹಾರದಲ್ಲಿ ಇಲಾಖೆಗೆ ಸುಮಾರು 26 ಲಕ್ಷ ರೂಪಾಯಿಗಳಷ್ಟು ಈ ಮೈನಸ್ ಸ್ಪೆಷಿಫಿಕೇಷನ್ ಕೊಟ್ಟಿದ್ದರಿಂದ ನಷ್ಟವಾಗಿದೆ ಎನ್ನತಕ್ಕಂಥ ಜವಾಬ್ದಾರಿಯುತವಾದಂಥ ಆಪಾದನೆಯನ್ನು ಮಾಡುತ್ತಿದ್ದೇನೆ. ಅವರಿಗೆ ಜವಾಬ್ದಾರಿಯುತವಾದಂಥ ಆಪಾದನೆ ಬೇಕು. ಆದುದರಿಂದ ಇಲ್ಲಿ ಏನು ನಡೆದಿದೆ. ಟ್ರಾನ್ಸ್‌ಮಿಷನ್ ವೈರ್ಸ್‌ನಲ್ಲಿ ಏನು ನಡೆದಿದೆ. ನನ್ನ ಅಂದಾಜಿನಂತೆ ಸುಮಾರು ನಾಲ್ಕು ಲಕ್ಷ ಪೋಲುಗಳನ್ನು ತರಿಸಿದ್ದೀರಿ. ನನಗೆ ಗೊತ್ತಿಲ್ಲ. ನಿಮಗೆ ಬಂದಿದೆಯೋ ಅವರಿಗೇ ಬಂದಿದೆಯೋ ಎನ್ನುವುದು ಗೊತ್ತಿಲ್ಲ. ಒಂದು ಪೋಲ್‌ಗೆ 12 ರೂಪಾಯಿ ಕಮಿಷನ್ ಹೋಗಿದೆ ಎಂದು ತಿಳಿದುಬಂದಿದೆ. ವಿಚಾರಣೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಯಾರಿಗೆ ಹೇಳುತ್ತಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ನಾನೇ ಹೇಳಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅದು ಕಡತದಲ್ಲಿ ಹೋಗುತ್ತಿದೆ. ಮಾನ್ಯ ಅಧ್ಯಕ್ಷರ ಕಿವಿಗೆ ಹೋಗುತ್ತಿದೆ. ಸರ್ಕಾರ ಯಾರು? ಇದು ಯಾರಿಗೆ ಹೋಗುತ್ತಿದೆ?

ಶ್ರೀ ಎಂ. ರಾಮಪ್ಪ : ಇಷ್ಟೊಂದು ಹಗುರವಾಗಿ ಮಾತನಾಡುವುದು ಸರಿಯಲ್ಲ ಸ್ವಾಮಿ. ನಾನು ಇಲ್ಲಿಯೇ ಕುಳಿತಿರಬೇಕಾದರೆ ಈ ರೀತಿ ಹೇಳುವುದು ಸರಿಯಲ್ಲ.

ಅಧ್ಯಕ್ಷರು : ಅದು ರೆಕಾರ್ಡ್‌ಗೆ ಹೋಗಿಲ್ಲ.

ಶ್ರೀ ಎಂ. ರಾಮಪ್ಪ : ನಾನು ಮಂತ್ರಿಯಾಗಿ ನಾನು ಇಲ್ಲ ಕುಳಿತು ಕೊಂಡಾಗ ಬೇಜವಾಬ್ದಾರಿಯಿಂದ ಮಾತನಾಡಿದರೆ ನನಗೆ ಬಹಳ ನೋವಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮಂತ್ರಿಗಳು ಒಂದೇ ಒಂದು ಅಕ್ಷರವನ್ನಾದರೂ ಬರೆದುಕೊಂಡಿದ್ದೀರಾ ನೋಡಿ ಸ್ವಾಮಿ?

(ಗೊಂದಲ)

ಶ್ರೀ ಎಂ. ರಾಮಪ್ಪ : ನಾನು ಬರೆದುಕೊಳ್ಳಬೇಕಾಗಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಹಾಗಾದರೆ ಉತ್ತರವನ್ನು ಹೇಗೆ ಕೊಡುವುದು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರು ವಿದ್ಯುಚ್ಛಕ್ತಿ ಮಂಡಳಿಯ ಬಗ್ಗೆ ಏನು ಮಾತನಾಡಿದ್ದರೆ ಅದರಲ್ಲಿ ನಾಲ್ಕು ಅಂಶಗಳನ್ನು ಹೇಳಿಬಿಟ್ಟರೆ ನಾನು ಅವರಲ್ಲಿ ಕ್ಷಮಾಪಣೆಯನ್ನು ಕೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಅವರು ಸ್ಪಷ್ಟವಾಗಿ ಹೇಳಿಬಿಟ್ಟರು. ನಾನು ಏತಕ್ಕೆ ಬರೆದುಕೊಳ್ಳಲಿ. ಅಧಿಕಾರಿಗಳು ಬರೆದುಕೊಳ್ಳುತ್ತಾರೆ ಎಂದು.

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ ಖಾತೆ ರಾಜ್ಯ ಸಚಿವರು) : ಮಾನ್ಯ ಬೈರೇಗೌಡರೇ ನೋಡಿ ಸ್ವಾಮಿ, ನಿಮ್ಮಷ್ಟು....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮೊಯಿಲಿಯವರು ನಿಮಗೆ ಆ ಸ್ಥಾನವನ್ನು ಕೊಟ್ಟಿದ್ದಾರೆಯೇ? ಏಕೆಂದರೆ ಸಮಗ್ರವಾಗಿ ಅವರು ಎಲ್ಲಾ ಇಲಾಖೆಯ ಬಗ್ಗೆ ಉತ್ತರವನ್ನು ಕೊಡುತ್ತಾರೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಉತ್ತರವನ್ನು ಕೊಡಬೇಕಾದರೆ ತಾವು ಏನೇನು ಹೇಳಿದ್ದೀರಿ. ಅದರ ಬಗ್ಗೆ ಸಂಪೂರ್ಣವಾಗಿ ಉತ್ತರವನ್ನು ಕೊಡುತ್ತಾರೆ. ತಾವು ಶಾಂತಿರೀತಿಯಿಂದ ಕೇಳಿ. ಇಲ್ಲಿ ಎಲ್ಲರದ್ದೂ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಅಪ್ಪಣೆಯನ್ನು ಕೊಡಿಸಿದ್ದೀರಿ. ನಾನು ಸಂಪೂರ್ಣವಾಗಿ ಅದನ್ನು ಒಪ್ಪುತ್ತೇನೆ. ಅಧಿಕಾರಿಗಳು ಇಲ್ಲ ಇರಬೇಕು ಎಂದು ತಾವು ಹೇಳಿದ್ದಿರಿ. ತುಂಬಾ ಸಂತೋಷ. ಆಯಿತು. ಆದರೆ ಮಂತ್ರಿ ಏನು ಹೇಳುತ್ತಾರೆ. ಅಧಿಕಾರಿಗಳು ಇದ್ದಾರೆ ವರು ಬರೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ ನಾವು ಏನು ಮಾಡಬೇಕು?

ಅಧ್ಯಕ್ಷರು: ಅದನ್ನೂ ಒಪ್ಪುವುದಿಲ್ಲ ನಾನು.

ಶ್ರೀ ಆರ್.ವಿ. ದೇವರಾಜ್ : ನಮ್ಮ ಮಂತ್ರಿಗಳೇನು ಬರೆದುಕೊಳ್ಳಬೇಕಾಗಿಲ್ಲ. ಅವರು ತಮ್ಮ ಮೈಂಡ್‌ನಲ್ಲೆ ಇಟ್ಟುಕೊಂಡಿರುತ್ತಾರೆ. ಅವರದು ಕಂಪ್ಯೂಟರ್ ಮೈಂಡ್.

ಅಧ್ಯಕ್ಷರು : ಅವರದ್ದು ಕಂಪ್ಯೂಟರ್ ಮೈಂಡ್ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆ ಮಾತನ್ನು ಅವರು ಹೇಳಲಿಲ್ಲ, ನಾವು ಬರೆದುಕೊಳ್ಳದಿದ್ದರೂ ತಲೆಯಲ್ಲಿ ಇಟ್ಟುಕೊಳ್ಳುತ್ತೇನೆ. ಎನ್ನುವಂತಹ ಮಾತನ್ನು ಅವರು ಹೇಳಲಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು...

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ದೇವರಿಗೆ ರಾಜ. ಅವರು ರಾಮ.

ಅಧ್ಯಕ್ಷರು : ಮಾನ್ಯ ಸಚಿವರು ಈಗ ಹೊಸದಾಗಿ ಸಚಿವರಾಗಿದ್ದಾರೆ. ಆದ್ದರಿಂದ ನಾವು ಸ್ವಲ್ಪ ಅವರ ಬಗ್ಗೆ ಔದಾರ್ಯದಿಂದ ವರ್ತಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರು ಮೇಲೆ ಬಹಳ ಕಳಕಳಿ ಇದೆ. ಔದಾರ್ಯ ಇದೆ.

ಅಧ್ಯಕ್ಷರು : ಆ ಮಾತನ್ನು ನೀವು ಹೇಳಬೇಡಿ. ಬೈರೇಗೌಡರು ಆ ಮಾತನ್ನು ಹೇಳಲಿ.

ಶ್ರೀ ಸಿ. ಬೈರೇಗೌಡ : ನಾನು ಆ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅವರು ಇರಲಿಲ್ಲ, ತಮ್ಮ ನಿರ್ಧಾರವನ್ನು ನಾನು ಒಪ್ಪಿದೆ. ನನಗೂ ಕೂಡ ಗೊತ್ತಿದೆ. they are not responsible for this house...

Mr. Speaker : I will hold him responsible.

ಶ್ರೀ ಸಿ. ಬೈರೇಗೌಡ : ಅವರು ಏನು ಹೇಳಿದರು ಅಂದರೆ ನಾನು ಬರೆದುಕೊಳ್ಳಬೇಕಾಗಿಲ್ಲ, ಬರೆದುಕೊಳ್ಳನವರು ಇದ್ದಾರೆ ನೋಡಿ ಎಂದು ಅವರು ಈ ಕಡೆ ಕೈತೋರಿಸುತ್ತಿದ್ದಾರೆ.

ಅಧ್ಯಕ್ಷರು : ನೀವು ಇನ್ನು ಮೇಲೆ ಬರೆದುಕೊಳ್ಳಿ ಅಂತ ಹೇಳಿ

ಶ್ರೀ ಸಿ. ಬೈರೇಗೌಡ : ಮಾನ್ಯ ದೇವರಾಜ್ ಅವರು ಅವರಿಗೆ ಬರೆದುಕೊಳ್ಳುವುದಕ್ಕೆ ಬರುವುದಿಲ್ಲ, ಅಂತ ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸುಮಾರು ಒಂದು ಗಂಟೆ ಹೋಗಿದೆ. ಅದನ್ನು ನನ್ನ ಲೆಕ್ಕಕ್ಕೆ ಹಾಕಬೇಡಿ. ನವೆಂಬರ್ ತಿಂಗಳಿನಲ್ಲಿ ನರಸಿಂಹಮೂರ್ತಿಯವರು ಚಾರ್ಜ್ ತೆಗೆದುಕೊಂಡರು. ಏಪ್ರಿಲ್ ತಿಂಗಳಷ್ಟು ಹೊತ್ತಿಗೆ 300 ಕೋಟಿ ರೂಪಾಯಿಯಷ್ಟನ್ನು ಅಂದರೆ ಕೆ.ಇ.ಬಿ.ಯ ಅಗತ್ಯಕ್ಕಿಂತ ಮೂರು ಪಟ್ಟು, ಕೆ.ಇ.ಬಿ. ಯವರು ಕೊಂಡು ಕೊಂಡಿದ್ದಾರೆನ್ನುವುದು ನನ್ನ ಆಪಾದನೆ. ರಿಕ್ವಾರ್‌ಮೆಂಟ್‌ಗಿಂತ ಶೇಕಡ 10ರಷ್ಟು ಹೆಚ್ಚು ಕೊಂಡುಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಒಂದಕ್ಕೆ ಮೂರು ಪಟ್ಟು ಕೊಂಡುಕೊಳ್ಳುವುದಕ್ಕೆ ಹಣವಿತ್ತು. ಆದರೆ ಕೆ.ಇ.ಬಿ. ಯಲ್ಲಿ ಬಾಕಿಯದ್ದನ್ನು ಕೊಂಡುಕೊಳ್ಳುವುದಕ್ಕೆ ಹಣವಿಲ್ಲವೆಂದು ಹೇಳುತ್ತೀರಿ.

ಅಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲ, ಸ್ಟಾಫ್ ಅನ್ನು ಫಿಲ್‌ಅಪ್ ಮಾಡಿಕೊಳ್ಳುವುದಕ್ಕೆ ನಿಮ್ಮಿಂದ ದುಡ್ಡು ಎಲ್ಲಿಂದ ಬಂತು? ಯಾವ ಪ್ರಾವಿಜನ್ ಎಲ್ಲಿ ನೀವು ಮಾಡಿದ್ದೀರಿ? ಆದ್ದರಿಂದ ಕೆ.ಇ.ಬಿ. ಈ ಸಾರಿ ನವೆಂಬರ್ ತಿಂಗಳಿಂದ ಏಪ್ರಿಲ್ ತಿಂಗಳವರೆಗೆ ಕೊಟ್ಟಿರತಕ್ಕಂಥಹ ಸ್ಕೀರಲ್ ಎಷ್ಟು ಟ್ರಾನ್ಸ್‌ಮೀಟರ್ಸ್ ಎಷ್ಟು ಟ್ರಾನ್ಸ್‌ಫಾರ್ಮರ್ಸ್ ಎಷ್ಟು ಎಂಬುದರ ಬಗ್ಗೆ ದಯಮಾಡಿ ಈ ಸದನಕ್ಕೆ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಕೇಳುತ್ತೇನೆ. ಕೊನೆಯದಾಗಿ ಇನ್ನು ಎರಡು ವಿಚಾರ ಇದೆ.

ಇದರಲ್ಲಿ ಕೆಲಸಗಾರರ ಬಗ್ಗೆ ಹೆಚ್ಚು ಟ್ಯಾಂಪರಿಂಗ್ ನಡೆಯುತ್ತಿದೆ. ಇದನ್ನು ನಾವು ಹತೋಟಿಗೆ ತರದೇ ಇದ್ದರೆ ಇಲಾಖೆಯು ನಮ್ಮ ಕೈ ತಪ್ಪಿಹೋಗಬಹುದು. ಅಲ್ಲಿ ಒಬ್ಬ ಎಂಪ್ಲಾಯಿಗೆ ಪುಕ್ಕಟೆ ಕರೆಂಟ್ ಕೊಡತಕ್ಕ ವ್ಯವಸ್ಥೆ ಇದೆ. ತಮಗೆ ಬೇಕೆಂದರೆ ಮಾಹಿತಿಯನ್ನು ಒದಗಿಸುತ್ತೇನೆ. ಕೆ.ಇ.ಬಿ.ಯ ಎಂಪ್ಲಾಯಿ ಬೆಂಗಳೂರಿನಲ್ಲಿ ಮನೆಯನ್ನು ಕಟ್ಟುವುದು ಸುತ್ತಮುತ್ತ 5-6 ಮನೆಗಳನ್ನು ಬಾಡಿಗೆಗೆ ಕೊಡುವುದು. ಆ ಮನೆಗೆ ಒಂದೇ ಒಂದು ಮೀಟರ್ ಹಾಕಿಸುವುದು. ಆ ಮನೆಯಿಂದ ಉಳಿದ 5-6 ಮನೆಗಳಿಗೆ ಕರೆಂಟ್ ಸಪ್ಲೈ ಮಾಡುವುದು. ಆ ಕರೆಂಟಿನ ಚಾರ್ಜು ಮನೆಯ ಮಾಲೀಕನಾದ ಕೆ.ಇ.ಬಿ. ಎಂಪ್ಲಾಯಿಗೆ ಬರುತ್ತದೆ. ಇದು ಒಂದು ರೀತಿಯ ಪೇಸ್ ಇನ್ನೊಂದು ರೀತಿಯಲ್ಲಿ ಕನಿಷ್ಠ ಪಕ್ಷ ಲೆಕ್ಕಕ್ಕಾದರೂ ಕೆ.ಇ.ಬಿ.ಯಲ್ಲಿ ಇರತಕ್ಕ ನೌಕರರಿಗೆ ದುಡ್ಡು ತೆಗೆದುಕೊಳ್ಳುವುದು ಬೇಡ, ಆದರೆ ಮೀಟರ್ ಹಾಕಿಸಿ ಎಷ್ಟು ವಿದ್ಯುಚ್ಛಕ್ತಿ ಅಲ್ಲಿ ಖರ್ಚಾಗುತ್ತಿದೆ ಅನ್ನತಕ್ಕ ಲೆಕ್ಕ ಇಟ್ಟುಕೊಳ್ಳಿ. ಅವರಿಗೆ ಇಷ್ಟನ್ನು ಮಿನಿಮಂ ಕೊಡುತ್ತೇವೆ ಅನ್ನುವಂತಾದನ್ನಾದರೂ ಮಾಡಿ. ನಾನು ಇಲ್ಲಿ ವರ್ಗಾವಣೆಯ ಬಗ್ಗೆ ವಿವರಕ್ಕೆ ಹೋಗುವುದಿಲ್ಲ.

ಅಧ್ಯಕ್ಷರದೊಂದು ನ್ಯೂಸ್ ಅನ್ನು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಇಂಜಿನಿಯರ್ ಅಸೋಸೇಷನ್‌ನವರು ಬರೆದಿರುವುದರಲ್ಲಿ ಒಂದನ್ನು ಕೋಟ್ ಮಾಡುತ್ತಾರೆ. ಅಧ್ಯಕ್ಷರ ನುಡಿ, ಮಂಡಲಿಯಲ್ಲಿ ಇಂಜಿಯರುಗಳ ಮೇಲೆ ಮಾನಸಿಕ ಹಿಂಸೆ ಹೆಚ್ಚಾಗುತ್ತಾ ನಡೆದಿದೆ. ಮಂಡಳಿಗಳಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಹಾಗೂ ತಪ್ಪಿತಸ್ಥರಲ್ಲದವರಿಗೂ ಅಮಾನತ್ತು ಗೊಳಿಸುವುದು ದಿನನಿತ್ಯದ ಕೆಲಸವಾಗಿದೆ. ಅಮಾನತ್ತುಗೊಳಿಸಲು ಅಧಿಕಾರವಿಲ್ಲದಿದ್ದರೂ ಕೂಡ ಇಂಜಿನಿಯರ್‌ಗಳನ್ನು ಅಮಾನತ್ತು ಗೊಳಸುವುದು ದಿನನಿತ್ಯದ ಕೆಲಸವಾಗಿದೆ. ಅಂದರೆ ಅಮಾನತ್ತುಗೊಳಿಸಿದ ಅಧಿಕಾರ ಇಲ್ಲದ ಅಧಿಕಾರಿ ಕೂಡ ಇಂಜಿನಿಯರ್‌ಗಳನ್ನು ಅಮಾನತ್ತುಗೊಳಿಸುತ್ತಿದ್ದಾರೆ. ಈ ರೀತಿ ನಿಯಮದ ಪ್ರಕಾರ ಬರಲಿಕ್ಕೆ ಇಲ್ಲ ಎಂಬುದನ್ನು ತಿಳಿಸಿದರೆ ಅವರು ಅಧ್ಯಕ್ಷರತ್ತ ಬೆರಳು ಮಾಡಿ ತೋರಿಸುತ್ತಾರೆ. ಎಲ್ಲಾ ಬೆರಳುಗಳು ದೋಷಗಳು ಕೆಇಬಿ ಅಧ್ಯಕ್ಷರು ಹೀಗೆ ಎಲ್ಲಾ ತೋರಿಸಿದ ಬೆರಳುಗಳು ಆ ಕಡೆ ಹೋದರೂ ಕೂಡ ಅವರನ್ನು ಏಕೆ ಆರೋಪ ಮಾಡಿ ಅಪಕೀರ್ತಿಗೆ ಗುರಿಯಾಗುತ್ತೀರಿ ಎನ್ನುವುದು ನನ್ನ ಅಪವಾದ. ಇದಕ್ಕೆ ಕಾಗೋಡು ತಿಮ್ಮಪ್ಪನವರು ಎದ್ದು ಬಿಡುತ್ತಾರೆ. ಅದರಿಂದ ನನಗೆ ನಷ್ಟವಿಲ್ಲ. ನೀವು ಅನುಭವಿಸುತ್ತೀರಿ ಅನುಭವಿಸಿ.

ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಒಂದು ಮಾತು. ಈ ಸಸಿ ತೋಟಗಾರಿಕೆ ಸಹಕಾರ ಸಂಘ ಎಂದು ಏನಿದೆ ಇದು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿರುವಂಥ ಕೆಲಸ. ನಮಗೆ ಬೇಕಾಗಿರುವಂಥ ಮಾವಿನ ಗಿಡ, ಕಿತ್ತಲೆ ಗಿಡ ಇತ್ಯಾದಿಯನ್ನು ಈ ನರ್ಸರಿಯವರು ಮಾಡಿ ಕೊಡುತ್ತಾರೆ. ಈ ನರ್ಸರಿಯವರು ಈ ಪ್ರಯತ್ನವನ್ನು ಮಾಡದೇ ಇದ್ದಿದ್ದರೆ ನಮ್ಮ ಬೆಂಗಳೂರು ಡಿಸ್ಟ್ರಿಕ್ಟ್ ಅದರಲ್ಲೂ ಬೆಂಗಳೂರು ರೂರಲ್ ಮತ್ತು ಕೋಲಾರ್‌ನ ಕೆಲವು ಭಾಗಗಳಲ್ಲಿ ನಾವು ಇಂದು ಏನು ಹೊಸ ತಳಿಗಳನ್ನು ಏನು ಕಾಣುತ್ತಿದ್ದೇವೆ. ಅದು ಸಾಧ್ಯವಾಗುತ್ತಿರಲಿಲ್ಲ. ಇದು ಶ್ರೀ ಮನ್‌ಮೋಹನ್ ಅತ್ತಾವರ್‌ರವರ ಶ್ರಮದ ಪ್ರತಿಫಲ. ಅವರು ರಾಷ್ಟ್ರ ಪ್ರಶಸ್ತಿಗೆ ಯೋಗ್ಯವಾಗಿರುವಂಥ ಕೆಲಸವನ್ನು ಮಾಡಿದ್ದಾರೆ. ಆದರೆ ನೀವು ಏನು ಮಾಡಿದ್ದೀರಿ. ರೈತರಿಗೆ 5 ಹೆಚ್‌ಪಿ ಪವರ್‌ಗಳನ್ನು 50 ರೂ.ಗಳ ದರದಲ್ಲಿ ಕೊಟ್ಟಿದ್ದೀರಿ.

ಇವರಿಗೆ 5 ರಿಂದ 10 ಹೆಚ್‌ಪಿ ಪವರ್‌ನ್ನು 130 ರೂ.ಗಳ ದರದಲ್ಲಿ ಕೊಡುವುದಕ್ಕೆ ನಿಗಧಿ ಮಾಡಿದ್ದೀರಿ. ಹುಡುಕಿದರೆ ತೋಟಗಾರಿಕೆ ಸಹಕಾರ ಸಂಘಗಳು ಎಲ್ಲೋ

ಹುಡುಕಿದರೆ ಒಂದು 8-10 ಕಾಣಬಹುದು. ಸರ್ ಮಿರ್ಜ ಇಸ್ಮಾಯಿಲ್‌ರವರ ಕಾರದ ಕಥೆಯನ್ನು ಹೇಳುತ್ತೇನೆ. ಇದು ನನಗೆ ಹೆಚ್ಚಾಗಿ ಗೊತ್ತಿಲ್ಲ. ಮಾನ್ಯ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರಿಗೆ ಹೆಚ್ಚು ಗೊತ್ತಿರಬೇಕು. ಶ್ರೀ ಮಿರ್ಜ ಇಸ್ಮಾಯಿಲ್‌ರವರು ಬೆಳಿಗ್ಗೆ ಎದ್ದು ನರ್ಸರಿಗಳು ಎಲ್ಲಿವೆ ಎಂದು ಹುಡುಕಿಕೊಂಡು ಹೋಗುತ್ತಿದ್ದರಂತೆ.

ಶ್ರೀ ವಾಟಾಳ್ ನಾಗರಾಜ್ : ತಾವು ಯಾವ ಕಾಲದ್ದು ಹೇಳುತ್ತಿದ್ದೀರಿ. ಯಾರಿಗೆ ಹೋಲಿಕೆ ಮಾಡುತ್ತಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ಏಕೆ ಹೋಲಿಕೆ ಮಾಡುತ್ತಿದ್ದೇನೆಂದರೆ ಅವರಿಗೆ ಅಗ್ರಿಕಲ್ಚರ್ ಮೇಲೆ ಇದ್ದಂತ ಆಸೆ, ಅಭಿವೃದ್ಧಿಪಡಿಸಬೇಕು ಎನ್ನುವ ಉತ್ಸುಕತೆ ಏನಿತ್ತು ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅವರು ಅಗ್ರಿಕಲ್ಚರಿಸ್ಟ್‌ನ್ನು ಬೆನ್ನುತಟ್ಟಿ ಬರುತ್ತಿದ್ದ ಕಾಲ ಒಂದಿತ್ತು. ಈಗ ಒಬ್ಬ ನರ್ಸರಿಯವರು 3 ಹೆಚ್‌ಪಿಗೆ ರೂ. 2000 ರಿಂದ 3000 ರೂ.ಗಳನ್ನು ಪ್ರತಿ ತಿಂಗಳಿಗೆ ಕಟ್ಟುವಂಥ ವ್ಯವಸ್ಥೆಯನ್ನು ಕೆಇಬಿಯವರು ಮಾಡಿದ್ದಾರೆ. ಇದರ ಹೊರೆ ಯಾರ ಮೇಲೆ ಬೀಳುತ್ತದೆ? ರೈತರ ಅದನ್ನು ಕೊಡಬೇಕಾಗಿದೆ. ಆದ್ದರಿಂದ ದಯವಿಟ್ಟು ಇದನ್ನು ರಿವೈಸ್ ಮಾಡಿ. ಬಂದು 30-40 ನರ್ಸರಿಗಳು ಇರಬಹುದು. ಅವುಗಳನ್ನು ರೆಗ್ಯುಲರ್ ಎಂದು ಹೇಳಿ ಕಮರ್ಷಿಯಲ್ ರೇಟ್ ಹಾಕಿ ನರ್ಸರಿಗಳನ್ನು ಕೊಲ್ಲಬೇಡಿ. ರೈತರಿಗೆ ಕೊಟ್ಟಹಾಗೆ ಈ ನರ್ಸರಿಗಳವರಿಗೂ ಕನ್‌ಸೆಷನ್ ಕೊಡಬೇಕು. ಇಷ್ಟು ಮಾತನ್ನು ಹೇಳುತ್ತಾ ಈ ನಮ್ಮ ಪಿಡಬ್ಲ್ಯೂಡಿ ಇಲಾಖೆ ಬಗ್ಗೆ ನಾನು ಈಗಾಗಲೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಕಳೆದ ಬಾರಿ ಮಾನ್ಯ ಪುಟ್ಟಸ್ವಾಮಿಗೌಡರವರು ಈ ಇಲಾಖೆಯ ಮಂತ್ರಿಗಳಾಗಿದ್ದರು. ಈಗ ಶ್ರೀ ಅಶ್ವಥ್‌ರೆಡ್ಡಿ ಯವರು ಮಂತ್ರಿಯಾಗಿದ್ದಾರೆ. ಮಾನ್ಯ ಪುಟ್ಟಸ್ವಾಮಿಗೌಡರು ಅಪ್ಪಣೆ ಕೊಡಿಸಿದ್ದರು.

ಪ್ರತಿ ಕ್ಷೇತ್ರಕ್ಕೆ 18 ಪ್ಲಸ್ 12 ಒಟ್ಟು 30 ಲಕ್ಷ ರೂ.ಗಳ ಕೆಲಸವನ್ನು ಮಾಡಿಸುತ್ತೇವೆಂದು ನನ್ನ ಕ್ಷೇತ್ರದಲ್ಲಿ ಒಂದೂ ಬಜೆಟ್‌ದ್ ವರ್ಕ್ ಇಲ್ಲ . ವಿರೋಧ ಪಕ್ಷದ ನಾಯಕರು ಎಂದು ಕೈ ಬಿಟ್ಟರೋ ಅಥವಾ ಎಲ್ಲರಿಗೂ ಇದೇ ಗತಿಯೋ ಎಂದು ಗೊತ್ತಿಲ್ಲ. Not even one I would like to know why?

ಆದಾದಮೇಲೆ, ಈ ಸಲ ಭಾರಿ ಮಳೆಯಾಗಿ ಸಂಪೂರ್ಣವಾಗಿ ಕಮ್ಯುನಿಕೇಷನ್ ನಿಂತುಹೋಗಿದೆ. ಮಲೆನಾಡು ಪ್ರದೇಶದಲ್ಲಿ ಕಮ್ಯುನಿಕೇಷನ್ ಟೋಟಲ್ ಆಗಿ ನಿಂತು ಹೋಗಿದೆ. ಅಲ್ಲಿ ಶರಾವತಿ ಸೇತುವೆ ಹೋಗಿದೆ ನನಗೆ ಬಂದಿರುವ ಮಾಹಿತಿ ಪ್ರಕಾರ, ನಿಮಗೆ ಈ ಮಾಹಿತಿ ದೊರಕಿದೆಯೋ ಇಲ್ಲವೋ ಗೊತ್ತಿಲ್ಲ, ಪ್ರತಿಯೊಂದು ವಾಹನವು ರಾತ್ರಿ ಹೊತ್ತಿನಲ್ಲಿ ರೂ. 100-400 ಕೊಟ್ಟು ಈ ಸೇತುವೆ ಮೇಲೆ ಬರುತ್ತವೆ. ಈ ಸೇತುವೆಯ ಗತಿ ಏನಾಗಬೇಕು? ಇದು ಮುಖ್ಯ ಮಂತ್ರಿಯವರ ಕ್ಷೇತ್ರ ನನ್ನ ಕ್ಷೇತ್ರ, ಕಾಗೋಡು ತಿಮ್ಮಪ್ಪ ಕ್ಷೇತ್ರ ಮತ್ತು ಸ್ವಾಮಿರಾವ್‌ರವರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ರಸ್ತೆಗಳ ವಿಚಾರವಾಗಿದೆ. ಈ ಎಲ್ಲಾ ಕ್ಷೇತ್ರಗಳ ಡಿಸ್ಟ್ರಿಕ್ಟ್ ರಸ್ತೆಗಳು ಸರ್ಕಾರದ ಲೆಕ್ಕದಲ್ಲಿ ಉಳಿದಿಲ್ಲವೆಂದು ಕಾಣುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಪರಿಸ್ಥಿತಿ ಶಿವಮೊಗ್ಗಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಇಡೀ ರಾಜ್ಯದ ಪರಿಸ್ಥಿತಿಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸೇತುವೆ ಹೋಗಿದೆ ಎಂದು ಹೇಳಿ, ಎರಡು ಟನ್ ಕೆಪಾಸಿಟಿ ಇಲ್ಲದೇ ಇರುವಂಥ ಈ ಡಿಸ್ಟ್ರಿಕ್ಟ್ ರೋಡ್ ಮೇಲೆ 8-12 ಟನ್ ಇರುವಂಥ ಬಸ್‌ಗಳನ್ನು ಲಾರಿಗಳನ್ನು ಬಿಟ್ಟು, ರಸ್ತೆಯನ್ನು ನೋಡುವುದಕ್ಕೆ

ಆಗುವುದಿಲ್ಲ. ಮಾನ್ಯ ಅಧ್ಯಕ್ಷರು ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಸ್ವಲ್ಪ ಹೊತ್ತಿಗೆ ಇದನ್ನು ಅನುಭವಿಸಿದ್ದಾರೆಂದು ಅಂದುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರು ನನ್ನ ಕ್ಷೇತ್ರಕ್ಕೆ ಬಂದಿದ್ದರು. ಆ ಕಾರಣಕ್ಕೆ ಹೇಳುತ್ತಿದ್ದೇನೆ. ಜೊತೆಗೆ ಹೊಸಪೇಟೆ ಮಂಗಳೂರು ರಸ್ತೆಯಲ್ಲಿ ನೋಡುವುದಕ್ಕೆ ಬೇಕಾದಷ್ಟು ಪ್ರದೇಶಗಳಿವೆ. ಶೃಂಗೇರಿಯಿಂದ ಆಗುಂಬೆಯವರೆಗೂ ಸ್ವಲ್ಪ ಬರಬಹುದು. ಆಗುಂಬೆಯಿಂದ ಕೆಳಕ್ಕೆ ರಸ್ತೆ ತಮಟೆ ಬಾರಿಸುತ್ತದೆ. ತಮಟೆ ಬಾರಿಸುವುದು ಎಂದರೆ ನಿಮಗೆ ಗೊತ್ತಾಗುತ್ತದೆಯೇ? ಅಲ್ಲಿ ಏನಾಗಿದೆಯೆಂದರೆ ಸಿಮೆಂಟ್ ರಸ್ತೆ ತುಂಡುತುಂಡಾಗಿ ಬಿಟ್ಟಿದೆ. ಗಾಡಿಗಳು ಹೋದರೆ ತಮಟೆ ಬಾರಿಸುತ್ತವೆ. ಸಣ್ಣ ಸಣ್ಣ ಚೂರುಗಳು ಎದ್ದುಬಿಟ್ಟಿದೆ. ಆ ತಮಟೆಗಳನ್ನು ಕಿತ್ತಹಾಕಿಸಿಬಿಡಿ. ಎಷ್ಟೋ ವರ್ಷಗಳಿಂದ ಈ ಸ್ಥಿತಿಯನ್ನು ಅನುಭವಿಸಿದ್ದೇವೆ. ಅಲ್ಲದೆ ಮಲೆನಾಡಿಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಮಂಡಳಿ ಮಾಡುತ್ತೇವೆ ಎಂದರು.

ಶ್ರೀ ಆರ್.ಎಸ್. ನಾಯಕ್ : ನಮ್ಮ ಸರ್ಕಾರ ಬಂದಾಯಿತು ಅವರ ಸರ್ಕಾರ ಬಂದಾಯಿತು. ಆಗ ನೀವು ನಿದ್ದೆ ಮಾಡ್ತಾ ಇದ್ರಾ.

ಶ್ರೀ ಡಿ.ಬಿ. ಚಂದ್ರೇಗೌಡ : ನಾಯಕರೆ, ಅದಕ್ಕೆ ಸ್ವಾಮಿ ನಾನಿಲ್ಲಿ ಕೂತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ನಾವು ಬಂದು ಎರಡು ವರ್ಷ ಆಗಿಲ್ಲ, ಆಗ ನೀವು ನಿದ್ದೆ ಮಾಡುತ್ತಿದ್ದೀರಾ? ಆಗ ಏತಕ್ಕೆ ಎದ್ದಿಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಇಲ್ಲಿ ಬರಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಅವರಿಬ್ಬರೂ ಮಾತನಾಡಿಕೊಳ್ಳುತ್ತಿರುವಂತೆ ನಾವೇನು ಮಾಡಬೇಕು? ನೀವು ಅಲ್ಲಿ ಬರುತ್ತೀರಿ, ಇಲ್ಲ ಬರುತ್ತೀರಿ ಎಂದರೆ....

ಅಧ್ಯಕ್ಷರು : ನೀವು ಹಸನ್ಮುಖಿಗಳಾಗಿ ಕುಳಿತಿದ್ದೀರಿ. ಹಾಗೆಯೇ ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಹಸನ್ಮುಖಿಗಳಾಗಿಲ್ಲ, ಅವರು ಆ ಬಾವಿಯ ಜಾಗವನ್ನು ಗೊತ್ತು ಮಾಡಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ವಿರೋಧಪಕ್ಷದ ನಾಯಕರು ಅತ್ಯಂತ ಶೋಕನೀಯವಾಗಿ ಹೇಳುತ್ತಿದ್ದಾರೆ. ನಮ್ಮನ್ನು ಬಾವಿಗೆ ಬೀಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾವು ಬಾವಿಗೆ ಬೀಳುವುದಕ್ಕೆ ತಯಾರಿಲ್ಲ.... ಈ ಸಭೆಯಲ್ಲಿ ಬಹಳ ತಾಪತ್ರಯವಾಗಿದೆ. ನೀವು ಸರ್ಕಾರ ನಡೆಸಿದವರು, ಈಗ ಸರ್ಕಾರದಲ್ಲಿರುವವರು. ಇವರಿಬ್ಬರ ಘರ್ಷಣೆ ಮಧ್ಯೆ ನಾವು ಸಿಕ್ಕಿರುವುದರಿಂದ ಬಹಳ ಕಷ್ಟರಾಗಿದೆ. ಎರಡು ಕೋಣೆಗಳ ಮಧ್ಯೆ ನಾವು ಬಹಳ ಕಷ್ಟಕ್ಕೆ ಸಿಕ್ಕಿದ್ದೇವೆ. ಅದಕ್ಕೆ ತಾವು ನಮಗೆ ರಕ್ಷಣೆ ನೀಡಬೇಕೆಂದು ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಪಿಡಬ್ಲ್ಯೂಡಿ ಮೇಲೆ ಮಾತನಾಡುತ್ತಿದ್ದಾರೆ. ನಾನು ಅದರ ಮೇಲೆ ಮಾತನಾಡುತ್ತಿಲ್ಲ. ಅವರು ಈಲ್ಡ್ ಆಗುವುದಕ್ಕೆ ಒಂದು ನಿಮಿಷ ಕೇಳಿಕೊಂಡಿದ್ದೇನೆ. ಈಗ ಮೂರು ದಿವಸಗಳ ಹಿಂದೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನನ್ನ ಬಳಿ ಬಂದು 1992-93 ಬಜೆಟ್‌ನಲ್ಲಿ ಸೇರಿಸುವುದಕ್ಕೆ ನಲವತ್ತು ಲಕ್ಷ ರೂಪಾಯಿಗಳ ಕೆಲಸ ಪ್ರೊಪೋಸ್ ಮಾಡಬೇಕೆಂದರು. ನನಗೆ ಬಹಳ ಸಂತೋಷವಾಯಿತು. ಹಳ್ಳಿ ರಸ್ತೆಗಳನ್ನು ಮತ್ತು ಸೇತುವೆಗಳನ್ನು ಮಾಡಿಸಿಕೊಳ್ಳೋಣವೆಂದು ಹೇಳಿ ಒಂದು ಲಿಸ್ಟ್ ಪ್ರಿಪೇರ್ ಮಾಡಿದೆ. ಅವರು ಹೇಳುತ್ತಾರೆ. ಇದಲ್ಲಾ ಸಾರ್, ಮತ್ತೇನು ಎಂದರೆ ಎಲ್ಲೆಲ್ಲಿ

ಕಿತ್ತು ಹೋಗಿದೆ ಅಲ್ಲಿ ಚಿಪ್‌ಕಾರ್ಪೆಟಿಂಗ್ ಮಾಡಬೇಕು ಎಂದರು. ಪಿಡಬ್ಲ್ಯೂಡಿಗೆ ಕೊಡುವುದಕ್ಕೆ ಶಾಸಕನಾದವನು ಏತಕ್ಕೆ ಬರೆದು ಕೊಡಬೇಕು? ಬಹುಶಃ ಉದ್ದೇಶ ಇದ್ದಿರಬಹುದು. ನಲವತ್ತು ಲಕ್ಷ ರೂಪಾಯಿಗಳ ಕೆಲಸ ನಾನು ಮಾಡಿಕೊಟ್ಟಿದ್ದೇನೆಂದು ಹೇಳಿ ಐದು ಪರ್ಸೆಂಟ್ ನಾನು ಕಮೀಶನ್ ವಸೂಲು ಮಾಡಿಕೊಳ್ಳುವುದಕ್ಕೆ ಇದೊಂದು ವ್ಯವಸ್ಥೆ ಮಾಡಿರಬಹುದೆಂದು ತಿಳಿದು ನಾನು ಕೊಡುವುದು ಕೊಡುತ್ತೇನೆ. ಮಾಡಿದರೆ ಮಾಡಲಿ ಬಿಟ್ಟರೆ ಹೋಗಲಿ ಎಂದು ಹಳ್ಳಿ ರಸ್ತೆಗಳ ಪಟ್ಟಿ ಮಾಡಿ ಕಳುಹಿಸಿದೆ. ಪಿಡಬ್ಲ್ಯೂಡಿ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಏತಕ್ಕೆ ನಲವತ್ತು ಲಕ್ಷ ರೂಪಾಯಿಗಳ ಚಿಪ್‌ಕಾರ್ಪೆಟಿಂಗ್ ಕೆಲಸ ಮಾಡುವುದು? ನಿಮ್ಮ ಸ್ಟೇಟ್ ಹೈವೇಸ್ ರಿಪೇರಿ ಮಾಡುವುದಕ್ಕೆ ನಮ್ಮ ಕೈಯಲ್ಲಿ ಏತಕ್ಕೆ ಬರೆಸಿಕೊಳ್ಳುತ್ತಾರೆ? ಎಂಬುದನ್ನು ದಯವಿಟ್ಟು ನಮಗೆ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ನಾನು ಅದನ್ನೇ ಹೇಳೋದಕ್ಕೆ ಹೋಗುತ್ತಿದ್ದೆ. ಅವರು ಪ್ರಸ್ತಾಪ ಮಾಡಿದ್ದಾರೆ. I don't waste the time of the house. ಆದುದರಿಂದ ಆ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ. ಈ ತೀರ್ಥಹಳ್ಳಿಗೆ ಪ್ರವೇಶ ಮಾಡತಕ್ಕಂಥ ಒಂದು ಸೇತುವೆ ವಿಚಾರವಾಗಿ ಮೂರನೇ ವರ್ಷ ಬರೆದೆ. ಅಲ್ಲಿ ಒಂದು ಅಪಘಾತ ನಡೆದು, 22 ಜನ ಸತ್ತುಹೋಗಿದ್ದರು. ಇನ್ನೂ 22 ಜನ ಸತ್ತಮೇಲಾದರೂ ಮಾಡುತ್ತಾರೋ ಏನೋ ಗೊತ್ತಿಲ್ಲ. ದಯವಿಟ್ಟು ಎಂಟ್ರೆನ್ಸ್‌ನಲ್ಲಿ ಕುಶಾವತಿ ನದಿಗೆ ಅಡ್ಡಲಾಗಿ ಒಂದು ಸೇತುವೆ ಇದೆ. ಅಲ್ಲಿ 2-3 ವರ್ಷಗಳ ಹಿಂದೆ ಒಂದು ಬಸ್ ಅಘಾತವಾಗಿ ೨೨ ಜನ ಸತ್ತಿದ್ದರು. ಸೇತುವೆ ಕುಸಿದಿದೆಯೆಂದು ಕಂಬ ಕೊಟ್ಟು ನಿಲ್ಲಿಸಿದ್ದಾರೆ. ಅದನ್ನು ಎಲ್ಲಿಯಾದರೂ ಒಂದು ಕಡೆ ಸೇರಿಸುವುದಕ್ಕೆ ಪ್ರಯತ್ನ ಮಾಡಿ. ಹಾಗೆಯೇ ಮುಳುಗಡೆ ಪ್ರದೇಶ, ಬ್ಯಾಕ್‌ವಾಟರ್ಸ್ ಬಂದು ನಿಲ್ಲತಕ್ಕಂಥ......ಹಿಂದೆ ಇದರ ಬಗ್ಗೆ ದೊಡ್ಡ ಗಲಾಟೆಯಾಗಿ ಆ ಒಂದು ಸ್ಥಳದಲ್ಲಿ ಒಂದು ಸೇತುವೆಯಾಗಿದೆ. ಅಲ್ಲಿಂದ ಮೇಲುಗಡೆ ಹೊಸಳ್ಳಿ ಎನ್ನುವ ಊರಿಗೆ ಸೇತುವೆ ಆಗಬೇಕೆಂದು ಆಗಿನ ಚೀಫ್ ಸೆಕ್ರೆಟರಿಯಾಗಿರತಕ್ಕಂಥವರು ಕೂಡಾ ನೋಡಿ ಒಪ್ಪಿಕೊಂಡಿದ್ದರು. ಅದ್ಯಾಕೋ ಅದು ನಿಂತುಹೋಯಿತು.

ಅಂತಹುದೇ ಮತ್ತೊಂದು ಕಳಸ, ಹೊರನಾಡಿನಲ್ಲಿ ಈ ಒಕ್ಕಲಿಗರು ಎಂದು ಹೇಳುವಾಗ don't be under the impression that I am talking about the community or caste. ಅಲ್ಲೊಂದು ಅನ್ನಪೂರ್ಣೇಶ್ವರಿ ದೇವಸ್ಥಾನವಿದೆ. ಅಲ್ಲಿರುವ ವ್ಯವಸಾಯಗಾರರಿಗೆಲ್ಲಾ ಅದು ಆರಾಧ್ಯ ದೇವತೆ. ಜಾತಿ-ಮತ, ಪಂಥವೆಂಬ ಬೇಧವಿಲ್ಲದೆ ಎಲ್ಲರೂ ಅಲ್ಲಿಗೆ ಹೋಗುತ್ತಾರೆ.

ನಾನು ಮಂತ್ರಿಯಾಗಿದ್ದಾಗ ಅಲ್ಲಿನ ಒಂದು ಸೇತುವೆಗೆ ಅಡಿಪಾಯವನ್ನು ಹಾಕಿದ್ದೆ. ಆದರೆ ಮುಂದೆ ಬಂದಂತಹ ಸರ್ಕಾರಗಳು ಅದನು ಬದಲಾಯಿಸಿದರು. ಯಾಕೋ ಗೊತ್ತಿಲ್ಲ, ಏನು ಕಾರಣವೋ ಗೊತ್ತಿಲ್ಲ, ಕಾರಣ ಏನೇ ಇರಲಿ ಸುಮಾರು ಅಂದು 28 ಲಕ್ಷದ ಅಂದಾಜಿನ ಸೇತುವೆ ಮತ್ತು ರಸ್ತೆಯಲ್ಲಿ ಕನಿಷ್ಠ ಪಕ್ಷ ಒಂದು ಕ್ರಾಸ್ ವೇಯನ್ನಾದರೂ ಮಾಡಿಕೊಡಿ. ಸಹಸ್ರಾರು ಜನರು ಹೋಗತಕ್ಕ ಆ ಪ್ರದೇಶದಲ್ಲಿ ಪುಕ್ಕಟೆ ಊಟ, ವಸತಿಯನ್ನು ಕೊಡತಕ್ಕ ವ್ಯವಸ್ಥೆಯನ್ನು ಬೇರೆಯವರು ಮಾಡುವಾಗ ಸರ್ಕಾರ ಇಂತಹ 2-3 ಕೆಲಸಗಳನ್ನಾದರೂ ಮಾಡಿಸಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. 40ಲಕ್ಷ ಕಾಮಗಾರಿಯ ಪಟ್ಟಿಯನ್ನೇನೋ ಕಳಿಸಿದ್ದೀರಿ. ಈ ಪಟ್ಟಿಯಲ್ಲಿರುವುದು ಕಾರ್ಯರೂಪಕ್ಕೆ ಬರುತ್ತದೆಂದು ತಿಳಿದು ಕೊಂಡಿದ್ದೇನೆ. ಅದು ಕಾರ್ಯರೂಪಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ಇಲ್ಲಿ ವಿಶೇಷವಾದಂತಹ ಒಂದೇ ಒಂದು ಪ್ರಸ್ತಾಪ ಏನೆಂದರೆ ಲಿಫ್ಟ್ ಇರಿಗೇಷನ್‌ದೂ ಮತ್ತು ಕಾರ್ಪೊರೇಷನದ್ದೂ ಈ ಎರಡನ್ನು ಏನು ಮಾಡಿದಿರಿ. ಒಂದು ಕಾರ್ಪೊರೇಷನ್ನು ತುಂಗಭದ್ರಾ ನದಿಯ ವ್ಯಾಪ್ತಿಗೆ ಬರುತ್ತದೆ ಮತ್ತೊಂದು ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಿದ್ದು ಇದು ನೀರಾವರಿಯ ಮಂತ್ರಿಗಳಿಗೆ ಬರುತ್ತದೋ ಏನೋ ಗೊತ್ತಿಲ್ಲ. ನಾನ ಹೇಳಿದಂತೆ ಇದೇ ರೀತಿ ಮುಂದುವರೆದರೆ ಎರಡು ಸಾವಿರದ ಇಸವಿಯೊಳಗೆ ಭದ್ರ ಅಥವಾ ಕೃಷ್ಣ ಸೀರಿಸ್‌ನಲ್ಲಿರತಕ್ಕ ನೀರನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಕಷ್ಟವಾಗುತ್ತದೆ. ಆದುದರಿಂದ ಈ ಏತ ನೀರಾವರಿ ಯೋಜನೆಗಳನ್ನು ಹೆಚ್ಚಾಗಿ ಮಾಡಬೇಕು. ನಮ್ಮ ಕ್ಷೇತ್ರಕ್ಕೆ ಸೀಮಿತವಾಗಿ 8 ಏತ ನೀರಾವರಿ ಯೋಜನೆಗಳ ಪೈಕಿ ಒಂದಕ್ಕೂ ಮಂಜೂರಾತಿಯಾಗಿಲ್ಲ. ಹಾಗಾದರೆ ಈ ಕಾರ್ಪೊರೇಷನ್ ಏನಾದರು ಕೆಲಸ ಮಾಡುತ್ತಿದಯೇ? ಅಥವಾ ಇಂಜಿನಿಯರ್‌ಗಳಿಗೆ ಬರೀ ಸಂಬಳವನ್ನು ಕೊಡುತ್ತೀರೋ ಈ ಕಾರ್ಪೊರೇಷನ್ ಕೆಲಸವನ್ನು ತೆಗೆದಕೊಳ್ಳತಕ್ಕ ಏನಾದರೂ ಆಲೋಚನೆಯನ್ನು ಸರ್ಕಾರ ಮಾಡುತ್ತದೆಯೇ. ಅದನ್ನು ತಿಳಿಸಬೇಕೆಂದು ಹೇಳಿ ಈ ಬೇಡಿಕೆಗಳ ಬಗ್ಗೆ ಸುಧೀರ್ಘವಾಗಿ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಈ ಬೇಡಿಕೆಯನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಮನೋಹರ್ ಐನಾಪುರ (ಬಳ್ಳೊಳ್ಳಿ) : ಸನ್ಮಾನ್ಯ ಅಧ್ಯಕ್ಷರೆ ಕರ್ನಾಟಕ ರಾಜ್ಯದಲ್ಲಿ ಅತಿ ಹಿಂದುಳಿದ ಮತ್ತು ಸದಾ ಬರಗಾಲಪೀಡಿತ ಜಿಲ್ಲೆ ಎಂದರೆ ಬಿಜಾಪುರ ಜಿಲ್ಲೆ, ಮೊದಲಿನಿಂದಲೂ ನಾನು ಸದನದಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದೇನೆ. ಇದು ಸಾಕಷ್ಟು ಕಡೆ ಗಣಿಸಲ್ಪಟ್ಟ ಜಿಲ್ಲೆ, ಇದು ಹಿಂದುಳಿದ ಜಿಲ್ಲೆ, ಅತಿ ದೊಡ್ಡ ಜಿಲ್ಲೆ, ರಾಜಧಾನಿಯಿಂದ ಸುಮಾರು 700 ಕಿ.ಮಿ. ದೂರದಲ್ಲಿದ್ದು ಮಹಾರಾಷ್ಟ್ರ ರಾಜ್ಯದ ಗಡಿಯಲ್ಲಿ ಅಂಟಿಕೊಂಡಿದೆ. ಅಲ್ಲಿನ ಮುಖ್ಯವಾದ ಉದ್ಯೋಗ ಒಣಬೇಸಾಯ. ರೈತರು ಸ್ವತಃ ಬಾವಿಯನ್ನು ತೋಡಿಕೊಂಡು ಕೆರೆ, ಬಾವಿ, ನಾಲೆ ಇಲ್ಲದಿದ್ದ ಕಾರಣ ನದಿಯಿಂದ ಪೈಪ್ ಲೈನ್‌ನ್ನು ಮಾಡಿಕೊಂಡು ನೀರಾವರಿಯನ್ನು ಮಾಡಿಕೊಂಡು ಕಷ್ಟದ ಜೀವನವನ್ನು ನಡೆಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚಿನ ಪಂಪ್ ಸೆಟ್‌ಗಳನ್ನು ನಮ್ಮ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಹೊಂದಿದೆ. ಇಲ್ಲಿ ಸುಮಾರು ೧೬ ಸಾವಿರ ಪಂಪ್‌ಸೆಟ್ ಸಂಪರ್ಕವನ್ನು ಪಡೆದಿದೆ.

ಇದರಿಂದಲೇ ರೈತರು ಬೇಸಾಯವನ್ನು ಮಾಡುತ್ತಿದ್ದಾರೆ. ಅಲ್ಲಿ ಕೆ.ಇ.ಬಿ.ಯಿಂದ ಪವರ್ ಸಪ್ಲೈ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ನಾನೊಬ್ಬನೇ ಹೇಳುವ ಅವಶ್ಯಕತೆ ಇಲ್ಲ. ಈ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ. ರೈತರ ಗೋಳು ಯಾವ ರೀತಿ ಇದೆ. ಅದರಲ್ಲೂ ವಿಶೇಷವಾಗಿ ರಾಜ್ಯದ ಕೊನೆಯಲ್ಲಿ ಇರತಕ್ಕ ಈ ಬಿಜಾಪುರ ಜಿಲ್ಲೆಗೆ ಯಾವ ರೀತಿ ಸರ್ಕ್ಯುಲೇಷನ್ ಬರುತ್ತಿದೆ ಎನ್ನುವುದನ್ನು ನಾವು ಹಳ್ಳಿಗಳಿಗೆ ಹೋದಾಗ ರೈತರು ಒಂದು ರೀತಿಯಲ್ಲ ನಾನಾ ರೀತಿಯಲ್ಲಿ ನಮ್ಮನ್ನು ಕೇಳುತ್ತಾರೆ ಈ ಸದನದಲ್ಲಿ ಬಜೆಟ್ ಮೇಲೆ ಬಾಷಣ ಮಾಡುತ್ತಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಸುಮಾರು ಈ ವರ್ಷದಲ್ಲಿ 60 ಸಾವಿರ ಟಿ.ಪಿ. ಸೆಟ್‌ಗಳು ಹೊಸದಾಗಿ ಸಂಪರ್ಕವನ್ನು ಕೊಟ್ಟಿದ್ದೇವೆಂದು ಹೇಳಿದರು. ಆ ಪ್ರಕಾರ ನಮ್ಮ ಬಿಜಾಪುರ ಜಿಲ್ಲೆ ಪ್ರಪ್ರಥಮವಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಐ.ಪಿ. ಸೆಟ್‌ಗಳ ಸಂಪರ್ಕವನ್ನು ಪಡೆದರೂ ಅದೇನು ಫಲಕಾರಿಯಾಗಲಿಲ್ಲ. ಏಕೆಂದರೆ ಒಂದು ಟ್ರಾನ್ಸ್‌ಫರ್ಮರ್ ಸಾಮರ್ಥ್ಯದ ಕೆಳಗೆ ಇಂತಿಷ್ಟು. ಐ.ಪಿ. ಸೆಟ್‌ಗಳು ಇರಬೇಕೆಂದು ಒಂದು ನಿಯಮವಿರುತ್ತದೆ.

ಆದರೆ ರೈತರು ಒತ್ತಾಯದ ಮೂಲಕ ಐ.ಪಿ. ಸೆಟ್‌ಗಳನ್ನು ಪಡೆದು ತಮ್ಮ ಬೇಸಾಯ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅದಕ್ಕಾಗಿ ಸರಿಯಾಗಿ ವಿದ್ಯುತ್ ಸಪ್ಲೈ ಸಿಗುವುದಿಲ್ಲ. ಅಲ್ಲದೆ ಟ್ರಾನ್ಸ್‌ಫರ್ಮರ್ ಸುಟ್ಟು ಹೋಗುತ್ತವೆ. ಪಂಪುಸೆಟ್‌ಗಳು ಬರ್ನ್ ಆಗುತ್ತವೆ. ಒಂದು ಪಂಪ್‌ಸೆಟ್ ಬರ್ನ್ ಆದರೆ ಅದನ್ನು ಸರಿ ಮಾಡಲಿಕ್ಕೆ ಬಡ ಜನರಿಗೆ ಸುಮಾರು ಒಂದು ಸಾವಿರ ರೂಪಾಯಿ ಖರ್ಚಾಗುತ್ತದೆ. ಇದರಿಂದ ಪ್ರತಿಸಲವೂ ಸಹ ರೈತರು ತೊಂದರೆಗೆ ಒಳಗಾಗಿದ್ದಾರೆ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ಒಣ ಬೇಸಾಯವಿರುವುದರಿಂದ ರೈತರು ಕಂಗಲಾಗಿ ಈ ಪವರ್ ಸಪ್ಲೈಗೋಸ್ಕರ ಯಾವ ರೀತಿ ಮಾಡಿದರೆ ನಮಗೆ ಪವರ್ ಸಪ್ಲೈ ಸರಿಯಾಗಿ ಸಿಗುತ್ತದೆಂದು ಅವರು ಪದೇ ಪದೇ ತಮ್ಮ ಮನವಿಗಳ ಮುಖಾಂತರ, ತಮ್ಮ ಶಾಸಕರ ಮುಖಾಂತರ ಮತ್ತು ತಮ್ಮ ರಾಜ್ಯದ ಇತರ ಪ್ರತಿನಿಧಿಗಳ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದಾರೆ. ನಾನು ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಅದೇನೆಂದರೆ ವಿಶೇಷವಾಗಿ ನನ್ನ ಕ್ಷೇತ್ರದ ಮೂರು 33KVA ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿತ್ತು. ಅವು ಯಾವ ಸ್ಥಿತಿಯಲ್ಲಿದ್ದಾವೆಂದರೆ ಅದರ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದರು.

ಒಂದೂ ಪ್ರಾರಂಭವಾಗಲಿಲ್ಲ, ಇನ್ನೊಂದು ಮಂಜೂರಾತಿ ಮಾಡುತ್ತೇವೆಂದು ಹೇಳುತ್ತಾರೆ. ಈ ಮೂರು 33 KVA ಸ್ಟೇಷನ್‌ಗಳನ್ನು ಕೂಡಲೇ ಪ್ರಾರಂಭ ಮಾಡಿದರೆ ರೈತರ ಸಮಸ್ಯೆಯನ್ನು ಸ್ವಲ್ಪ ಬಗೆಹರಿಸಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಇಂಡಿ ತಾಲ್ಲೂಕು ರಾಜಧಾನಿಯಿಂದ ದೂರವಿರುವುದರಿಂದ ಈ ತಾಲ್ಲೂಕಿನ ವಿಭಾಗದ ಕೆ.ಇ.ಬಿ. ಪವರ್ ಸ್ಟೇಷನ್ ಸಾಮರ್ಥ್ಯ ಸುಮಾರು 18 ಮೆಗಾವ್ಯಾಟ್‌ಇದೆ. ಆದರೆ ಈಗ ಸಪ್ಲೈ ಆಗುತ್ತಿರುವುದು 15 ಮೆಗಾವ್ಯಾಟ್ ಅದು ಸಹ ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಆದರೆ ಈಗ ಇಂಡಿ ಕೆ.ಇ.ಬಿ ಉಪ ವಿಭಾಗದಿಂದ ಡಿಮ್ಯಾಂಡ್ ಸುಮಾರು 30 ರಿಂದ 40 ಮೆಗಾವ್ಯಾಟ್ ಇದೆ. ಇಂಡಿ ಪವರ್ ಸ್ಟೇಷನ್‌ಗೆ ಕನಿಷ್ಟ ಸಾಮರ್ಥ್ಯವನ್ನು ಕನಿಷ್ಟ 30ರಿಂದ 40 ಮೆಗಾವ್ಯಾಟ್‌ಗೆ ಹೆಚ್ಚಿಸಿದರೆ ಮಾತ್ರ ಸುಮಾರು 16 ಸಾವಿರ ಪಂಪ್‌ಸೆಟ್‌ಗಳಿಗೆ ಅನುಕೂಲವಾಗುತ್ತದೆ ಮತ್ತು ರೈತರಿಗೆ ಸರಿಯಾದಂತಹ ಒಂದು ಪವರ್ ಸಿಗಬಹುದು. ಇದರಿಂದ ಅವರ ಸಮಸ್ಯೆಯನ್ನು ಬಗೆಹರಿಸಬಹುದು. ಕೊನೆಯದಾಗಿ ನಮ್ಮ ಕೆ.ಇ.ಬಿ. ಯ ಲೈನ್‌ಮ್ಯಾನ್‌ಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂದರೆ ನಮ್ಮ ಹಳ್ಳಿಗಳಿಗೆ ಏನು ತೊಂದರೆ ಬಂದರೂ ಹಳ್ಳಿಗಳಿಗೆ ಹೋಗಿ ನೋಡುವುದಿಲ್ಲ. ಕೆಲವರು ಕಂಬಕ್ಕೆ ಹತ್ತುವ ಕೆಲಸ ಅಥವಾ ವೈರ್ ಕನೆಕ್ಷನ್ ಕೊಡುವುದು ಇದನ್ನು ಈ ರೈತರಿಂದಲೇ ಮಾಡಿಸುತ್ತಾರೆ.

ಈ ಲೈನ್‌ಮ್ಯಾನುಗಳು ಇತರ ಕಾರ್ಯಗಳಲ್ಲಿತೊಡಗಿ ಈ ಜನರಿಗೆ ಸರಿಯಾದ ಸರ್ವಿಸನ್ನು ಕೊಡುತ್ತಿಲ್ಲ ಸರ್ಕಾರದವರು ಸಂಬಂಧಪಟ್ಟ ಅಲ್ಲಿನ ಅಧಿಕಾರಿಗಳಿಗೆ ಸರಿಯಾದ ಸೂಚನೆಯನ್ನು ಈ ಬಗ್ಗೆ ಕೊಡಬೇಕೆಂದು ಹೇಳುತ್ತೇನೆ. ಈ ಕೆ.ಇ.ಬಿ. ವಿಚಾರದಿಂದ ನಮ್ಮ ರೈತರು ಬಹಳ ತೊಂದರೆಗೆ ಈಡಾಗಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕಬ್ಬಿನ ಬೆಳೆ ಸ್ವಲ್ಪ ಜಾಸ್ತಿ ಇದ್ದು ಕರೆಂಟ್ ಸರಿಯಾಗಿ ಬರದಿದ್ದರೆ ರೈತರಿಗೆ ತುಂಬಾ ಕಷ್ಟವಾಗುತ್ತದೆ. ಕರೆಂಟ್ ಬೆಳಿಗ್ಗೆ ಒಂದು ಸಲ ಬರುತ್ತದೆ ಮಧ್ಯಾಹ್ನ ಒಂದು ಸಲ ಬರುತ್ತದೆ ಸಾಯಂಕಾಲ ಒಂದೊಂದು ಸಲ ಬರುವುದೇ ಇಲ್ಲ.

ಸ್ವಿಚ್ ಆನ್ ಮಾಡಿ ನೀರು ಬಿಡಲು ಹೋಗುವಷ್ಟರಲ್ಲಿ ಕರೆಂಟ್ ಹೋಗಿರುತ್ತದೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಸಭಾಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಕೆ.ಇ.ಬಿ.ಯ ಪವರ್ ಅನ್ನು ಆದಷ್ಟು ಬೇಗ ನಮ್ಮ

ಭಾಗದಲ್ಲಿ ಹೆಚ್ಚು ಮಾಡಿ ಕನಿಷ್ಠ ಪಕ್ಷ ರಾಯಚೂರು ಥರ್ಮಲ್ ಪ್ಲಾಂಟ್ ಮಾದರಿಯಲ್ಲಿ ಮತ್ತು ಮಂಗಳೂರು ಸೂಪರ್ ಥರ್ಮಲ್ ಪ್ಲಾಂಟ್ ಮಾದರಿಯಲ್ಲಿ ಬಿಜಾಪುರ ಜಿಲ್ಲೆಯನ್ನು ಕಡೆಗಣಿಸದೆ ಇದು ಒಂದು ನಮ್ಮ ರಾಜ್ಯದಲ್ಲಿರುವ ಒಂದು ಜಿಲ್ಲೆ ಇದು ಸಹ ನಮ್ಮ ಇತರೆ ಜಿಲ್ಲೆಗಳಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು ರೈತರಿಗೂ ವಂಚನೆ ಆಗಬಾರದು ಆ ಬಡ ರೈತರಿಗೂ ಸಹಾಯ ಸಿಗಬೇಕೆಂದು ಮತ್ತೊಮ್ಮೆ ನಾನು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷಿಣಿಯವರೇ ಇವತ್ತು ಈ ಸದನದಲ್ಲಿ ಮಂಡಿಸಿರುವ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಒಂದೆರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಲೋಕೋಪಯೋಗೀ ಇಲಾಖೆ ಭಾರಿ ಪ್ರಾಮುಖ್ಯವಾದ ಇಲಾಖೆ ಲೋಕೋಪಯೋಗಿ ಇಲಾಖೆಗೆ ಸೇರಿದಂತಹ ರಸ್ತೆಗಳು ನಿಜವಾಗಿಯೂ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳಾಗಿ ಉಳಿದಿಲ್ಲ. ನಮ್ಮ ದಕ್ಷಿಣಕನ್ನಡ ಜಿಲ್ಲೆ ಕೇರಳ ಗಡಿಗೆ ತಾಗಿರುತ್ತದೆ. ಗಡಿ ಪ್ರದೇಶಕ್ಕೆ ಸೇರತಕ್ಕಂಥ 3-4 ತಾಲ್ಲೂಕುಗಳು ಅದಕ್ಕೆ ಸೇರುತ್ತವೆ. ನನ್ನ ಕ್ಷೇತ್ರದ ವಿಠಲ ಕೂಡ ಕೇರಳ ಗಡಿಗೆ ತಾಗಿಕೊಂಡಿದೆ. ನಮ್ಮ ಕ್ಷೇತ್ರದಿಂದ ಪ್ರಾವಾಸ ಮಾಡಿ ನಾವು ಕೇರಳ ಪ್ರದೇಶಕ್ಕೆ ಪ್ರವೇಶ ಮಾಡಿದಂತಹ ಸಂದರ್ಭದಲ್ಲಿ ರಸ್ತೆಯನ್ನು ಗುರುತಿಸಿ ಗಡಿ ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ ಅಷ್ಟು ಅವ್ಯವಸ್ಥೆಯಲ್ಲಿ ನಮ್ಮ ರಾಜ್ಯದ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಇವೆ. ಇವತ್ತು ಏನಾಗಿದೆ ಅಂದರೆ ಟಾರು ಹಾಕಿದ ಒಂದೆರಡು ವರ್ಷಗಳಲ್ಲಿ ರಸ್ತೆಗಳೆಲ್ಲಾ ಹಾಳಾಗಿವೆ. ಇದರ ಜವಾಬ್ದಾರಿಯನ್ನ್ನು ಕೂಡ ಅದಕ್ಕೆ ಸಂಭಂಧಪಟ್ಟ ಇಂಜಿನಿಯರ್ ಮೇಲೆ ಹೊರಿಸಬೇಕಾಗುತ್ತದೆ. ಇವತ್ತು ಒಂದು ರಸ್ತೆಗೆ ಟಾರು ಹಾಕಿದ ಕೇವಲ ಒಂದೆರಡು ವರ್ಷಗಳಲ್ಲಿ ಆ ರಸ್ತೆ ಹಾಳಾಗಿದೆ ಎಂದರೆ ಇದು ಖಂಡಿತವಾಗಿ ಸರಿಯಿಲ್ಲ ಮತ್ತು ಇವತ್ತು ಮೈನ್‌ಟನೆನ್ಸ್‌ಗೂ ಕೂಡ ಪ್ರತಿ ವರ್ಷ ಬೇಕಾದಷ್ಟು ಹಣ ಇಡತಕ್ಕಂಥ ಅಗತ್ಯ ಇದೆ ಇವತ್ತು ಮೈನ್‌ಟನೆನ್ಸ್ ಸರಿಯಾಗಿಲ್ಲದೆ ಎಷ್ಟೋ ರಸ್ತೆಗಳು ಹಾಳಾಗಿವೆ. ಈ ವರ್ಷ ನಮ್ಮ ಜಿಲ್ಲೆಯಲ್ಲಿ ಧಾರಾಳವಾಗಿ ಮಳೆ ಬಿದ್ದು ಯಾವುದೇ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಜನರು ಗ್ರಾಮಾಂತರ ಪ್ರದೇಶಕ್ಕೆ ಹೋದಾಗ ನಮ್ಮನ್ನು ಕೇಳುತ್ತಾರೆ ರಸ್ತೆಗಳನ್ನು ರಿಪೇರಿ ಮಾಡಬೇಕೆಂದು ಇವತ್ತು ನಾವುಕೂಡ ಅವರ ಮಾತಿಗೆ ಸ್ಪಂದಿಸುವ ವ್ಯವಸ್ಥೆಯಲ್ಲಿ ಇಲ್ಲ ಲೋಕೋಪಯೋಗಿ ಇಲಾಖೆಗೆ ಸೇರಿದಂತಹ ರಸ್ತೆಗಳಿಗೆ ಈ ವರ್ಷ 40 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದಾರೆ. ಈ ಬಗ್ಗೆ ಲಿಸ್ಟ್ ಮಾಡುವುದಕ್ಕೆ ಹೇಳಿದ್ದಾರೆ.

40ಲಕ್ಷ ರೂಪಾಯಿಗಳ ಕೆಲಸ ಈ ವರ್ಷ ಕೊಟ್ಟರೆ ಬಹುಶಃ ಲೋಕೋಪಯೋಗಿ ಇಲಾಖೆಗೆ ಸೇರಿದಂತಹ ಹೆಚ್ಚಿನ ರಸ್ತೆಗಳನ್ನು ಸರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇವತ್ತು ಏನಾಗಿದೆ ಅಂದರೆ ನಮ್ಮ ಜಿಲ್ಲೆಯಲ್ಲಿ ಮಳೆ ಧಾರಾಳವಾಗಿ ಬಿದ್ದಿದೆ. ಆ ಸಂದರ್ಭದಲ್ಲಿ ಚರಂಡಿ ವ್ಯವಸ್ಥೆ ಸರಿಯಾಗಿಲ್ಲ ತುಂಬಾ ರಸ್ತೆಗಳು ಹಾಳಾಗಿವೆ. ಚರಂಡಿ ವ್ಯವಸ್ಥೆ ಚೆನ್ನಾಗಿದ್ದರೆ ರಸ್ತೆ ಸರಿಯಾಗಲಿಕ್ಕೆ ಸಾಧ್ಯವಾಗುತ್ತಿತ್ತು. ಬಾಳಿಕೆ ಸಹ ಜಾಸ್ತಿ ಬರುತ್ತದೆ. ನಾನು ಹೇಳಿದಹಾಗೆ ನಮ್ಮ ಜಿಲ್ಲೆಯಲ್ಲಿ ಚರಂಡಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಅದಕ್ಕೆ ಸರಿಯಾದ ಗಮನ ಕೊಡಬೇಕು. ಇನ್ನೊತ್ತು ಕಟ್ಟಡಗಳ ಬಗ್ಗೆ ಹೇಳುವದಾದರೆ ಯಾವುದೇ ಒಂದು ಕಟ್ಟಡದ ಕೆಲಸ ಪ್ರಾರಂಭವಾದರೂ ಕೂಡ ಅದಕ್ಕೆ ಕೂಡಲೇ ಒಂದು ಅವಧಿಯನ್ನು ಗೊತ್ತು ಮಾಡಬೇಕು. ೬ ತಿಂಗಳೋ,

೬ ತಿಂಗಳೋ ಅಥವಾ ೧ ವರ್ಷವೋ ಎಂದು ಒಂದು ಅವಧಿಯನ್ನು ನಿಗದಿಮಾಡಿ ಅಷ್ಟರೊಳಗೆ ಆ ಕಟ್ಟಡದ ಕೆಲಸ ಮುಗಿಯಬೇಕು ಆದರೆ ಇವತ್ತು ಕೆಲಸವಾಗುತ್ತಿದೆಯೋ ಹೊರತು ಪೂರ್ತಿ ಕೆಲಸವಾಗುತ್ತಿಲ್ಲ, ಪೂರ್ಣ ಕೆಲಸವಾಗಬೇಕಾದರೆ 2-3 ವರ್ಷಗಳಾಗುತ್ತದೆ. ಈರೀತಿ ಆಗಬಾರದು ಏಕೆಂದರೆ ಒಂದುಸಾರಿ ಒಂದು ಕೆಲಸಕ್ಕೆ ಎಸ್ಟಿಮೇಟ್ ಮಾಡಿ ಕೆಲಸ ಪ್ರಾರಂಭವಾಗಿ ಅದರ ಅವಧಿಯೊಳಗೆ ಆ ಕೆಲಸ ಪೂರ್ಣವಾಗದಿದ್ದರೆ ಮತ್ತೆ ಬೆಲೆಗಳು ಜಾಸ್ತಿಯಾಗಿ ಎಸ್ಟಿಮೇಟ್ ಜಾಸ್ತಿಯಾಗುತ್ತದೆ. ಆದ್ದರಿಂದ ಯಾವುದೇ ಕೆಲಸಕ್ಕಾದರೂ ಒಂದು ಅವಧಿಯನ್ನು ಇಟ್ಟುಕೊಂಡು ಅಷ್ಟರೊಳಗೆ ಆ ಕೆಲಸವನ್ನು ಪೂರ್ಣ ಮಾಡಬೇಕು. ಇವತ್ತು ಲೋಕೋಪಯೋಗಿ ಇಲಾಖೆಗೆ ಸೇರದ್ದಂಥ ಕಟ್ಟಡಗಳ ವ್ಯವಸ್ಥೆ ಏನೇನೂ ಚೆನ್ನಾಗಿಲ್ಲ ಉದಾಹರಣೆಗೆ ಹೇಳುವುದಾದರೆ ಮೊನ್ನೆ ನಾನು ಒಂದು ತೋಟಗಾರಿಕೆ ಇಲಾಖೆಯ ಕಛೇರಿಗೆ ಹೋದಾಗ ಅಲ್ಲಿ ಒಳಗೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ, ಏಕೆಂದರೆ, ಹೊರಗಡೆ ಮಳೆ ಬೀಳುತ್ತಿದೆ ಮಳೆಯನೀರು ಹೊರಗಡೆ ಹೋಗುವುದರ ಬದಲು ಒಳಗೆ ಬೀಳುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಕಟ್ಟಡ ನಿರ್ಮಾಣವಾಗಿದೆ. ಇಂಥಾದ್ದರ ಬಗ್ಗೆ ಕೂಡ ಸರ್ಕಾರ ಗಮನ ಕೊಡಬೇಕಾಗುವುದು ತುಂಬಾ ಅಗತ್ಯವಿದೆ ಇವತ್ತು ಸಾಮಾನ್ಯ ಜನರು ಯಾರು ಮನೆಯನ್ನು ಹಣ ಖರ್ಚು ಮಾಡಿ ಕಟ್ಟಿಕೊಳ್ಳುತ್ತಾರೆ ಅದಕ್ಕಿಂತ ಹೆಚ್ಚಿಗೆ ಎಸ್ಟಿಮೇಟ್ ಮಾಡಿ ಈ ಲೋಕೋಪಯೋಗಿ ಇಲಾಖೆಯವರು ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಅಷ್ಟೊಂದು ಹಣವನ್ನು ಖರ್ಚುಮಾಡಿ ಕಟ್ಟಡವನ್ನು ಕಟ್ಟಿಸಿದರೂ ಕೂಡ ಆ ಕಟ್ಟಡ ಹಾಳಾಗಿದೆ ಎಂದರೆ ಇದರ ಸಂಪೂರ್ಣ ಜವಾಬ್ದಾರಿ ಈ ಸರ್ಕಾರದಮೇಲಿದೆ ಇವತ್ತು ಯಾವುದೇ ಕಾಮಗಾರಿ ಸರಿಯಾಗಿಲ್ಲ ಎಂದರೆ ಅದರ ಸಂಪೂರ್ಣ ಹೊಣೆಗಾರಿಕೆ ಅದಕ್ಕೆ ಸಂಬಂಧಪಟ್ಟ ಇಂಜಿನಿಯರ್‌ನಮೇಲೆ ಹಾಕಬೇಕು. ಅವರಮೇಲೆ ಕ್ರಮ ತೆಗೆದುಕೊಳ್ಳಬೇಕಾದುದು ತುಂಬಾ ಅಗತ್ಯವಿದೆ.

ಇನ್ನು ನಮ್ಮ ಕರ್ನಾಟಕ ವಿಧ್ಯಚ್ಛಕ್ತಿ ಮಂಡಲಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಸುಮಾರು 10 ವರ್ಷಗಳ ಹಿಂದೆ ನಮ್ಮ ಬಂಟ್ವಾಳ ತಾಲ್ಲೂಕಿನಲ್ಲಿ ಒಂದು ವಿದ್ಯುತ್ ಸಹಕಾರಿ ಸಂಘ ಸ್ಥಾಪನೆಯಾಗಿದ್ದು ಅದರ ಕಟ್ಟಡದ ಕೆಲಸ ಇವತ್ತಿನವರೆಗೂ ಪ್ರಾರಂಭವಾಗಿಲ್ಲ ಅದಕ್ಕೆ ಡೈರೆಕ್ಟರನ್ನು ನೇಮಕ ಮಾಡಿದ್ದೀರಿ ಆದರೆ ಅವರು ಏನು ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ, ಆ ಕಟ್ಟಡ ಕೆಲಸ ಆದಷ್ಟು ಬೇಗ ಪ್ರಾರಂಭವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಕಳೆದ ವರ್ಷ ರೈತರ 78 ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆಂದು ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಿದ್ದಾರೆ. ನೀವು ವಿದ್ಯುಚ್ಛಕ್ತಿಯನ್ನು ಕೊಡತಕ್ಕದ್ದು ಮುಖ್ಯವಲ್ಲ, ಗ್ರಾಮಾಂತರ ಪ್ರದೇಶದಲ್ಲಿ ಒಂದು ದಿವಸದಲ್ಲಿ 6 ಗಂಟೆಕಾಲ ವಿದ್ಯುಚ್ಛಕ್ತಿಯನ್ನು ಕಟ್ ಮಾಡುತ್ತಿದ್ದಾರೆ. ನಿಜವಾಗಿ ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ 6 ಗಂಟೆಕಾಲ ಕರೆಂಟ್ ಕಟ್ ಎಂದು ರೆಕಾರ್ಡ್‌ನಲ್ಲಿದೆ. ಆದರೆ ಇಡೀ ದಿನದಲ್ಲಿ ಕರೆಂಟ್ ಬರುವುದೇ ಬಹಳ ಅಪರೂಪ. ದಿನದಲ್ಲಿ 1-2 ಗಂಟೆಕಾಲ ಕರೆಂಟ್ ಬಂದರೆ ಅದೇ ದೊಡ್ಡದು ಎಂದು ಹೇಳಬೇಕಾಗಿದೆ. ತಾವು ದಿವಸಕ್ಕೆ 7-8ಗಂಟೆಗಾಲ ಬೇಕಾದರೂ ಕರೆಂಟ್ ಕಟ್ ಮಾಡಿ. ಆದರೆ ಉಳಿದ ಸಮಯದಲ್ಲಾದರೂ ರೈತರಿಗೆ ತೊಂದರೆ ಆಗದ ರೀತಿಯಲ್ಲಿ ನಿರ್ಧಿಷ್ಟ ಸಮಯವನ್ನು ಗೊತ್ತುಮಾಡಿ ಆ ಅವಧಿಯಲ್ಲಿ ಕರೆಂಟ್ ಕೊಡುವಂತಹ ವ್ಯವಸ್ಥೆ ಮಾಡಿ. ಇಲ್ಲದೇ ಹೋದರೆ ರಾತ್ರಿಯ ಹೊತ್ತು ರೈತರು ತಮ್ಮ ತಮ್ಮ ಪಂಪ್‌ಸೆಟ್ಟುಗಳ ಹತ್ತಿರ ಕಾದು ಕುಳುತುಕೊಳ್ಳಬೇಕಾಗುತ್ತದೆ. ನಿಜವಾಗಿ ರೈತರ ಬಗ್ಗೆ ನಿಮಗೆ ಕಳಕಳಿ ಇದ್ದರೆ ಒಂದು ಟೈಂನ್ನು ನಿಗದಿಮಾಡಿ

ಆ ಅವಧಿಯೊಳಗೆ ಕರೆಂಟ್ ಕೊಡಿ ನಮ್ಮಲ್ಲಿ ಶರಪಾಡಿ ಅಣೆಕಟ್ಟು ಮಂಜೂರಾಗಿದೆ. ಅದು ವಾಟರ್ ಸಪ್ಲೈ ಮತ್ತು ಪವರ್ ಫಾರ್ಮೇಷನ್‌ಗೆ ಆದರೆ ಕೆಲಸ ಬಹಳ ನಿಧಾನವಾಗಿ ಸಾಗುತ್ತಿದೆ. ಆ ಊರಿನವರು ಅಲ್ಲಿ ಶರಪಾಡಿ ಅಣೆಕಟ್ಟು ಆಗಬಾರದೆಂದು ಹೋರಾಟ ಮಾಡುತ್ತಿದ್ದಾರೆ. ಆದರೂ ಅಲ್ಲಿ ಸರ್ಕಾರ ಅದನ್ನು ಮಂಜೂರು ಮಾಡಿದೆ ಆ ಪವರ್ ಕಾರ್ಪೊರೇಷನ್‌ಗೆ ಬೇಕಾದಂಥ ವಸತಿಗೆ ಆಸ್ಪತ್ರೆಗೆ ಶಾಲೆಗೆ ಗ್ಯಾರೇಜ್‌ಗೆ ಸುಮಾರು 15 ಎಕರೆ ಜಾಗ ಬೇಕಾಗಿದೆ. ಇವತ್ತಿನವರೆಗೂ ಅದಕ್ಕೆ ಬೇಕಾದ ಜಾಗವನ್ನು ಹುಡುಕಿಲ್ಲ. 4-5 ಕಡೆ ಇದರ ಪ್ರಸ್ತಾಪ ನಡೆಯುತ್ತಿದೆ. ಶರಪಾಡಿ ಗ್ರಾಮದಲ್ಲಿ ಕಡಿಮೆ ಹಣದಲ್ಲಿ ಜಾಗ ಸಿಕ್ಕುತ್ತದೆಂದು ತಿಳಿದುಬಂದಿದೆ ಆದ್ದರಿಂದ ಆ ಜಾಗವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ನಮ್ಮ ದೇಶ ರೈತಪ್ರಧಾನವಾದ ದೇಶ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಿಗೆ ಅನುಕೂಲವಾಗುವಂಥ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವುದು ಕಷ್ಟ. ಆದ್ದರಿಂದ ಸಣ್ಣಸಣ್ಣ ನೀರಾವರಿ ಅಣೆಕಟ್ಟುಗಳಿಗೆ ಎಲ್ಲೆಲ್ಲಿ ಸಾಧ್ಯವಿದೆ ಅಲ್ಲೆಲ್ಲಾ ಚಿಕ್ಕಪುಟ್ಟ ಡ್ಯಾಂ ಗಳನ್ನು ಕಟ್ಟಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುವ ಪ್ರಾಮಾಣಿಕ ಕೆಲಸವನ್ನು ಸರ್ಕಾರ ಮಾಡಬೇಕು.

ಇವತ್ತು ನೀರಾವರಿ ವ್ಯವಸ್ಥೆ ಸರಿಯಾಗಿಲ್ಲದೆ ಬಹಳಷ್ಟು ರೈತರು ವ್ಯವಸಾಯ ಮಾಡುವುದರಲ್ಲಿ ಬಹಲ ಹಿಂದೆ ಬಿದ್ದಿದ್ದಾರೆ ನಮ್ಮ ಜಿಲ್ಲೆಯಲ್ಲಿ ಕಳೆದ 3-4 ತಿಂಗಳಿಂದ ಬಹಳಷ್ಟು ಮಳೆ ಬೀಳುತ್ತಿದೆ. ಈಗ ಆ ನೀರನ್ನು ಸಂಗ್ರಹಿಸಿ ಬೇಸಿಗೆಯಲ್ಲಿ ಕಳೆದ 3-4 ತಿಂಗಳಿಂದ ಬಹಳಷ್ಟು ಮಳೆ ಬೀಳುತ್ತಿದೆ. ಸರ್ಕಾರ ಮಾಡಿದರೆ ನಮ್ಮಜಿಲ್ಲೆ ಆರ್ಥಿಕ ಬೆಳೆಯನ್ನಾಗಲಿ ಆಹಾರ ಬೆಳೆಯನ್ನಾಗಲಿ ಹೆಚ್ಚು ಪ್ರಮಾಣದಲ್ಲಿ ಬೆಳೆದು ಬೇರೆ ಬೇರೆ ಕಡೆಗೆ ಕಳುಹಿಸಿಕೊಡುವಷ್ಟು ಸಮರ್ಥವಾಗುತ್ತದೆ ಆದ್ದರಿಂದ ಈ ದಿಕ್ಕಿನಲ್ಲಿ ಸರ್ಕಾರ ತನ್ನ ಗಮನ ಹರಿಸಬೇಕೆಂದು ಒತ್ತಾಯಿಸುತ್ತೇನೆ. ನಮ್ಮಲ್ಲಿ ನೀರಾವರಿ ಜಲಸಂಚಾರ ಇದೆ ಮೊನ್ನೆತಾನೆ ಧಾರಾಳವಾಗಿ ಮಳೆ ಬಂದಂಥ ಸಂದರ್ಭದಲ್ಲಿ ನೇತ್ರಾವತಿ ನದಿ ತುಂಬಿ ಹರಿಯುತ್ತಿತ್ತು ಅಲ್ಲಿ ಹನ್ನೊಂದು ಕಡವು ಇದೆ. ಒಂದು ದಡದಿಂದ ಮತ್ತೊಂದು ದಡಕ್ಕೆ ಹೋಗುವ ಜಾಗಕ್ಕೆ ಕಡವು ಎಂದು ಹೇಳುತ್ತಿದ್ದಾರೆ ಹೀಗೆ ಹೋಗುವಂಥ ಸಂದರ್ಭದಲ್ಲಿ ಮೊನ್ನೆತಾನೆ ಒಂದು ದೋಣಿಯಲ್ಲಿ ಹೋಗುತ್ತಿದ್ದ ಸುಮಾರು ಎಂಟು ಜನರು ನೀರುಪಾಲಾಗಿ ಸತ್ತಿದ್ದಾರೆ ಆದರೆ ಇವತ್ತು ಅಲ್ಲಿ ಯಾಂತ್ರಿಕ ದೋಣಿಯನ್ನು ಹಾಕಿದ್ದಾರೆ. ಆದರೆ ಇಲ್ಲಿಯವರೆಗೆ ಅದಕ್ಕೆ ಸರಿಯಾದ ವ್ಯವಸ್ಥೆ ಇಲ್ಲದ ಕಾರಣದಿಂದ ಒಂದು ದೋಣಿಯೂ ಕೂಡ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸರಿಯಾಗಿ ಹೋಗುತ್ತಿರಲಿಲ್ಲ.

ಶ್ರೀ ಎ.ಎಂ ಬೆಳ್ಳಿಯಪ್ಪ : ಅದು ಯಾವ ಸ್ಥಳದಲ್ಲಿ ಆದದ್ದು ಎಂದು ತಾವು ದಯವಿಟ್ಟು ಹೇಳುತ್ತೀರಾ

ಶ್ರೀ ಎ. ರುಕ್ಮಯ್ಯ ಪೂಜಾರಿ : ಬಂಟ್ವಾಳ ತಾಲ್ಲೂಕಿನ ಸಜನ ಕಡವುದ ಹತ್ತಿರ ಇವತ್ತು ಯಾಂತ್ರಿಕ ದೋಣಿಯನ್ನು ಹಾಕಿದ್ದಾರೆ ಆ ಯಾಂತ್ರಿಕ ದೋಣಿಯ ಪ್ರಯಾಣ ಕೂಡ ಸರಿಯಾಗಿ ಆಗುತ್ತಿಲ್ಲ ಏತಕ್ಕೆಂದರೆ ಆ ಒಂದು ದಡದಿಂದ ಮತ್ತೊಂದು ದಡಕ್ಕೆ ಪೂರ್ತಿ ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ ಅದರ ಬಗ್ಗೆ ವ್ಯವಸ್ಥೆ ಮಾಡಬೇಕು. ಮತ್ತು ಅಲ್ಲಿ ಸತ್ತಿರುವ ಜನರಬಗ್ಗೆ ತನಿಖೆ ಮಾಡಿಸಬೇಕು. ನಮ್ಮ ಜಿಲ್ಲೆಯಲ್ಲಿರತಕ್ಕಂಥ ಎಲ್ಲ ಕಡವುಗಳಿಗೆ ಯಾಂತ್ರಿಕ ದೋಣಿಯ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು ರಸ್ತೆಗಳಬದಿ ವಿಚಾರವನ್ನು ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ರಸ್ತೆಕೂಡ ಇವತ್ತು ಹಾಳಾಗಿದೆ ತಮಗೆ ಗೊತ್ತಿರುವ ಹಾಗೆ ಮಳೆ ಬಂದಿದೆ ದಾರಾಳ ಮಳೆಯಿಂದಾಗಿ ಯಾವುದೇ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ ಇವತ್ತು ನಮ್ಮಲ್ಲಿರುವ ನೇತ್ರಾವತಿ ಹೊಳೆಯ ಸೇತುವೆ ಕೂಡ ಸಂಪೂರ್ಣವಾಗಿ ಹಾಳಾಗಿದೆ. ಇಂಥ ಸಂದರ್ಭದಲ್ಲಿ ಅಲ್ಲಿಗೆ ರಿಪೇರಿಗೆ ಕೊಡಬೇಕಾದ ಹಣವನ್ನು ಕೊಟ್ಟು ಆ ರಸ್ತೆಯನ್ನು ಬೇಗ ರಿಪೇರಿ ಮಾಡುವಲ್ಲಿ ಸರ್ಕಾರ ಗಮನಕೊಡಬೇಕೆಂದು ಒತ್ತಾಯಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಟಿ ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷಿಣಿಯವರೇ ಇಂದು 45-56-47-48-49 ಮತ್ತು 5-36-37 ಬೇಡಿಕೆಗಳನ್ನು ಸರ್ಕಾರ ಏನು ಇಟ್ಟಿದೆ ಅದನ್ನು ನಾನು ಆಡಳಿತ ಪಕ್ಷದ ಶಾಸಕನಾಗಿ ಸಾಂಪ್ರದಾಯಿಕವಾಗಿ ಸ್ವಾಗತವನ್ನು ಮಾಡತಕ್ಕಂಥದ್ದು ನನ್ನ ಕರ್ತವ್ಯ ನಾನು ಆ ಬೇಡಿಕೆಗಳನ್ನು ಸ್ವಾಗತಿಸಿ ಒಂದು ನಾಲ್ಕು ಮಾತುಗಳನ್ನು ಆಡಲಿಕ್ಕೆ ಇಚ್ಛೆಸುತ್ತೇನೆ ಮಾನ್ಯ ಅಧ್ಯಕ್ಷಿಣಿಯವರೇ ತಮಗೇ ಗೊತ್ತಿದೆ ಮನುಷ್ಯನ ಅಂತರಂಗಕ್ಕೂ ಮತ್ತು ಬಹಿರಂಗಕ್ಕೂ ಬಹಳ ವ್ಯತ್ಯಾಸವಿದೆ. ಭೂಮಿ ಮತ್ತು ಅಕಾಶದಷ್ಟು ಅಂತರ ಅವರೆದುರಲ್ಲೂ ಕೂಡ ನಾವು ನೋಡುತ್ತೇವೆ. ಅಂತರಂಗದಲ್ಲಿ ಏನಿದೆಯೋ ಅದನ್ನು ಬಹಿರಂಗದಲ್ಲಿ ತೋರಿಸಿಕೊಳ್ಳುವುದಿಲ್ಲ ಆದರೂ ಕೂಡ ನಾನು ಇವತ್ತು ಅಂತರಂಗದ ಒಂದು ಆತ್ಮಸಾಕ್ಷಿಗೆ ಅನುಗುಣವಾಗಿ ಆಡಳಿತಪಕ್ಷದ ಶಾಸಕನಾಗಿದ್ದರೂ ಕೂಡ ಹೇಳಬೇಕೆಂದಿರತಕ್ಕಂಥ ಮಾತನ್ನು ಅನಿವಾರ್ಯವಾಗಿ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಈ ಸದನದ ಗಮನಕ್ಕೆ ತರಲಿಕ್ಕೆ ಇಚ್ಛೆಸುತ್ತೇನೆ ತಾವು ನೀರಾವರಿ ಮಂತ್ರಿಗಳನ್ನು ಸದನಕ್ಕೆ ಕರೆಸಬೇಕು. ಇಲ್ಲದಿದ್ದರೆ ನಾವು ಯಾರಿಗೆ ಹೇಳುವುದು ಏತಕ್ಕೆಂದರೆ ಪ್ರಮುಖವಾಗಿ ಲೋಕೋಪಯೋಗಿ ನೀರಾವರಿ ಖಾತೆಗಳ ಮೇಲೆ ಚರ್ಚೆ ನಡೆಯುತ್ತಿದೆ ಸಂಬಂಧಪಟ್ಟ ಸಚಿವರಿಲ್ಲದೆ ನಾವು ಯಾರಿಗೆ ಹೇಳುವುದು.

ಛೇರ್ಮನ್ : ಪಿ.ಡಬ್ಲ್ಯೂ.ಡಿ ಖಾತೆಯ ಮಂತ್ರಿಗಳಿದ್ದಾರೆ ಅವರು ನೋಟ್‌ಮಾಡಿಕೊಂಡು ತಿಳಿಸುತ್ತಾರೆ ನೀವು ಮಾತನಾಡಿ.

ಶ್ರೀ ಎ.ಟಿ.ರಾಮಸ್ವಾಮಿ : ಮಾನ್ಯ ಸಚಿವರನ್ನು ಕರೆಸಿ ಬಹಳ ಪ್ರಮುಖವಾದ ಚರ್ಚೆ ನಡೆಯುತ್ತಿದೆ.

ಶ್ರೀ ಸಿ.ಬೈರೇಗೌಡ : ನೀರಾವರಿ ಮಂತ್ರಿಗಳು ಬರಬೇಕು ಏತಕ್ಕೆಂದರೆ ಇದು ಪ್ರಮುಖವಾದ ಇಲಾಖೆ. ದಯವಿಟ್ಟು ನೀರಾವರಿ ಮಂತ್ರಿಗಳನ್ನು ಕರೆಸಿ ಅಥವಾ ಅವರು ಎಲ್ಲಿದ್ದಾರೆನ್ನುವ ಬಗ್ಗೆ ಸದನಕ್ಕೆ ಮಾಹಿತಿ ತರಿಸಿಕೊಡಿ..

ಛೇರ್ಮನ್ : ಮಂತ್ರಿಗಳು ಬರುತ್ತಾರೆ. ಈಗ ಸಮಯದ ಕೊರತೆ ಬಹಳ ಇದೆ. ಅದನ್ನು ಸದುಪಯೋಗ ಮಾಡಿಕೊಳ್ಳುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನ ಮಾಡಬೇಕು.

\+ ಶ್ರೀ ಎ.ಟಿ. ರಾಮಸ್ವಾಮಿ : ನಮ್ಮ ರಾಜ್ಯದ ಆಯವ್ಯಯದ ಬಹುತೇಕ ಹಣ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ಮುಖಾಂತರ ಖರ್ಚಾಗುತ್ತದೆ. ಇದು ಹೇಗೆ ಖರ್ಚಾಗುತ್ತಿದೆ ಎಷ್ಟು ಖರ್ಚಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ ಕಳೆದ ವಾರ ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ನಾನು ಹಾಕಿದ್ದೆ ವರ್ಷವರ್ಷಕ್ಕೆ ಈ ಕಾಮಗಾರಿಗಳ ಬಿಲ್ಲಿನಲ್ಲಿ ಪರ್ಸೆಂಟೇಜ್ ವಸೂಲಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಮತ್ತು ಪರ್ಸೆಂಟೇಜ್ ವಸೂಲಿ ವರ್ಷ ವರ್ಷ

ಹೆಚ್ಚುತ್ತಿರುವುದರಿಂದ ಕೆಲಸಗಳ ಗುಣಮಟ್ಟ ಕಳಪೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ ಅದಕ್ಕೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಇವತ್ತು ಶಾಲೆಗೆ ಹೋಗುವ ಮಗುವಿನಿಂದ ಹಿಡಿದು ಹೊಲ ಉಳುವ ಸಾಮಾನ್ಯ ಪ್ರಜೆಗೆ ಗೊತ್ತಿದೆ ಏನೆಂದರೆ ವರ್ಷ ವರ್ಷಕ್ಕೆ ಪರ್ಸೆಂಟೇಜ್ ವಸೂಲಿ ಕಾಮಗಾರಿಗಳ ಕೆಲಸದಲ್ಲಿ ಒಂದೇ ಸಮನೆ ಏರುತ್ತಿದೆ ಎಂದು. ಕೆಲಸಗಳ ಗುಣಮಟ್ಟ ಬಹಳ ಕೆಳಮಟ್ಟಕ್ಕೆ ಇಳಿಯುತ್ತಿದೆ. ಇದನ್ನು ನೋಡಿದರೆ ನಾಚಿಕೆಯಾಗುತ್ತವೆ ತಲೆತಗ್ಗಿಸಬೇಕಾಗುತ್ತದೆ. ಈ ವರ್ಷ ಬಿಲ್ಡಿಂಗ್ ಕಟ್ಟಿದರೆ ಮುಂದಿನ ವರ್ಷ ರಿಪೇರಿ ಮಾಡಿ ಎಂದು ಹಳ್ಳಿಗಳಲ್ಲಿ ಕೇಳುತ್ತಾರೆ ಒಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬೇಕಾಗುತ್ತದೆ.

ನಮ್ಮ ಪೂರ್ವಿಕರು ಯಾವುದೇ ತಾಂತ್ರಿಕ ಜ್ಞಾನ ಪಡೆದಿರಲಿಲ್ಲ ಇಂಜಿನಿಯರಿಂಗ್ ಓದಿರಲಿಲ್ಲ ಹೊರದೇಶಕ್ಕೆ ಹೋಗಿರಲಿಲ್ಲ ಮಣ್ಣನ್ನು ಕಲಿಸಿ ಕೆಲಸದಲ್ಲಿ ನಿಷ್ಠೆ ತೋರಿ ಕಾಯಕ ಮಾಡಿ ಮಣ್ಣಿನ ಗೋಡೆಯಿಂದ ಮನೆಗಳನ್ನು ಕಟ್ಟುತ್ತಿದ್ದರು ಚಾವಣಿ ಹಾಕುತ್ತಿದ್ದರು ಆ ಕಟ್ಟಡಗಳನ್ನು ನೋಡಿದರೆ ಇಂದಿಗೂ ಒಂದು ತಲೆಕೂದಲಿನಷ್ಟು ಬಿರುಕು ಬಿಟ್ಟಿಲ್ಲ ಅವು ಅವಿದ್ಯಾವಂತರು ಕಟ್ಟಿದ ಕಟ್ಟಡಗಳು ಇವತ್ತು ವಿದ್ಯಾವಂತರು ಪರದೇಶಕ್ಕೆ ಹೋದವರು ಬಿ.ಇ. ಓದಿದವರು ಸಿಮೆಂಟ್ ಉಪಯೋಗಿಸಿ ಕಟ್ಟಿದ ಕಟ್ಟಡಗಳು ಈ ಮನೆಗಳ ಮುಂದೆ ನಿಲ್ಲುವುದಿಲ್ಲ. ಒಂದೇ ವರ್ಷಕ್ಕೆ ರಿಪೇರಿ ಮಾಡಿ ಎಂದು ಹಳ್ಳಿಗಳಲ್ಲಿ ಜನ ಕೇಳುತ್ತಾರೆ ಇಂಥ ಕಳಪೆ ಕೆಲಸಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಪರ್ಸೆಂಟೇಜ್ ವಸೂಲ್ಮಾಡುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಸರ್ಕಾರ ಏನು ಕಣ್ಮುಚ್ಚಿಕೊಂಡು ಕುಳಿತಿದೆಯೇ? ಇದಕ್ಕೆ ಕಾರಣ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿರೋಧ ಪಕ್ಷಗಳ ಪ್ರಮುಖ ನಾಯಕರುಗಳು ದೂರವಾಣಿ ಕದ್ದಾಲಿಕೆ ಮತ್ತು ಪೋಲೀಸರು ಹೊಡೆದರು ಎಂದು ಧರಣಿ ಮಾಡಿದರು. ಆದರೆ ಈ ಪರ್ಸೆಂಟೇಜ್ ಹಾವಳಿ ಲಂಚದ ಹಾವಳಿ ಇವರ ಕಿವಿಗೆ ಬೀಳಲಿಲ್ಲವೆ? ಇದರ ಬಗ್ಗೆ ಏತಕ್ಕೆ ಧರಣಿ ಮಾಡಲಿಲ್ಲವೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಬಹುಶಃ ಅವರ ಆತ್ಮಸಾಕ್ಷಿ ಒಪ್ಪಿಲ್ಲವೆಂದು ಧರಣಿ ಪ್ರತಿಭಟನೆ ಮಾಡುವುದಕ್ಕೆ ಹೋಗಲಿಲ್ಲವೆಂದು ಕಾಣುತ್ತದೆ. ಇತ್ತೀಚೆಗೆ ಕೆ.ಪಿ.ಎಸ್.ಸಿ.ಯಲ್ಲಿ 50 ಜನ ಕಾರ್ಯಪಾಲಕ ಅಭಿಯಂತರರನ್ನು ನೇರ ನೇಮಕಾತಿ ಮಾಡಿಕೊಳ್ಳುವುದಕ್ಕೆ ಇಂಟರ್‌ವ್ಯೂ ಆಗಿದೆ. ಅದನ್ನು ಕೇಳಿದರೆ ನಿಜಕ್ಕೂ ತಲೆತಗ್ಗಿಸಬೇಕಾಗುತ್ತದೆ.

ಅದು ಕರ್ನಾಟಕ ಲೋಕ ಸೇವಾ ಆಯೋಗ ಅಲ್ಲ ಆ ಹೆಸರನ್ನು ಬದಲಾವಣೆ ಮಾಡಬೇಕು ಅದನ್ನು ಕರ್ನಾಟಕ ಲೋಕ ಮಾರಕ ಆಯೋಗ ಎಂದು ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ಇಂಥ ಆಯೋಗದಲ್ಲಿ ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಗೊತ್ತಿಲ್ಲವೇ? ಏತಕ್ಕೆ ಅದನ್ನು ನಿಲ್ಲಿಸಬಾರದು? ಸರ್ಕಾರಕ್ಕೆ ಆ ಶಕ್ತಿ ಇದೆ ಎಂದು ತಿಳಿದುಕೊಂಡಿದ್ದೇನೆ. ಜನರು ಈ ಸರ್ಕಾರದ ಮೇಲೆ ವಿಶ್ವಾಸ ಇಟ್ಟು 180 ಮಂದಿ ಶಾಸಕರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಈ ಸಂದರ್ಭದಲ್ಲಿ ನನ್ನ ವಿನಂತಿ ಏನೆಂದರೆ ಈ ಸರ್ಕಾರ ಬಂದಮೇಲೆ ಭ್ರಷ್ಟಾಚಾರ ಕಡಿಮೆ ಆಯಿತು ಅಂದರೆ ಸಾಕು. ಅದನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ ಆದರೆ ಸಾಮಾನ್ಯ ಜನರ ಮನಸ್ಸಿನಲ್ಲಿ ಭ್ರಷ್ಟಾಚಾರ ಕಡಿಮೆ ಆಯಿತು ಎಂಬ ಭಾವನೆ ಬಂದರೆ 180 ಮಂದಿ ಶಾಸಕರನ್ನು ಅವರು ಕಳುಹಿಸಿದ್ದಕ್ಕೆ ಸಾರ್ಥಕವಾಗುತ್ತದೆಂದು ಸರ್ಕಾರಕ್ಕೆ ವಿನಂತಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಲೋಕೋಪಯೋಗಿ ಇಲಾಖೆ ಇರತಕ್ಕದ್ದು ಇಂಜಿನಿಯರ್‌ಗಳಿಗೆ ಮತ್ತು ಕಂಟ್ರಾಕ್ಟರ್‌ಗಳಿಗೆ ಮಾತ್ರವೆಂದು

ನನಗೆ ಅನ್ನಿಸುತ್ತದೆ ಏಕೆಂದರೆ ಯಾವುದೇ ರಸ್ತೆ ಮಾಡಿದ 6 ತಿಂಗಳಲ್ಲಿ ಗುಂಡಿ ಬೀಳುತ್ತದೆ ಕಟ್ಟಡ ಕಟ್ಟಿದರೆ ಒಂದೇ ವರ್ಷಕ್ಕೆ ಬಿದ್ದುಹೋಗುತ್ತದೆ ಸೇತುವೆ ಮೋರಿಗಳು 6 ತಿಂಗಳಲ್ಲಿ ಕುಸಿದು ಬೀಳುತ್ತವೆ. ಇದನ್ನು ಯಾರೂ ನೋಡುತ್ತಿಲ್ಲವೆ? ಯಾರಿಗೂ ಇದರ ಬಗ್ಗೆ ಜವಾಬ್ದಾರಿಯನ್ನು ಗೊತ್ತು ಮಾಡುತ್ತಿಲ್ಲವೆ? ಅಧಿಕಾರಿಗಳು ಮತ್ತು ಕಂಟ್ರಾಕ್ಟರಿಗೆ ಈ ಜವಾಬ್ದಾರಿಯನ್ನು ಗೊತ್ತು ಮಾಡಿ ಇಂಥ ಕಳಪೆ ಕೆಲಸ ಮಾಡಿದ ಕಂಟ್ರಾಕ್ಟರನ್ನು ಬ್ಲಾಕ್ ಲಿಸ್ಟಿಗೆ ಹಾಕಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.ಆಗ ಮಾತ್ರ ಸರ್ಕಾರ ಇಷ್ಟು ಹಣವನ್ನು ಖರ್ಚು ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ ಇವತ್ತು ಮಲ್ಲಾರಿಗೌಡ ಪಾಟೀಲರು ಮತ್ತು ಅಶ್ವತ್ಥರೆಡ್ಡಿಯವರು ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳಾಗಿದ್ದಾರೆ.

ನಾನು ಒಂದು ಮಾತು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರು ಕೂಡ ಈದಿನ ವ್ಯವಸ್ಥೆಗೆ ಹೊಂದಿಕೊಳ್ಳುತ್ತಾರೋ ಅಥವಾ ಇವರಿಗೇ ವ್ಯವಸ್ಥೆ ಹೊಂದಿಕೊಳ್ಳುತ್ತದೋ ಎಂಬುದನ್ನು ಕಾದು ನೋಡಬೇಕಾಗಿದೆ. ದಯಮಾಡಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ನೀವು ಆ ವ್ಯವಸ್ಥೆಗೆ ಹೊಂದಿಕೊಳ್ಳುವುದು ಬೇಡ ನಿಮಗೆ ಆ ವ್ಯವಸ್ಥೆಗಳು ಹೊಂದಿಕೊಳ್ಳಬೇಕು ನೀವು ಅಧಿಕಾರದಲ್ಲಿ ಎಷ್ಟು ದಿವಸ ಇರುತ್ತೀರಿ ಎಂಬುದು ಮುಖ್ಯವಲ್ಲ ನೀವು ಹೇಗೆ ನಡೆದುಕೊಂಡಿರಿ ಎಂಬುದು ಮುಖ್ಯ ಆ ದಿಕ್ಕಿನಲ್ಲಿ ತಾವುಗಳು ದಿಟ್ಟ ನಿಲುವು ತಾಳುತ್ತೀರಿ ತಾಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಪಿ.ಎಸ್.ಸಿ.ಯವರು 50 ಜನರ ಆಯ್ಕೆ ಏನು ಮಾಡಿದ್ದಾರೆ ಅದನ್ನು ರದ್ದು ಮಾಡಿ ನಿಮಗೆ ಆ ಶಕ್ತಿಯನ್ನು ನಾವು ಕೊಡುತ್ತೇವೆ ಸದನ ಕೊಡುತ್ತದೆ ಇಡೀ ರಾಜ್ಯದ ಜನತೆ ಕೊಡುತ್ತದೆ ಅವರು ಸಂದರ್ಶನ ಮಾಡಿ ಏನು ಆಯ್ಕೆ ಪಟ್ಟಿಯನ್ನು ಇಟ್ಟುಕೊಂಡಿದ್ದಾರೆ ಆ ಪಟ್ಟಿಯನ್ನು ತಾವು ಕೂಡಲೇ ರದ್ದು ಮಾಡಿ. ಬೇರೆ ವಿಧಾನದ ಹಾಗೆ ಮಾಡಿದರೆ ನಿಜಕ್ಕೂ ಕೂಡ ನೀವು ಮಂತ್ರಿಯಾಗಿದ್ದಕ್ಕೆ ಸಾರ್ಥಕವಾಗುತ್ತದೆ ಎಂಬ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ವರ್ಗಾವರ್ಗಿ ವಿಚಾರದಲ್ಲಿ ತಮಗೆ ಗೊತ್ತಿದೆ. ಸುಮಾರು ನಾಲ್ಕೈದು ತಿಂಗಳು ಏನೂ ಕೆಲಸವೇ ನಡೆಯಲಿಲ್ಲ ಬರೀ ವರ್ಗಾವರ್ಗಿ ಕಡೆಯೇ ಆಗಿಹೋಯಿತು. ವರ್ಗಾವರ್ಗಿಮಾಡುವುದಕ್ಕೆ ನಿಯಮಗಳಿವೆ ಆದರೆ ಅದನ್ನು ಎಷ್ಟಕಮಟ್ಟಿಗೆ ನೀವು ಅನುಸರಿಸುತ್ತಿದ್ದೀರಿ ಎಂಬುದನ್ನು ನಿಯಮಗಳಿವೆ ಆದರೆ ಅದನ್ನು ಎಷ್ಟರಮಟ್ಟಿಗೆ ನೀವು ಅನುಸರಿಸುತ್ತಿದ್ದೀರಿ ಎಂಬುದನ್ನು ನೋಡಬೇಕು.

ನಮಗೆ ಅನೇಕರು ಹೇಳುತ್ತಾರೆ ನಿಮಗೆ ವರ್ಗ ಮಾಡಿಕೊಡಿ ಎಂದು ಕೇಳಿದೆವು ಆದರೆ ನೀವು ವರ್ಗ ಮಾಡಿಸಲಿಲ್ಲ ನಾವು ದುಡ್ಡು ಕೊಟ್ಟು ವರ್ಗ ಮಾಡಿಸಿಕೊಂಡು ಹೋದೆವು ಎಂದು ಹೇಳುತ್ತಾರೆ ಆ ಮಟ್ಟಕ್ಕೆ ನಮ್ಮ ಸ್ಥಾನಮಾನ ಇವತ್ತು ಬಂದು ನಿಂತಿದೆ ಅದಕ್ಕೆ ದಯವಿಟ್ಟು ಅವಕಾಶ ಕೊಡಬಾರದು ಎಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಸಾರ್ವತ್ರಿಕವಾಗಿ ಅಧಿಕಾರಿ ವರ್ಗದವರಲ್ಲಿ ಅದರಲ್ಲೂ ಕೂಡ ಇಂಜಿನಿಯರುಗಳಲ್ಲಿ ಒಂದು ಅಭಿಪ್ರಾಯ ಬಂದಿದೆ. ಕೆಲಸ ಇಲ್ಲ ಎಂದರೆ ಯಾರೂ ಕೂಡ ಆರಾಮವಾಗಿ ಇರುವುದಕ್ಕೆ ಇಚ್ಚೆಪಡುವುದಿಲ್ಲ ಏತಕ್ಕೆ? ಇದು ಎಲ್ಲರಿಗೂ ಗೊತ್ತಿರತಕ್ಕ ಸತ್ಯ ಎಲ್ಲಿ ಹೊಸದಾಗಿ ಕೆಲಸ ಪ್ರಾರಂಭವಾಗುತ್ತದೆ ಅಲ್ಲಿ ಹೋಗುವುದಕ್ಕೆ ಪ್ರಯತ್ನ ಪಡುತ್ತಾರೆ ಇವತ್ತಿನ ದಿನ ಸಮಾಜದಲ್ಲಿ ನಾವೆಲ್ಲಾ ಸೋಮಾರಿಗಳೇ ಜಾಸ್ತಿ ಸುಲಭವಾಗಿ ಬದುಕಬೇಕು ಎಂಬ ಆಸೆ ಇದೆ ಎಂದು ಎಲ್ಲರೂ ಮಾತನಾಡಿಕೊಳ್ಳುತ್ತೇವೆ ಆದರೆ ಇಂಜಿನಿಯರುಗಳು ಮಾತ್ರ ಕೆಲಸ ಮುಗಿದಿದೆ ಏನೂ ಇಲ್ಲ ಬರೀ ಸೂಪರ್‌ವಿಷನ್ ಮಾಡಿಕೊಂಡು ಇರಬಹುದು ಎಂದರೆ ಅಲ್ಲಿ ಇರುವುದಿಲ್ಲ ಎಲ್ಲಿ ಹೊಸದಾಗಿ ಕೆತ್ತುವ ಕೆಲಸ ಅಗೆಯುವ ಕೆಲಸ ಶುರುವಾಗುತ್ತದೆ ಅಲ್ಲಿ ಹೋಗುವುದಕ್ಕೆ

ಬಹಳ ಪೈಪೋಟಿ ಮೇಲೆ ಮುಂದೆ ಬರುತ್ತಾರೆ. ಏತಕ್ಕೆ ಎಂದು ತಾವು ಆಲೋಚನೆ ಮಾಡಬೇಕು. ಅವರು ಲೆಕ್ಕ ಹಾಕುತ್ತಾರೆ 50 ಲಕ್ಷ ರೂಪಾಯಿನ ಕೆಲಸ ನಮ್ಮ ಸರ್ಕಲ್‌ನಲ್ಲಿ ಇದೆ ಎಂದರೆ ನಮಗೆಷ್ಟು ಪರ್ಸೆಂಟೇಜ್ ಜೇಬಿಗೆ ಬರುತ್ತದೆ ಎಂಬ ಭಾವನೆ ಬೆಳೆದುಕೊಂಡುಬಿಟ್ಟಿದೆ

ಇವತ್ತು ಒಂದು ಕೆಲಸದ ಗುತ್ತಿಗೆ ತೆಗೆದುಕೊಳ್ಳಬೇಕು ಎಂದರೆ ಎಸ್ಟಿಮೇಟ್ ಮಾಡುವುದಕ್ಕೆ ದುಡ್ಡು ಕೊಡಬೇಕು ಅಪ್ರೂವಲ್ ಆಗುವುದಕ್ಕೆ ದುಡ್ಡು ಕೊಡಬೇಕು ಬಿಲ್ ಮಾಡಿಸಲಿಕ್ಕೆ ದುಡ್ಡು ಕೊಡಬೇಕು ಹೀಗೆ ನಾನಾ ಹಂತದಲ್ಲಿ ದುಡ್ಡು ಕೊಟ್ಟು ಸುಮಾರು 30 ಪರ್ಸೆಂಟ್ ಹಣ ಗುತ್ತಿಗೆದಾರರಿಂದ ಅವರು ಕಸಿದುಕೊಳ್ಳುತ್ತಾರೆ. ಹೀಗಾಗಿ ಗುತ್ತಿಗೆದಾರನಿಗೆ 30 ಪರ್ಸೆಂಟ್ ಹೋಯಿತು ಇದರ ಮೇಲೆ ಅವನು ಲಾಭ ಮಾಡಿಸಿಕೊಳ್ಳಬೇಕು ಎಂದು ಗುತ್ತಿಗೆದಾರನ ಪರಿಸ್ಥಿತಿ ಏನಾಗಿದೆ ಎಂದರೆ ಎರಡು ಮೂರು ಕೆಲಸದಲ್ಲಿ ಅವನು ಲಕ್ಷಾಂತರ ರೂಪಾಯಿ ಮಾಡಿಕೊಳ್ಳಬೇಕು ಎಂಬ ಆಸೆ ಅವನಲ್ಲೂ ಬಂದಿದೆ. ಅದಕ್ಕಾಗಿ ಹೇಳಿದ್ದು ಇಂಜಿನಿಯರಿಂಗ್ ಇಲಾಖೆ ಕಂಟ್ರಾಕ್ಟರಿಗೆ ಮತ್ತು ಇಂಜಿನಿಯರುಗಳ ಸಲುವಾಗಿ ಹುಟ್ಟಿದೆಯೇನೋ ಎಂದು ನಾನು ಯಾವುದೇ ಇಂಜಿನಿಯರಿಂಗ್ ಆಫೀಸಿಗೆ ಹೋಗಲಿ ಕಂಟ್ರಾಕ್ಟರುಗಳು ನಮಗೆ ಕೆಲಸ ಕೊಡಿಸಿ ಬಿಲ್ ಕೊಡಿಸಿ ಎಂದು ಹೇಳುತ್ತಾರೆ ಏತಕ್ಕೆ? ಅವನು ರೈತನಾಗಿ ದುಡಿದು ನೋಡಿರುತ್ತಾನೆ. ಹತ್ತಾರು ವರ್ಷಗಳು ಮಳೆ ಚಳಿಯಲ್ಲಿ ಬಿಸಿಲಿನಲ್ಲಿ ದುಡಿದರೂ ಏನೂ ಆಗುವುದಿಲ್ಲ ಇಲ್ಲಿ ಒಂದೆರಡು ವರ್ಷ ಕಂಟ್ರಾಕ್ಟ್ ಮಾಡಿಬಿಟ್ಟರೆ ಆಗಲೇ ಮೋಟಾರ್ ಸೈಕಲ್ ತೆಗೆದುಕೊಳ್ಳುತ್ತಾನೆ ಕಾರ್ ತೆಗೆದುಕೊಳ್ಳುತ್ತಾನೆ ಅಂದರೆ ಇಷ್ಟೊಂದು ಲಾಭದಾಯಕ ಹುದ್ದೆ ಎಂಬುದನ್ನು ಅವನು ಮನಗಂಡು ವ್ಯಾಮೋಹದಿಂದ ಅದಕ್ಕೆ ಹೋಗುತ್ತಿದ್ದಾನೆ. ಆದ್ದರಿಂದ ಕೆಲಸಗಳನ್ನು ಮಾಡಿಸುವುದು ಮುಖ್ಯವಲ್ಲ ಕೆಲಸಗಳ ಗುಣಮಟ್ಟವನ್ನು ಕಾಪಾಡಿಕೊಳ್ಳದೇ ಇದ್ದರೆ ಇವತ್ತು ಏನು ನಮ್ಮ ಸಮಾಜದ ಸುಧಾರಣೆ ಮಾಡಬೇಕು ಇಲಾಖೆಗಳ ಮುಖಾಂತರ ಅಥವಾ ಕಾಮಗಾರಿಗಳ ಮುಖಾಂತರ ಎಂದು ಹೇಳುತ್ತೇವೆ ಅದು ಸರ್ವನಾಶವಾಗುತ್ತದೆ. ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುತ್ತೇನೆ.

ಇವತ್ತು ಅನೇಕ ನಾಲೆಗಳ ಕೆಲಸ ಆಗಿದೆ. ನಾಲೆಗಳ ಕೆಲಸದಲ್ಲಿ ಬೆಡ್‌ಲೆವೆಲ್‌ಗೆ ಹೋಗಿಲ್ಲದಿದ್ದರೂ ಫೈನಲ್ ಬಿಲ್ ಕೊಟ್ಟಿದ್ದಾರೆ. ಸೆಕ್ಷನ್ ಸರಿಯಾಗಿ ಹಾಕಿಲ್ಲ ದುಡ್ಡು ಕೊಟ್ಟಿದ್ದಾರೆ ಎಂಬಾಕ್‌ಮೆಂಟ್ ಸರಿಯಾಗಿ ಮಾಡಿರುವುದಿಲ್ಲ ಆದರೂ ನೀರು ಬಿಟ್ಟಿರುತ್ತಾರೆ ಎಲ್ಲಾ ಒಡೆದುಹೋಗಿರುತ್ತದೆ. ಎಲ್ಲಿ ನೋಡಿದರೂ ಕೂಡ ಕಳಪೆ ಕೆಲಸಗಳು ಕೆಲಸಗಳಾಗಿ ಒಂದು ವರ್ಷವಾಗಿರುತ್ತದೆ. ಆದರೆ ಎಲ್ಲಾ ಮುರಿದು ಬೀಳುತ್ತವೆ. ನಾವು ಕಾಮಗಾರಿ ಕೆಲಸದ ವಿಚಾರದಲ್ಲಿ ಕಣ್ಣಿದ್ದೂ ಕೂಡ ಕುರುಡರಾಗಿದ್ದೇವೆ ಇವತ್ತಿನ ದಿವಸ ತುರ್ತಾಗಿ ಶೀಘ್ರವಾಗಿ ಆ ಕಡೆ ಗಮನ ಕೊಡದೆ ಮೈ ಮರೆತು ಹೋದರೆ ಒಂದಲ್ಲ ಒಂದು ದಿನ ಜನ ನಮ್ಮನ್ನು ಅಟ್ಟಿಸಿಕೊಂಡು ಓಡಾಡಿಸಿಕೊಂಡು ಬಂದು ದೂಷಣೆ ಮಾಡತಕ್ಕ ಕಾಲ ಬರುತ್ತದೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟನ್ನು ಹೇಳುತ್ತಾ ನಾನು ಮೊದಲೇ ಹೇಳಿದಹಾಗೆ ಪಿ.ಎಸ್.ಸಿ.ಯಲ್ಲಿ ಏನು ಸಂದರ್ಶನ ಮಾಡಿ ಏನು ಒಂದು ಪಟ್ಟಿ ತಯಾರು ಮಾಡಿದ್ದಾರೆ ಆ ಪಟ್ಟಿಯನ್ನು ದಯವಿಟ್ಟು ತಾವು ತಡೆಹಿಡಿಯಬೇಕು ಅದನ್ನು ರದ್ದು ಮಾಡಬೇಕು ಬೇರೆ ಇಲಾಖೆ ಮುಖಾಂತರ ಅಥವಾ ಬೇರೆ ಯಾವುದಾದರೂ

ಅಳತೆಗೋಲನ್ನು ನಿಗದಿ ಮಾಡಿ ಆಯ್ಕೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಅತೀ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇವತ್ತು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ಹಗಲುದರೋಡೆ ಆಗುತ್ತಿದೆ ಪರ್ಸೆಂಟೇಜ್ ಹಾವಳಿ ಇದೆ. ಇದನ್ನು ತಾವು ನಿಲ್ಲಿಸಬೇಕು. ನೀವು ನಿಲ್ಲಿಸಲಿಲ್ಲ ಎಂದರೆ ವಿರೋಧ ಪಕ್ಷದವರಿಗೆ ಇದನ್ನು ಪ್ರತಿಭಟನೆ ಮಾಡುವುದಕ್ಕೆ ಆತ್ಮಸಾಕ್ಷಿ ಒಪ್ಪುತ್ತಾ ಇಲ್ಲವೇನೋ ಅನ್ನಿಸುತ್ತೆ ನಾವು ಆಡಳಿತ ಪಕ್ಷದ ಸದಸ್ಯರು ಸಹ ಪ್ರತಿಭಟನೆ ಮಾಡತಕ್ಕ ಕಾಲ ದೂರ ಇಲ್ಲ ಎನ್ನುವ ಮಾತನ್ನು ಕಟುವಾದ ಎಚ್ಚರಿಕೆಯನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಾ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಬೈರೇಗೌಡರು ಮಾತನಾಡಲಿ.

ಶ್ರೀ ಎಲ್.ಆರ್.ಶಿವರಾಮೇಗೌಡ : ನಮ್ಮ ಹೆಸರು ಇದೆಯೇ? ನಾನು ಸ್ವತಂತ್ರ ಸದಸ್ಯನಾಗಿದ್ದಾಗ ಎಲ್ಲದಕ್ಕೂ ಅವಕಾಶ ಇರುತ್ತಿತ್ತು ಕಾಂಗ್ರೆಸ್ ಪಕ್ಷದ ಒಳಕ್ಕೆ ಸೇರಿದ ಮೇಲೆ ಅವಕಾಶಗಳೇ ಸಿಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪಾಪದ ಕೆಲಸ ಮಾಡಿದವರಿಗೆಲ್ಲಾ ಪ್ರಾಯಶ್ಚಿತ್ತ ಇದ್ದೇ ಇರುತ್ತದೆ

ಛೇರ್ಮನ್ : ತಾವು ಸಾಕಷ್ಟು ಅವಕಾಶ ತೆಗೆದುಕೊಂಡಿದ್ದೀರಿ ಈಗ ಬೈರೇಗೌಡರು ಮಾತನಾಡಲಿ.

ಶ್ರೀ ಎಲ್.ಆರ್.ಶಿವರಾಮೇಗೌಡ : ಬೈರೇಗೌಡರಿಗೂ ಅವಕಾಶ ಕೊಡಿ. ನಮಗೂ 10 ನಿಮಿಷ ಅವಕಾಶ ಕೊಡಿ.

ಛೇರ್ಮನ್ : ಇಲ್ಲಿ ದೊಡ್ಡ ಪಟ್ಟಿಯೇ ಇದೆ ಸದಸ್ಯರು ಭಾಷಣ ಕಾಲದ ಮೇಲೆ ಅವಲಂಬಿಸಿದೆ ಈಗ ಬೈರೇಗೌಡರು ಮಾತನಾಡಲಿ

ಶ್ರೀ ವಾಟಾಳ್ ನಾಗರಾಜ್ : ಸಭೆಯ ಗಮನಕ್ಕೆ ನಾನು ಒಂದು ವಿಷಯ ತರುತ್ತೇನೆ ಬೆಂಗಳೂರು ನಗರ ಮಹಾ ನಗರಪಾಲಿಕೆಯವರು ತಿರುವಳ್ಳೂರ್ ಪ್ರತಿಮೆಯನ್ನು ಸ್ಥಾಪನೆ ಮಾಡುವ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದಾರೆಂದು ಸುದ್ದಿ ಇಂದಿನ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಸರ್ಕಾರದ ನಿರ್ಧಾರ ಏನು? ಇದರ ಬಗ್ಗೆ ಸರ್ಕಾರ ಹೇಳಿಕೆ ಕೊಡಬೇಕು ಅಂತಹ ನಿರ್ಧಾರ ತೆಗೆದುಕೊಂಡಿದರೆ ಬಹಳ ಸಂತೋಷ ಯಾರಾದರೂ ಮಂತ್ರಿಗಳಿಗೆ ಈ ಬಗ್ಗೆ ತಿಳುವಳಿಕೆ ಇದ್ದರೆ ವಿಚಾರ ಗೊತ್ತಿದ್ದರೆ ಆ ಬಗ್ಗೆ ಇಲ್ಲಿ ಹೇಳಬೇಕು ಇದು ಬಹಳ ಪ್ರಮುಖ್ಯವಾದ ವಿಚಾರ.

ಛೇರ್ಮನ್ : ನಿಮಗೆ ಪ್ರಮುಖವಾದ ವಿಚಾರ ಇರಬಹುದು. ಆದರೆ.......

ಶ್ರೀ ವಾಟಾಳ್ ನಾಗರಾಜ್ : ಇದು ಪ್ರಮುಖಾವಾದ ವಿಚಾರ

ಛೇರ್ಮನ್ : ನಾಗರಾಜ್ ಅವರೇ ಡಿಮಾಂಡ್ ಕೂಡಾ ಅಷ್ಟೇ ಪ್ರಮುಖವಾದ ವಿಚಾರ ಅದರ ಡಿಸ್ಕಷನ್ ಆಗಲಿ

ಶ್ರೀ ವಾಟಾಳ್ ನಾಗರಾಜ್ : ಇಂದು 5 ಗಂಟೆಗೆ ಸಭೆ ಮುಗಿಯುತ್ತದೆ.

ಛೇರ್ಮನ್ : ನಾಗರಾಜ್ ಅವರೇ ತಾವು ಕುಳಿತುಕೊಳ್ಳಿ ತಾವು ಕಾಲಹರಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ : ಕಾಲಹರಣ ಅಲ್ಲ ನಗರಪಾಲಿಕೆಯವರು ಈ ಆಜ್ಞೆ ಹಿಂತೆಗೆದುಕೊಂಡಿರುವ ಬಗ್ಗೆ ಪತ್ರಿಕೆಯಲ್ಲಿ ಬಹಳ ಪ್ರಾಮುಖ್ಯವಾಗಿ ಬಂದಿದೆ ಇದರ ಬಗ್ಗೆ ಸರ್ಕಾರದ ತೀರ್ಮಾನ ಏನು? ಅಲ್ಲಿ ಪ್ರತಿಮೆ ಬದಲಾವಣೆ ಮಾಡಬೇಕೆಂದು ನಾವು ಮೊದಲಿನಿಂದಲೂ ಕೇಳುತ್ತಿದ್ದೇವೆ.

ಛೇರ್ಮನ್ : ನಾಗರಾಜ್ ಅವರೇ ದಯವಿಟ್ಟು ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ : ನಾನು ಕುಳಿತುಕೊಳ್ಳುತ್ತೇನೆ ನಾನು ತಮ್ಮ ಆಜ್ಞೆಯನ್ನು ಮೀರುವುದಿಲ್ಲ ಇಲ್ಲಿ ಇಬ್ಬರು ಮಂತ್ರಿಗಳು ಇದ್ದಾರೆ ಅವರು ಮಾಹಿತಿ ತರಿಸಿ ಏನಾಗಿದೆ ಎಂದು ಹೇಳಬಹುದು.

ಶ್ರೀ ಜಿ.ಎಚ್ ಅಶ್ವಥರೆಡ್ಡಿ : ಮಾಹಿತಿ ಇನ್ನೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪತ್ರಿಕೆಗಳಲ್ಲಿ ಈಗ ಬಂದಿದೆ.

ಛೇರ್ಮನ್ : ಈಗ ಬೈರೈಗೌಡರು ಮಾತನಾಡಲಿ.

ಶ್ರೀ ಬಸವರಾಜ ರಾಯರೆಡ್ಡಿ : ಈಗ 5 ಗಂಟೆ ಆಗಿಹೋಗಿದೆ. ಸಬೆಯನ್ನು ನಾಳೆಗೆ ಮುಂದಕ್ಕೆ ಹಾಕಿ.

ಛೇರ್ಮನ್ : ನಾಗರಾಜ್ ಅವರೇ ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ : ನೀವು ಯಾವಾಗಲೂ ನಗುತ್ತಾ ಹೇಳುತ್ತಿದ್ದಿರಿ ಈಗ ಏಕೆ ಸಿಟ್ಟು ಆಗುತ್ತಿದ್ದೀರಿ?

ಛೇರ್ಮನ್ : ನಾನು ನಗುತ್ತಾ ಹೇಳುತ್ತಿದ್ದೇನೆ ತಾವು ದಯವಿಟ್ಟು ಕುಳಿತುಕೊಳ್ಳಿ ಇಲ್ಲಿ ಪ್ರಮುಖವಾಗಿ ಬೇಡಿಕೆಗಳ ಬಗ್ಗೆ ಚರ್ಚೆ ಆಗುತ್ತಾ ಇದೆ. ಅನಾವಶ್ಯಕವಾಗಿ ಬೇರೆ ಸಬ್ಜೆಕ್ಟ್ ತರುವುದರಲ್ಲಿ ಅರ್ಥ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಪ್ರಮುಖವಾದ ನಿರ್ಣಯವನ್ನು ಸರ್ಕಾರ ತೆಗೆದುಕೊಂಡರೆ ನಾವು ಸಂತೋಷಪಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ರೀತಿ ಆದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಪ್ರಮುಖವಾದ ವಿಚಾರ ಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಛೇರ್ಮನ್ : ನಾಗರಾಜ್ ಅವರೇ ಶಿವರಾಮೇಗೌಡರೇ ತಾವುಗಳು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕಾಗುತ್ತದೆ.

ಛೇರ್ಮನ್ : ಸರ್ಕಾರ ಹೇಳಿಕೆ ಕೊಡುವುದಕ್ಕೆ ಇನ್ನೂ ಸಮಯ ಇದೆ. ಈಗಲೇ ಹೇಳಿಕೆ ಕೊಡಬೇಕು ಎಂದು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಪ್ರತಿಮೆ ತೆಗೆಯುವ ಬಗ್ಗೆ ಸರ್ಕಾರದಿಂದ ಹೇಳಿಕೆ ಬರಬೇಕಾಗುತ್ತದೆ.

ಛೇರ್ಮನ್ : ಎಲ್ಲದಕ್ಕೂ ಸಮಯ ಇದೆ. ಈಗಲೇ ಕೊಡಬೇಕೆಂದರೆ ಹೇಗೆ? ನಾಳೆ ಕೊಡಬಹುದು ಬೈರೇಗೌಡರೇ ತಾವು ಮಾತನಾಡಿ.

(ಗೊಂದಲ)

5.05 ಪಿ.ಎಂ.

ಛೇರ್ಮನ್ : ದಯಮಾಡಿ ಎಲ್ಲರೇ ಕುಳಿತುಕೊಳ್ಳಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ: ಸಭೆಯು ಈಗಾಗಲೇ ನಿಗದಿಯಾದಂತೆ 5 ಗಂಟೆಗೆ ಮುಗಿಯಬೇಕಾಗಿದೆ.

ಛೇರ್ಮನ್ : ಇವತ್ತು ಆರು ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ಈಗಾಗಲೇ ತೀರ್ಮಾನವಾಗಿದೆ. ಸರ್ಕಾರ ಹೇಳಿಕೆಯನ್ನು ಕೊಡುವುದಕ್ಕೆ ಇನ್ನೂ ಸಮಯವಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ವಾಟಾಳ್‌ನಾಗರಾಜ್‌ರವರು ಸರ್ಕಾರ ಮಾಡಿರುವ ಕೆಲಸಕ್ಕೆ ಅಭಿನಂದನೆ ಮಾಡುತ್ತಿದ್ದಾರೆ. ಹೇಳಿಕೆಯನ್ನು ನಾಳೆ ಕೊಡಿಸುತ್ತೇನೆಂದು ತಾವು ಹೇಳಬೇಕು.

ಛೇರ್ಮನ್: ಅದನ್ನೇ ನಾನು ಹೇಳಿದ್ದು. ಈಗಲೇ ಸರ್ಕಾರ ಹೇಳಿಕೆಯನ್ನು ಕೊಡಬೇಕೆಂದರೆ ಹೇಗೆ? ವಾಟಾಳ್‌ನಾಗರಾಜ್‌ರವರು ದಯವಿಟ್ಟು ಕುಳಿತುಕೊಳ್ಳಬೇಕು. ಹೇಳಿಕೆಯನ್ನು ಬೇಕಾದರೆ ನಾಳೆ ಕೊಡಿಸೋಣ.

ಶ್ರೀ ವಾಟಾಳ್‌ನಾಗರಾಜ್: ಈಗಾಗಲೇ ಈ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಅದು ನಿಜವಾಗಿದ್ದರೆ ನಾನು ಸಂತೋಷಪಡುತ್ತೇನೆ.

ಛೇರ್ಮನ್: ಮಾನ್ಯ ವಾಟಾಳ್‌ನಾಗರಾಜ್‌ರವರೇ, ನೀವು ಅಧ್ಯಕ್ಷರ ಸಮಯವನ್ನು ವ್ಯಯ ಮಾಡುವುದಕ್ಕೆ ಇಷ್ಟೊಂದು ಅಡ್ವಾನ್‌ಟೇಜ್ ತೆಗೆದುಕೊಂಡರೆ ಹೇಗೆ ತಮ್ಮ ವಿಷಯದ ಬಗ್ಗೆ ನಾಳೆ ಹೇಳಿಕೆ ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ.

ಛೇರ್ಮನ್: ನಿಮಗೆ ಅಧ್ಯಕ್ಷರ ಬಗ್ಗೆ ಗೌರವವಿದ್ದರೆ ನನ್ನ ಮಾತಿಗೆ ಮನ್ನಣೆ ಕೊಟ್ಟು ದಯಮಾಡಿ ಕುಳಿತುಕೊಳ್ಳಬೇಕು. ಈಗ ಮಾನ್ಯ ಬೈರೇಗೌಡರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ತಾವು ಷರತ್ತು ಹಾಕಬಾರದು. ನಿಮ್ಮ ಬಗ್ಗೆ ಗೌರವಿರುವುದು ಷರತ್ತಿನ ಮೇಲಲ್ಲ, ನನಗೆ ನಿಮ್ಮ ಬಗ್ಗೆ ಅಪಾರವಾದ ಗೌರವವಿದೆ.

ಛೇರ್ಮನ್ : ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಇದಕ್ಕೆ ನಾಳೆ ಉತ್ತರ ಕೊಡುತ್ತಾರೆ. ದಯವಿಟ್ಟು ಸಮಯವನ್ನು ವೇಸ್ಟ್ ಮಾಡಬೇಡಿ.

ಛೇರ್ಮನ್ : ಮಾನ್ಯ ಬೈರೇಗೌಡರೇ, ತಾವು ತಮ್ಮ ಭಾಷಣ ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರಕ್ಕೆ ವಿಷಯ ಗೊತ್ತಿದೆ. ನಾವು ಹೋರಾಟ ಮಾಡಿದ್ದರ ಪ್ರತಿಫಲ. ಅದಕ್ಕೆ ನಾನು ಸಂತೋಷಪಡುತ್ತೇನೆ.

ಛೇರ್ಮನ್ : ನಿಮ್ಮ ಸಂತೋಷ ಮುಖ್ಯವೋ ಅಥವಾ ಸಾರ್ವಜನಿಕರ ಬೇಡಿಕೆಗಳು ಪಾಸ್ ಆಗುವುದು ಮುಖ್ಯವೋ ಎಂಬುದನ್ನು ತಾವು ಯೋಚನೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಸಮಗ್ರ ನಾಲ್ಕು ಕೋಟಿ ಕನ್ನಡಿಗರ ಸಮಸ್ಯೆ.

ಛೇರ್ಮನ್ : ನಿಮ್ಮ ಒಬ್ಬರ ಸಮಸ್ಯೆಯನ್ನು ನಾಳೆ ತೆಗೆದುಕೊಳ್ಳಬಹುದು. ದಯಮಾಡಿ ಕುಳಿತುಕೊಳ್ಳಿ. ನಿಮಗೆ ನಾಳೆ ಉತ್ತರ ಕೊಡಿಸುತ್ತೇನೆ. ಮಾನ್ಯ ಬೈರೇಗೌಡರು ಭಾಷಣ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಇದಿನಬ್ಬ ಮತ್ತು ಕಾಗೋಡುತಿಮ್ಮಪ್ಪನವರಿಗೆ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ, ತಾವು ಏತಕ್ಕೆ ಈ ರೀತಿ ಮಾಡುತ್ತೀರಿ? ನೀವು ನನ್ನ ಬಗ್ಗೆ ಸಹಮತ ಕೊಡುತ್ತಿದ್ದಿರಿ ಎಂಬುದು ನನಗೆ ಮೊದಲಿನಿಂದಲೂ ಗೊತ್ತು. ಕನ್ನಡ ಸಾಹಿತ್ಯದ ಬಗ್ಗೆ ನಿಮಗೆ ಕಳಕಳಿಯಿದೆ. ಕನ್ನಡದ ಕವಿತ್ವದ ಬಗ್ಗೆ ನಿಮಗೆ ಕಳಕಳಿಯಿದ. ಅದನ್ನು ನಾನು ಒಪ್ಪಿದ್ದೇನೆ.

ಛೇರ್ಮನ್ : ಮಾನ್ಯ ನಾಗರಾಜ್‌ರವರೇ, ತಾವೇನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ನಾಳೆ ಉತ್ತರ ಸಿಗುತ್ತದೆಂದು ನಾನು ಹೇಳಿದ್ದೇನೆ. ನೀವು ಇಷ್ಟೊಂದು ಸಮಯವನ್ನು ತೆಗೆದುಕೊಳ್ಳುವುದು ಸರಿಯಲ್ಲ, ವಿನಾಕಾರಣವಾಗಿ ತಾವು ಸಮಯವನ್ನು ತೆಗೆದುಕೊಳ್ಳುತ್ತಾ ಇದ್ದೀರಿ. 10-15 ನಿಮಿಷಗಳ ಸಮಯವನ್ನು ಸುಮ್ಮನೆ ಕಳೆದಿದ್ದೀರಿ.

ಶ್ರೀ ಎನ್. ಜಿ. ನಾಯಕ್: ಮಾನ್ಯ ವಾಟಾಳ್‌ನಾಗರಾಜ್‌ರವರೇ, ನಿಮಗೆ ಕನ್ನಡದ ಬಗ್ಗೆ ಗೌರವವಿದ್ದರೆ ತಾವು ಕುಳಿತುಕೊಳ್ಳಿ. ವಾಟಾಳ್ ನಾಗರಾಜ್‌ರವರೇ ಕನ್ನಡದ ಬಗ್ಗೆ ಗೌರವ ಘನತೆ ನಮಗೆ ಇಲ್ಲವೆಂದು ಹೇಳುತ್ತಾ ಇದ್ದೀರಾ? ಅಧ್ಯಕ್ಷರು ಹೇಳುತ್ತಿದ್ದಾರೆ ನಾಳೆ ನಿಮಗೆ ಉತ್ತರ ಕೊಡಿಸುತ್ತೇನೆಂದು; ನಿಮಗೆ ಗೊತ್ತಾಗುವುದಿಲ್ಲವೆ? ತಾವು ಕುಳಿತುಕೊಳ್ಳಿ.

ಛೇರ್ಮನ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಇಷ್ಟೊಂದು ಮೊಂಡಾಟ ಮಾಡಿದರೆ ಹೇಗೆ? ತಾವು ಮೊಂಡಾಟ ಮಾಡಬಾರದು?

ಶ್ರೀ ವಾಟಾಳ್ ನಾಗರಾಜ್ : ತಾವು ನನಗೆ ರಕ್ಷಣೆ ಕೊಡಬೇಕು. ಎಲ್ಲರೂ ಒಬ್ಬರ ಮೇಲೊಬ್ಬರಂತೆ ದಾಳಿ ಮಾಡುತ್ತಿದ್ದಾರೆ. ದಯವಿಟ್ಟು ತಾವು ನನಗೆ ರಕ್ಷಣೆ ಕೊಡುತ್ತೀರೋ ಇಲ್ಲವೋ? ರಕ್ಷಣೆ ಕೊಟ್ಟಿಲ್ಲ ಎಂದರೆ ನಾನು ಸಭಾತ್ಯಾಗ ಮಾಡುತ್ತೇನೆ. ತಾವು ನನಗೆ ರಕ್ಷಣೆ ಕೊಡುತ್ತೇನೆ ಎಂದರೆ ನಾನು ಮಾತನಾಡುತ್ತೇನೆ. ಇಲ್ಲದಿದ್ದರೆ ನಾನು ಹೊರಗಡೆ ಹೋಗುತ್ತೇನೆ.

ಛೇರ್ಮನ್ : ತಾವು ದಯವಿಟ್ಟು ಕುಳಿತುಕೊಳ್ಳಿ. ಇಷ್ಟೊಂದು ಮೊಂಡಾಟ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ: ಅವರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರು ಈ ಬಗ್ಗೆ ಬಹಳ ಹೋರಾಟ ಮಾಡಿದ್ದಾರೆ ಮತ್ತು ಅದಕ್ಕೆ ಫಲಿತಫಲ ಸಿಕ್ಕಿದೆ. ಸರ್ಕಾರ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರೆ ತಪ್ಪೇನೂ ಇಲ್ಲ.

ಛೇರ್ಮನ್ : ಈಗಲೇ ಕೊಡಬೇಕೆಂದೇನೂ ಇಲ್ಲ, ನಾಳೆ ಕೊಡಿಸೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕನ್ನಡ ನಾಡಿನ ಹಲವು ಸಮಸ್ಯೆಗಳ ಬಗ್ಗೆ ನಾನು ಕೇಳಿದ್ದೆ. ಸರೋಜಿನಿ ಮಹಿಷಿ ವರದಿ ಜಾರಿಗೆ ಬರಲಿಲ್ಲ, ಹಂಪಿ

ಯೂನಿವರ್ಸಿಟಿ ವಿಷಯ ಕೇಳಿ ಬರಲಿಲ್ಲ. ಇದೊಂದು ಮಾತ್ರ ಹೊರ ಬಂದಿದೆ ಅಂತ ಸಂತೋಷಪಡೋಣ ಎಂದರೆ, ತಾವು ಅವಕಾಶ ಕೊಡುತ್ತಿಲ್ಲ.

ಛೇರ್ಮನ್ : ಅವಕಾಶ ಕೊಡುತ್ತೇನೆ. ನೀವು ಕಾಯಬೇಕು. ಕಾಯುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನನಗೆ ಬೇರೆ ವಿಧಿ ಇಲ್ಲದೆ ಸರ್ಕಾರದ ಅಸಹಾಯಕತೆ, ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಹೊರಗಡೆ ಹೋಗುತ್ತೇನೆ.

ಛೇರ್ಮನ್ : ಆಯಿತಪ್ಪ,

ಶ್ರೀ ವಾಟಾಳ್ ನಾಗರಾಜ್ : ಏನು ಆಯ್ತುತಪ್ಪ? ಏನು ಹೀಗೆ ಹೇಳ್ತೀರಿ?

ಛೇರ್ಮನ್ : ಬೈರೇಗೌಡರೇ, ನೀವು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ. ನನಗೆ ಸರ್ಕಾರದ ಕಡೆಯಿಂದ ಉತ್ತರ ಬರಲಿಲ್ಲ. ಆದ್ದರಿಂದ ನನಗೆ ಬೇರೆ ಮಾರ್ಗವಿಲ್ಲದೆ ನಾನು ಹೊರಗಡೆ ಹೋಗುತ್ತೇನೆ.

ಛೇರ್ಮನ್ : ಆಯಿತು.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಅಂತೀರಾ?

ಶ್ರೀ ಆರ್. ಎನ್. ನಾಯಕ್ : ಹೊರಗಡೆ ಕಳಿಸಬೇಕಾದರೆ ನಿಮ್ಮನ್ನೇನು ಮೆರವಣಿಗೆ ಮಾಡಬೇಕಾ?

ಛೇರ್ಮನ್ : ನೀವು ಗಲಾಟೆ ಮಾಡುವುದಕ್ಕೆ ಶುರುಮಾಡಿ ಅರ್ಧಗಂಟೆಯಾಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನಗೆ ಎಲ್ಲರೂ ಉಪದೇಶ ಮಾಡುತ್ತಾರೆ. ನೀವು ಹೋಗಿ ಎಂದರೆ ನಾನು ಹೋಗುತ್ತೇನೆ. ಸರ್ಕಾರದ ನೀತಿಯಿಂದ ನಾನು ಬೇಸತ್ತಿದ್ದೇನೆ.

ತಮ್ಮ ಅಧ್ಯಕ್ಷತೆಯಲ್ಲಿ ಹೀಗೆ ಆಗಬಾರದಿತ್ತು.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಬಸವರಾಜ ರಾಯರೆಡ್ಡಿ : ಈಗ 5 ಗಂಟೆ 15 ನಿಮಿಷ ಆಯಿತು. ಈಗ ಸಭೆಯನ್ನು ಮುಂದೂಡಿ ನಾಳೆಗೆ ಮುಂದುವರೆಸುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಸಂಪ್ರದಾಯದ ಪ್ರಕಾರ ಸಭೆಯನ್ನು ಐದು ಗಂಟೆಗೆ ಮುಗಿಸಬೇಕಾಗಿತ್ತು. ಇನ್ನೂ ಬಹಳಷ್ಟು ಸದಸ್ಯರು ಮಾತನಾಡಬೇಕಾಗುತ್ತದೆ.

ಛೇರ್ಮನ್ : ಚರ್ಚೆ ಇವತ್ತೇ ಮುಗಿಯುತ್ತದೋ, ಬಿಡುತ್ತದೋ ಎಂಬುದು ಬೇರೆ ಪ್ರಶ್ನೆ. ಆದರೆ ಮಾತನಾಡಲಿಕ್ಕೆ ಸದಸ್ಯರು ತಯಾರಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಈಗ ಗಂಟೆ 5-15 ಆಗಿರುವುದರಿಂದ ನಾಳೆಗೆ ಸಭೆಯನ್ನು ಮುಂದೂಡುವುದು ಉಚಿತವೆಂದು ನಾನು ಭಾವಿಸುತ್ತೇನೆ.

ಛೇರ್ಮನ್ : ಶ್ರೀ ಬೈರೇಗೌಡರೇ ನೀವು ಮಾತನಾಡಿ.

+ ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸಭೆಯು ಒಪ್ಪಿಗೆಗಾಗಿ ಅತಿಮುಖ್ಯವಾದ ಮತ್ತು ಪ್ರಮುಖ ಬೇಡಿಕೆಗಳನ್ನು ಸರ್ಕಾರ ಸಭೆಯ ಮುಂದೆ ಇಟ್ಟಿದೆ. ಈ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ತಮ್ಮ ಅಪ್ಪಣೆ ಪಡೆದು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಒಂದು ಕಾಲದಲ್ಲಿ ಈ ಲೋಕೋಪಯೋಗಿ ಇಲಾಖೆಯನ್ನು ಎನಿಮಿ ನಂಬರ್ ಒನ್ ಎಂದು ಮಾನ್ಯ ಹಿರಿಯರಾದ ರಾಜಗೋಪಾಲಾಚಾರಿ ಎಂದು ಅವರು ಕರೆದಿದ್ದರು ಅವರ ಕಾಲದಲ್ಲಿ ಅವರದ್ದೇ ಆದ ವಿವರಣೆಯನ್ನು ಕೊಟ್ಟು ಅವರು ಹಾಗೆ ಕರೆದಿದ್ದರು.

ಈಗ ಈ ಬಗ್ಗೆ ಒಂದು ಮಾತು ಹೇಳುವುದೇನೆಂದರೆ, ಈ ಇಲಾಖೆಯನ್ನು ಓವರ್ ಟೇಕ್ ಮಾಡಿರುವಂಥ ಬಹಳ ಇಲಾಖೆಗಳಿವೆ. ಬಹಳ ಇಲಾಖೆಗಳು ಈ ಪಿ.ಡಬಬ್ಲ್ಯೂ.ಡಿ.ಇಲಾಖೆಯನ್ನು ಓವರ್ ಟೇಕ್ ಮಾಡಿವೆ. ಆದ್ದರಿಂದ ಈ ಹೆಸರು ಇವತ್ತಿನದಿವಸ ಅದಕ್ಕೆ ಪೂರ್ಣವಾಗಿ ಅನ್ವಯವಾಗುವುದಿಲ್ಲ ಎನ್ನತಕ್ಕಂತಾದ್ದು ನನ್ನ ಭಾವನೆ. ಅದರಲ್ಲೂ ನನಗೆ ಪಾಠ ಹೇಳಿಕೊಟ್ಟಿರತಕ್ಕಂಥ ಮಾನ್ಯ ಅಶ್ವತ್ಥರೆಡ್ಡಿಯವರು ಮಂತ್ರಿಗಳಿದ್ದಾರೆ. ಹಿಂದೆ ನಾನು ಸೆಂಟ್ರಲ್ ಕಾಲೇಜಿನಲ್ಲಿದ್ದಾಗ, ಅವರ ವಿದ್ಯಾರ್ಥಿಯಾಗಿದ್ದೆ. ಅವರು ನನಗೆ ಗುರುಗಳಾಗಿದ್ದರು. ನನಗೆ ಪಾಠ ಹೇಳಿರತಕ್ಕಂಥವರು ಇವತ್ತು ಮಂತ್ರಿಗಳಾಗಿದ್ದಾರೆ. ನನಗೆ ಮಾನ್ಯ ಪರಮಸ್ನೇಹಿತರಾದ ಮತ್ತು ರೈತರ ಬಗ್ಗೆ ಕಳಕಳಿ ಇರತಕ್ಕಂಥ, ಮಲ್ಲಿಕಾರ್ಜುನ ಪ್ರಸನ್ನ ಅವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾರೆ. ಮತ್ತೆ ಮುಟ್ಟಿದರು ಶಾಕ್ ಹೊಡೆಯುವುದಿಲ್ಲ ಅಂತಹವರು ನಮ್ಮ ರಾಮಪ್ಪನವರು; ಇವರನ್ನು ನೋಡಿ ನಾವು ಆನಂದಪಡಬೇಕು. ಆಗಲೇ ಅಧ್ಯಕ್ಷರು ಹೇಳುತ್ತಾ ಇದ್ದರು; ಕೆಲವರು ಆಕಾರದಲ್ಲಿ ವ್ಯತ್ಯಾಸ ಇದೆ, ಅದರೆ ಇಲ್ಲಿ ಕುಳಿತುಕೊಳ್ಳತಕ್ಕ ಸದಸ್ಯರಲ್ಲಿ ಏನೂ ವ್ಯತ್ಯಾಸವಿಲ್ಲ ಅದರಲ್ಲಿ ಕೆಲವರು ನಾನು ಹಿಂದೆ ಮಂತ್ರಿಯಾಗಿದ್ದಾಗ, ಮೀನುಗಾರಿಕೆ ಮತ್ತು ಬಂದರು ಖಾತೆಯನ್ನು ಹೊಂದಿದ್ದೆ. ಇವತ್ತು ನನ್ನ ಸ್ನೇಹಿತರಾದ ಶ್ರೀಮಾನ್ ಬೆಳ್ಳಿಯಪ್ಪನವರು ಈ ಇಲಾಖೆಯನ್ನು ವಹಿಸಿಕೊಂಡಿದ್ದಾರೆ.

ಇವರ ಬೇಡಿಕೆಯನ್ನು ಸಹ ಗತ್ಯಂತರವಿಲ್ಲದೆ, ಇವತ್ತಿನ ದಿವಸ ವಿರೋಧ ಮಾಡಬೇಕಾಗಿದೆ. ಈ ಇಲಾಖೆಗೆ ಒಂದು ಪರಂಪರೆ ಇದೆ. ಒಂದು ಕಾಲದಲ್ಲಿ ವಿದ್ಯುತ್ ಮತ್ತು ಲೋಕೋಪಯೋಗಿ ಇಲಾಖೆಗೆ ಈ ರಾಜ್ಯದಲ್ಲಿ ಇಬ್ಬರೇ ಚೀಫ್ ಇಂಜಿನಿಯರುಗಳು ಇದ್ದರು. ಒಂದುಕಡೆ ವಿದ್ಯುತ್‌ಗೆ ಸಂಬಂಧಪಟ್ಟಹಾಗೆ, ಇನ್ನೊಂದುಕಡೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಹಾಗೆ ಇಬ್ಬರು ಚೀಫ್ ಇಂಜಿನಿಯರು ಇರುತ್ತಿದ್ದರು. ಇವತ್ತು ವಿದ್ಯುತ್ ಮಂಡಳಿಯಲ್ಲಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಲೆಕ್ಕ ಹಾಕಿದರೆ 30-35 ಜನ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಚೀಫ್ ಇಂಜಿನಿಯರುಗಳು ಮತ್ತು ಕೆ.ಇ.ಬಿ.ನಲ್ಲಿ 10-15 ಜನ ಚೀಫ್ ಇಂಜಿನಿಯರುಗಳು ಇದ್ದಾರೆಂದು ನನಗನ್ನಿಸುತ್ತದೆ. ಒಟ್ಟಾರೆ ಇವತ್ತು ಸುಮಾರು 50-55 ಜನ ಚೀಫ್ ಇಂಜಿನಿಯರುಗಳು ಇದ್ದಾರೆ. ಇದರಲ್ಲಿ ಮತ್ತೆ ಇಂಜಿನಿಯರಿಂಗ್ ಇನ್ ಚೀಫ್ ಇನ್ನೂ ಮುಂತಾದ ಹೆಸರುಗಳನ್ನು ಹೇಳುತ್ತಾ ಹೋದರೆ, ಹನುಮಂತನ ಬಾಲ ಬೆಳದಹಾಗೆ, ಬೆಳೆಯತಕ್ಕಂಥ ಇಲಾಖೆಯಾಗಿ ಇದು ಬೆಳೆದು ಬಂದಿದೆ. ಇವರ ಅವಶ್ಯಕತೆ ಇಲ್ಲವೆಂದು ಹೇಳುತ್ತಿಲ್ಲ. ಅವರ ಅವಶ್ಯಕತೆ ಇದ್ದರೂ ಸಹ ಕೆಳಮಟ್ಟದಲ್ಲಿ ಅಧಿಕಾರಿಗಳಾಗಿರತಕ್ಕಂಥವರು, ಜೂನಿಯರ್ ಇಂಜಿನಿಯರ್ ಆಗಿರತಕ್ಕಂಥವರು, ಅಸಿಸ್ಟೆಂಟ್ ಇಂಜಿನಿಯರ್ ಆಗಿರತಕ್ಕಂಥವರು , ಯಾವ ಯಾವ ಸಂಖ್ಯೆಯಲ್ಲಿ ಇರಬೇಕಾಗಿತ್ತೋ ಅಷ್ಟು ಇಲ್ಲ.

ನಾನು ಕಳೆದ ಸಾರಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಸುಮಾರು ಮುನ್ನೂರು ಜನ ಅಸಿಸ್ಟೆಂಟ್ ಇಂಜಿನಿಯರುಗಳ ಹಾಗೂ ಜೂನಿಯರ್ ಇಂಜಿನಿಯರುಗಳ ಹುದ್ದೆಗಳು ಖಾಲಿ ಇದೆ ಎಂದು ಹೇಳಿದ್ದರು. ಈಗ ಹೊಸದಾಗಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಮಾತ್ರ ನೇಮಕ ಮಾಡತಕ್ಕ ವ್ಯವಸ್ಥೆ ನಡೆದಿದೆ. ಇದಕ್ಕೆ ಆಮೇಲೆ ಬರುತ್ತೇನೆ. ಇವತ್ತು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ಇಲಾಖೆ ಬೆಳೆದಿದ್ದರೂ ಸಹ ಅತಿ ಮುಖ್ಯವಾದ ನೀರಾವರಿ ಯೋಜನೆಗಳಲ್ಲಿ ನಾವು ಎಷ್ಟು ಸಾಧನೆ ಮಾಡಬೇಕಾಗಿತ್ತೋ, ಎಷ್ಟು ಎಕರೆಗೆ ನೀರು ಕೊಡಬೇಕಾಗಿತ್ತೋ, ಅಷ್ಟು ಆಗದೇ ಈ ಯೋಜನೆಗಳು ಕುಂಠಿತವಾಗಿ ನಡೆಯುತ್ತಿದೆ. ಅದರಲ್ಲೂ ಇವತ್ತು ನಮ್ಮನ್ನು ಮತ್ತು ಇಡೀ ರಾಜ್ಯವನ್ನು ಕಾಡಿಸತಕ್ಕದ್ದು, ಒಂದು ಕಡೆ ಕಾವೇರಿ ವ್ಯಾಲಿಯಲ್ಲಿರತಕ್ಕ ಯೋಜನೆಗಳು ಮತ್ತೊಂದು ಕೃಷ್ಣಾ ವ್ಯಾಲಿಯಲ್ಲಿರತಕ್ಕಂಥ ಯೋಜನೆಗಳು. ಕಾವೇರಿ ವ್ಯಾಲಿಯಲ್ಲಿರತಕ್ಕ ಯೋಜನೆಗಳಿಗೆ ಸಮಯವೇ ಇಲ್ಲ, ಕೃಷ್ಣಾ ವ್ಯಾಲಿಯಲ್ಲಿರತಕ್ಕ ಯೋಜನೆಗಳಿಗೆ ಕೊನೆಯಪಕ್ಷ ಇನ್ನೂ 9 ವರ್ಷಗಳ ಅವಧಿ ಇದೆ.

ಈ ಬಗ್ಗೆ ಅನೇಕ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳೂ ಕೂಡಾ ಇಲ್ಲಿ ಬಂದಿವೆ. ಈ ಯೋಜನೆಗಳಿಗೆ ಅದರಲ್ಲೂ ನೀರಾವರಿ ಯೋಜನೆಗಳಿಗೆ ಅಧಿಕಾರಿಗಳನ್ನು ನೇಮಿಸಿದಾಗ, ನೇಮಿಸಿರತಕ್ಕಂಥವರು ಅಲ್ಲಿಗೆ ಹೋಗದೆ, ಎಷ್ಟೋ ಹುದ್ದೆಗಳು ಅಲ್ಲಿ ಖಾಲಿ ಇವೆ. ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ರೈತನ ಜಮೀನಿಗೆ ನೀರು ಕೊಡತಕ್ಕಂಥ ದೃಷ್ಟಿಯಿಂದ ಈ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿರತಕ್ಕಂಥಾದ್ದು ನಿಮ್ಮ ಅತಿ ಮುಖ್ಯವಾದ ಕರ್ತವ್ಯ ಆಗಿದೆ. ಇದು ಸತತವಾಗಿ ನಮ್ಮ ಸರಕಾರ ಇದ್ದಾಗಲೂ ನಡೆದಿದೆ, ಅದರ ನಂತರ ಬಂದ ಸರಕಾರದಲ್ಲೂ ನಡೆದಿದೆ. ಈಗಲೂ ಕೂಡಾ ಯೋಜಿತವಾಗಿ ಇವತ್ತಿನ ದಿವಸ ನಡೆಯುತ್ತಿವೆ. ಅನೇಕ ಹುದ್ದೆಗಳು ಖಾಲಿ ಇವೆ. ಅವನ್ನು ತುಂಬತಕ್ಕಂಥ ಪ್ರಯತ್ನ ನಡೆಯಲಿಲ್ಲ. ನೀರಾವರಿ ಯೋಜನೆಗಳಿಗೆ ಯಾವ ಯಾವ ಅಧಿಕಾರಿಗಳನ್ನು ವರ್ಗ ಮಾಡಿದ್ದೀರೋ ಅವರನ್ನು ಅಲ್ಲಿಗೆ ಕಳುಹಿಸತಕ್ಕಂಥ ಏರ್ಪಾಡು ಅತೀ ಜಾಗ್ರತೆಯಾಗಿ ಆಗಬೇಕು. ಒಂದನ್ನು ನಾನು ಸ್ವಾಗತ ಮಾಡುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ವಿಶೇಷವಾಗಿ ನೇಮಕಾತಿಯನ್ನು ಮಾಡತಕ್ಕಂಥ ಒಂದು ಕ್ರಮ ತೆಗೆದುಕೊಂಡಿದ್ದೀರಿ. ಎಂದು ಕೇಳಿದ್ದೇನೆ. ಇದು ನಿಜವಾಗಿ ಆಗಬೇಕಾಗಿರತಕ್ಕಂಥಾದ್ದು. ಇದು ಯಾವಾಗಲೋ ಆಗಬೇಕಾಗಿತ್ತು. ಕಾರಣವೇನೆಂದರೆ ಇವರು ಹೋಗದೇ ಇದ್ದ ಕಾರಣದಿಂದ ಈ ಯೋಜನೆಗಳ ಕೆಲಸ ನಿಂತು ಹೋಗಿವೆ. ಆದ್ದರಿಂದ ನೀರಾವರಿ ಇಲಾಖೆಯಲ್ಲಿ ಖಾಲಿಇರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತಿನ ದಿವಸ ಈ ಇಲಾಖೆಯ ಅಸ್ತಿತ್ವವೇ ಅಲ್ಲಾಡುತ್ತಿದೆ. ಮೊದಲು ಕೆಲವು ಕಾರಣಗಳಿಂದ ಈ ಇಲಾಖೆಯನ್ನು ಎರಡಾಗಿ ಮಾಡಿದರು. ಒಂದು ನೀರಾವರಿ ಇಲಾಖೆ. ಇನ್ನೊಂದು ಲೋಕೋಪಯೋಗಿ ಇಲಾಖೆ. ಎಂದು ಮಾಡಿ ಎರಡಕ್ಕೂ ಬೇರೆಬೇರೆ ಚೀಫ್ ಇಂಜಿನಿಯರ್‌ಗಳನ್ನು ನೇಮಕ ಮಾಡಿದರು. ತೀವ್ರತೆಯಿಂದ ಕೆಲಸ ಆಗಬೇಕು, ಬೇಗಬೇಗನೆ ಕೆಲಸ ಆಗಬೇಕು ಎಂಬ ಕಾರಣದಿಂದ ನೀರಾವರಿ ಇಲಾಖೆಗೆ ಮುಖ್ಯ ಎಂಜಿನಿಯರ್‌ಗಳನ್ನು, ಮತ್ತು ಕೆಲವು ಯೋಜನೆಗಳಿಗೇ ಸೀಮಿತವಾಗಿ ಮುಖ್ಯ ಎಂಜಿನಿಯರ್‌ಗಳನ್ನು ನೇಮಕ ಮಾಡಿರುತ್ತಾರೆ. ಅವರು ಸ್ಥಳದಲ್ಲೇ ಇದ್ದು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಈ ರೀತಿ ಮಾಡಿರುತ್ತಾರೆ. ಇದರ ಜೊತೆಗೆ ರಾಜ್ಯ ಸರಕಾರದ ಮಟ್ಟದಲ್ಲಿ ಸಹ ಇವತ್ತು ಈ ಇಲಾಖೆಗಳನ್ನು ಬೇರ್ಪಡಿಸತಕ್ಕಂಥ ಅಂದರೆ ಒಂದನ್ನು ಎರಡು ಮಾಡತಕ್ಕಂಥ ತೀವ್ರ ಪ್ರಯತ್ನ ನಡೆಯುತ್ತಿದೆ. ಇದು

ನನಗೆ ಅರ್ಥವಾಗುತ್ತಿಲ್ಲ. ಹುದ್ದೆಗಳು ಖಾಲಿ ಇರತಕ್ಕಂಥಾದ್ದು ಒಂದು ಕಡೆ, ವರ್ಗ ಮಾಡಿದರೆ ಅಲ್ಲಿಗೆ ಹೋಗದಿರತಕ್ಕಂಥ ಅಧಿಕಾರಿಗಳ ದಂಡೇ ಇನ್ನೊಂದು ಕಡೆ ಇದೆ. ಆದರೆ ಇಂತಹ ಗುರುತರವಾದ ವಿಚಾರ ಸರಕಾರ ಮುಂದಿರತಕ್ಕಂಥ ಸಂದರ್ಭದಲ್ಲಿ ಈ ಇಲಾಖೆಯನ್ನು ಎರಡು

ಮಾಡತಕ್ಕಂಥಾದ್ದು ಏಕೆ? ಈ ಇಲಾಖೆಗೆ ಮೂರು ಜನ ಮಂತ್ರಿಗಳು ಇದ್ದಾರೆ. ಆದ್ದರಿಂದ ಮೂರು ಭಾಗ ಮಾಡಿಬಿಡಿ. ಮಲ್ಲಾರಿಗೌಡ ಪಾಟೀಲರನ್ನು ಒಂದು ಭಾಗ, ಅಶ್ವತ್ಥರೆಡ್ಡಿಯವರನ್ನು ಒಂದು ಭಾಗ, ಮಲ್ಲಿಕಾರ್ಜುನ ಪ್ರಸನ್ನರವರದ್ದು ಒಂದು ಭಾಗ ಎಂದು ಮಾಡಿ, ಚೆನ್ನಾಗಿರುತ್ತದೆ. ನನಗೆ ಆಶ್ಚರ್ಯ ಏನೆಂದರೆ ಇಲ್ಲಿ ಮಂತ್ರಿಗಳು ಅಧಿಕಾರ ನಡೆಸುತ್ತಾರೋ, ಅಥವಾ ಕೆಲವು ಅಧಿಕಾರಿಗಳು ಅಧಿಕಾರ ನಡೆಸುತ್ತಾರೋ ಗೊತ್ತಿಲ್ಲ. ಈ ವರ್ಗಾವರ್ಗಿ, ವಿಚಾರದಲ್ಲಿ ಕೆಲವರು ಆಫೀಸ್ ಬಾಗಿಲು ಮುರಿದರು ಎಂದು ಕೇಳಿದೆ; ಎಂಜಿನಿಯರುಗಳ ಹತ್ತಿರ ಅಧಿಕಾರಿಗಳೊಬ್ಬರು ಹಣ ವಸೂಲಿ ಮಾಡಿ ಅಲ್ಲಿಗೆ ಹಾಕಿಸುತ್ತೇನೆ, ಇಲ್ಲಿಗೆ ಹಾಕಿಸುತ್ತೇನೆ. ಎಂದು ಹೇಳಿದ್ದರಂತೆ ಅದರಂತೆ ಹಾಕಿಸುವುದಕ್ಕೆ ಆಗಲಿಲ್ಲ. ಆಗ ಎಲ್ಲರೂ ಹೋಗಿ ಆ ಅಧಿಕಾರಿ ಬಾಗಿಲನ್ನು ಮುರಿದರು ಎಂದು ಕೇಳಿದೆ. ನಿಜವೋ ಅಲ್ಲವೋ ಗೊತ್ತಿಲ್ಲ, ಅಂತೂ ಕೇಳಿದ್ದೇನೆ. ಈ ರೀತಿ ಒಬ್ಬರು ಅಧಿಕಾರಿಗಳಾಗಿರತಕ್ಕಂಥವರು ಮಾಡಿದ್ದಾರೆ. ಇಡೀ ಇಲಾಖೆಯನ್ನೇ ಒಬ್ಬ ಅಧಿಕಾರಿ ತನ್ನ ಜೇಬಿನಲ್ಲಿ ಇಟ್ಟುಕೊಂಡು ಅಧಿಕಾರ ನಡೆಸುತ್ತಾರೆ ಎಂದರೆ ಇದಕ್ಕೆ ಏನು ಹೇಳಬೇಕು. ಅಂತಹ ಒಂದು ಪ್ರಯತ್ನ ಈಗ ನಡೆಯುತ್ತಿದೆ. ಈ ಇಲಾಖೆಯಲ್ಲಿ ಒಂದು ತುಘಲಕ್ ದರ್ಬಾರ್ ನಡೆಯುತ್ತಿದೆ. ಒಂದು ತಿಂಗಳಲ್ಲಿ ಎರಡು ಆಜ್ಞೆ, ಮಾನ್ಯ ಅಧ್ಯಕ್ಷರೇ ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಆಜ್ಞೆ ಇದೆ, ಅದನ್ನು ನಾನು ಪೂರ್ತಿಯಾಗಿ ಓದುವುದಕ್ಕೆ ಹೋಗುವುದಿಲ್ಲ.

ನಾಲ್ಕು ಪುಟಗಳ ಒಂದು ಆಜ್ಞೆ ಮಾಡಿದ್ದಾರೆ. ಈ ಆಜ್ಞೆ ಸರ್ಕಾರದ ಆಜ್ಞೆ ಇದು ದಿನಾಂಕ 29-8-91ರಲ್ಲಿ ಹೊರಡಿಸಿರತಕ್ಕಂಥ ಆಜ್ಞೆ, ಇದರಲ್ಲಿ ಸೂಕ್ಷ್ಮವಾಗಿ ಈ ಇಲಾಖೆಯ ಚರಿತ್ರೆ ಎಲ್ಲಾ ಹೇಳಿದ್ದಾರೆ. ದಿನಾಂಕ 12-6-84ರಲ್ಲಿ ಈ ಇಲಾಖೆ ಎರಡು ಆದವು. ಮೊದಲು ಲೋಕೋಪಯೋಗಿ ಮತ್ತು ಇರಿಗೇಷನ್ ಅಂಡ್ ಕಾಡ ಅಂತ ಇತ್ತು. ನಂತರ Special Secretary, PWD & CADA Department was changed as Secretary to Government, PWD & CADA Department. ಒಂದು ಇರಿಗೇಷನ್‌ಗೆ ಸಂಬಂಧಪಟ್ಟಿದ್ದು, ಇನ್ನೊಂದು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದು. ಇದಾದ ಮೇಲೂ ಕೂಡ ಸರ್ಕಾರದವರು ದಿನಾಂತ 20-10-1986ರಲ್ಲಿ ಒಂದು ಆಜ್ಞೆ ಹೊರಡಿಸುತ್ತಾರೆ. ಲೋಕೋಪಯೋಗಿ ಮತ್ತು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್ ಅಂತ ಎರಡು ಮಾಡಿದರು. ಈಗ ಇದು ಮಾನ್ಯ ಅಶ್ವತ್ಥರೆಡ್ಡಿಯವರದ್ದು ಎನರ್ಜಿ ಬಗ್ಗೆ ಆಮೇಲೆ ತೆಗೆದುಕೊಳ್ಳೋಣ, ಈಗ ಈ ಇಲಾಖೆ ನಾಲ್ಕು ಭಾಗವಾಗಿದೆ. ಈ ಇಲಾಖೆಯನ್ನು ಇವತ್ತಿನದಿವಸ ನಾಲ್ಕು ಭಾಗಗಳನ್ನಾಗಿ ಮಾಡಿದ್ದರಿಂದ ಇದು ಚೂರು ಚೂರು ಆಗಿದೆ. ಮೊದಲು ಇದ್ದದ್ದು ಇಬ್ಬರು ಚೀಫ್ ಇಂಜಿನೀಯರುಗಳು. ಈಗ ಅವರ ಸಂಖ್ಯೆ ಹೆಚ್ಚಾಗಿದೆ. ಇದರ ಜೊತೆಗೆ ಇವತ್ತು ನಾಲ್ಕು ಚೂರುಗಳಾಗಿವೆ. ಈ ಇಲಾಖೆಯನ್ನು ಸೆಕ್ರೆಟರಿಯೇಟ್ ಮಟ್ಟದಲ್ಲೂ ಬೇರ್ಪಡಿಸತಕ್ಕ ಪ್ರಯತ್ನ ನಡೆದಿದೆ. ಇದು ನಮಗೆ ಅರ್ಥವಾಗುತ್ತಿಲ್ಲ. ಒಂದು ಸಾರಿ ಈ ಇಲಾಖೆಯನ್ನು ವಿಭಾಗ ಮಾಡೋಣ ಅಂತ ಒಂದು ಆಜ್ಞೆ 12-8-91ರಲ್ಲಿ ಬರುತ್ತದೆ, ಅದಾದ ಮೇಲೆ ಇನ್ನೊಂದು ಆಜ್ಞೆ ದಿನಾಂಕ 29-8-91ರಲ್ಲಿ

ಒಂದು ಆಜ್ಞೆ ಮಾಡಿದ್ದಾರೆ. ಅದರಲ್ಲಿ ಕೂಡ ಹಿಂದೆ ಮಾಡಿದ ಆಜ್ಞೆಯನ್ನು ಪಕ್ಕಕ್ಕೆ ಇಡತಕ್ಕಂಥ ಆಜ್ಞೆಯನ್ನು ದಿನಾಂಕ 29-8-92ರಲ್ಲಿ ಹೊರಡಿಸಿದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ? ಮಾನ್ಯ ಅಶ್ವತ್ಥರೆಡ್ಡಿಯವರೋ ಅಥವಾ ಇನ್ನು ಯಾರು ಇದಕ್ಕೆ ಉತ್ತರ ಕೊಡುತ್ತಾರೋ ನನಗಂತೂ ಗೊತ್ತಿಲ್ಲ, ಏಕೆಂದರೆ ಈ ಇಲಾಖೆ ನಾಲ್ಕು ಚೂರುಗಳಾಗಿವೆ. ನಿಮ್ಮದು ಅದರಲ್ಲಿ ಯಾವ ಚೂರು. ಇದಕ್ಕೆ ಮಾನ್ಯ ಅಶ್ವತ್ಥರೆಡ್ಡಿಯವರು ಉತ್ತರ ಕೊಡುತ್ತಾರೋ ಅಥವಾ ಮಾನ್ಯ ಮಲ್ಲಾರಿಗೌಡರು ಉತ್ತರ ಕೊಡುತ್ತಾರೋ ಗೊತ್ತಿಲ್ಲ, ಉತ್ತರ ಕೊಡುವುದಕ್ಕೆ ಪೈಪೋಟಿ ಬರಬಹುದು ಅಂತ ನನಗೆ ಅನಿಸುತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಆ ನಾಲ್ಕು ಚೂರುಗಳು ಸ್ಪೆಸಿಫಿಕ್ ಆಗಿ ಇಂತಿಂಥವರಿಗೆ ಎಂದು ಅಲಾಟ್ ಆಗಿದೆ.

ಶ್ರೀ ಸಿ. ಬೈರೇಗೌಡ : ಅವರಿಗೆ ಗೊತ್ತಿರಬಹುದು. ನನಗೆಗೊತ್ತಿಲ್ಲ. ಈ ರೀತಿ ಇಲಾಖೆಯನ್ನು ವಿಭಜನೆ ಮಾಡತಕ್ಕಂಥ ಹುಚ್ಚು ಪ್ರಯತ್ನ ಏನು ನಡೆದಿದೆ, ಇದರಿಂದ ಕೆಲವು ಅಧಿಕಾರಿಗಳ ತೊಘಲಕ್ ದರ್ಬಾರ್ ನಡೀತಿದೆ. ಈ ತೊಘಲಕ್ ದರ್ಬಾರನ್ನು ನಿಲ್ಲಿಸಿ ಅಲ್ಲಿ ಕೆಲಸ ಮಾಡಲು ಹೇಳಬೇಕು. ಇವತ್ತು ನೀರು ಹರಿದು ಹೋಗುತ್ತಿದೆ. ಕಾವೇರಿ ನೀರು ಹರಿದು ಹೋಗುತ್ತಿದೆ. ಕೃಷ್ಣಾ ನದಿ ನೀರು ಹರಿದು ಹೋಗುತ್ತಿದೆ. ಇನ್ನೂ 9 ವರ್ಷಗಳಲ್ಲಿ ನೀವು ನಿಮ್ಮ ಯೋಜನೆಗಳನ್ನು ಮುಗಿಸದಿದ್ದರೆ ಕೃಷ್ಣಾ ನದಿ ನೀರು ಸಹ ಹರಿದು ಬೇರೆ ಕಡೆಗೆ ಹೋಗುತ್ತದೆ. ನೀವು ಅದನ್ನು ಬಿಟ್ಟು ಈ ಇಲಾಖೆಯನ್ನೇ ಚೂರು ಚೂರು ಮಾಡತಕ್ಕಂಥ ಹುಚ್ಚು ಪ್ರಯತ್ನ ಏನು ನಡೆಯುತ್ತಿದೆ ದಯಮಾಡಿ ಇದನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡಿ. ನನಗೆ ಗೊತ್ತಿರತಕ್ಕಂಥ ಕೆಲವು ಅಧಿಕಾರಿಗಳು ಅಲ್ಲಿ ಇದ್ದಾರೆ. ಅವರು ಸುಮಾರು 20 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅಸಿಸ್ಟೆಂಟ್ ಇಂಜಿನೀಯರ್ ಆಗಿ ಕೆಲವರು ಸೇವೆ ಸಲ್ಲಿಸುತ್ತಿದ್ದಾರೆ. ನಾಳೆ ಈ ಇಲಾಖೆ ವಿಭಜನೆ ಆದರೆ ಅವರು ಎಲ್ಲಿಗೆ ಹೋಗಬೇಕು. ಎಲ್ಲರೂ ಒಂದೇ ಕಡೆ ನುಗ್ಗಬೇಕು. ಅವರು 20 ವರ್ಷ ಸೇವೆ ಮಾಡಿದರೂ ಸಹ ಅವರ ಸೇವಾವಧಿಪೂರ್ತಿ ಒಂದು ಪ್ರೊಮೋಷನ್ ಇಲ್ಲ, ಅವರು ತಮ್ಮ ಸೇವಾವಧಿ ಪೂರ್ತಿ ಅಲ್ಲೇ ಇರಬೇಕಾಗುತ್ತದೆ. ಅವರನ್ನು ನೀರಾವರಿ ಇಲಾಖೆಗೆ ವರ್ಗ ಮಾಡಬೇಕಾದರೂ ಅದನ್ನು ಗೆಜೆಟ್ ನೋಟಿಫಿಕೇಷನ್ ಪ್ರಕಾರ ಮಾಡಬೇಕು. ಆದರೆ ರಿಕ್ರೂಟ್‌ಮೆಂಟ್ ಆ ತರಹ ಮಾಡಿಲ್ಲ, ಅವರು ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಅನೇಕ ಅಧಿಕಾರಿಗಳಿಗೆ ಇದು ಗೊತ್ತಿಲ್ಲ, ನೀವು ಆಪ್ಷನ್ ಕೊಡಬೇಕೆಂದು ಅನೇಕ ಅಧಿಕಾರಿಗಳಿಗೆ ಇದು ಗೊತ್ತಿಲ್ಲ. ಒಂದು ಪಟ್ಟಿ ತಯಾರು ಮಾಡುತ್ತೇವೆಂದು ಹೇಳಿದಿರಿ. ಅದನ್ನು ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ, ಸಮಯ ಆಗುತ್ತದೆ. ನಿಮ್ ಸರ್ಕಾರಿ ಆಜ್ಞೆಯಲ್ಲಿ ಇದೆಲ್ಲಾ ಇದೆ. ಗೊತ್ತಿಲ್ಲದೆ ಅನೇಕರು ಆಪ್‌ಶನ್ ಕೊಡದೇ ಇರತಕ್ಕಂಥ ಪರಿಸ್ಥಿತಿ ಒಂದು ಕಡೆ ಆದರೆ ನಾಲ್ಕು ವರ್ಷ ಅಸಿಸ್ಟೆಂಟ್ ಇಂಜನೀಯರ್ ಆಗಿ ಕೆಲಸ ಮಾಡಿದವರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನೀಯರ್ ಆಗುತ್ತಾರೆ. ಇದು ಗೊತ್ತಿಲ್ಲದೆ ಇರತಕ್ಕಂಥವರು ಆಪ್‌ಶನ್ ಕೊಡದೆ ಇರುವ ಕಾರಣ ಅವರು ಅಸಿಸ್ಟೆಂಟ್ ಇಂಜಿನೀಯರು ಆಗಿಯೇ ರಿಟೈರ್ಡ್ ಆಗುವಂತಹ ಪರಿಸ್ಥಿತಿ ಇವತ್ತಿನದಿವಸ ಇದೆ.

ಒಂದೇ ಕಡೆ ಅನೇಕ ವರ್ಷಗಳ ಕಾಲ ಕೆಲಸ ಮಾಡತಕ್ಕಂಥವರಿಗೆ ಏನಾದರೂ ಉತ್ತೇಜನ ಕೊಡಬೇಕು. ಒಂದೇ ಕಡೆ ಕೊಳೆಹಾಕಿದರೆ ಯಾವ ಮನುಷ್ಯನೂ ಕೂಡಾ ಕೆಲಸ ಮಾಡುವುದಕ್ಕಾಗುವುದಿಲ್ಲ, ಉತ್ತೇಜನ ಕೊಡಬೇಕು. ಉತ್ತೇಜನ ಇಲ್ಲದೆ ಇರುವ ಕಾರಣದಿಂದ ಇವತ್ತು ಅನಕ ಕೆಲಸಕಾರ್ಯಗಳು ಕೂಡಾ ಆಗುತ್ತಿಲ್ಲವೆಂದು ಈ

ಸಂದರ್ಭದಲ್ಲಿ ಹೇಳುವುದಕ್ಕ ಇಚ್ಛಿಪಡುತ್ತೇನೆ. ಮತ್ತೆ ಇವತ್ತು ಕಾವೇರಿ ನದಿ ನೀರಿನ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅನೇಕ ಸಲ ಇಲ್ಲಿ ಇದು ಚರ್ಚೆಯಾಗಿದೆ. ಒಂದು ಸಂದರ್ಭದಲ್ಲಿ, ಈ ಸದನದಲ್ಲಿ ತೀರ್ಮಾನವಾಗಿದೆ. ಪ್ರತಿ ವರ್ಷವೂ ನೂರು ಕೋಟಿ ರೂಪಾಯಿ ಕಾವೇರಿ ನದಿ ಪಾತ್ರದಲ್ಲಿರತಕ್ಕಂಥ ಯೋಜನೆಗಳಿಗೆ ಮತ್ತು ಕೃಷ್ಣಾ ನದಿ ಪಾತ್ರದಲ್ಲಿರತಕ್ಕಂಥ ಯೋಜನೆಗಳಿಗೆ 200 ಕೋಟಿ ರೂಪಾಯಿ ಖರ್ಚು ಮಾಡಬೇಕೆನ್ನತಕ್ಕಂಥಾದ್ದು ತೀರ್ಮಾನವಾಗಿದೆ. ಆದರೆ ಯಾವ ವರ್ಷವೂ ಕೂಡಾ ಈ ರೀತಿ ಹಣ ಖರ್ಚಾಗಲಿಲ್ಲ. ಬಜೆಟ್‌ನಲ್ಲಿ ಇಟ್ಟದೆಯೆಂದು ಹೇಳಿ ಇಷ್ಟಿಷ್ಟು ದಪ್ಪ ಪುಸ್ತಕಗಳನ್ನು ಕೊಡುತ್ತಾರೆ. ನಾವು ಯಾವ ಯಾವ ಪುಟದಲ್ಲಿ ಏನೇನಿದೆ ಎಂದು ಹುದುಕಿ ಹುದುಕಿ ನೋಡಿದರೆ ಕೊನೆಗೆ ಏನೂ ಗೊತ್ತಾಗದೆ ಇಲ್ಲಿ ಪ್ರಶ್ನೆ ಕೇಳಬೇಕಾಗುತ್ತದೆ. ಯಾವ ಯೋಜನೆಗೆ ಎಷ್ಟು ಹಣ ಬಜೆಟ್‌ನಲ್ಲಿ ಇಡಲಾಗಿತ್ತು ಹಾಗೂ ಅದರಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿ. ಕರ್ನಾಟಕದಲ್ಲಿ ನೀರಾವರಿಯಲ್ಲಿ ಅತ್ಯಂತ ಹಿಂದುಳಿದಿರತಕ್ಕಂಥ ರಾಜ್ಯ. ಇದರೊಳಗೆ ಏನೂ ಸಂಶಯ ಇಲ್ಲ. ರಾಷ್ಟ್ರದ ಮಟ್ಟದಲ್ಲಿ, ರಾಷ್ಟ್ರೀಯ ಸರಾಸರಿ 31.6 ರಷ್ಟು ಜಮೀನಿಗೆ ನೀರಾವರಿಯಾಗಿದೆ. ಇದು ರಾಷ್ಟ್ರದ ಸರಾಸರಿ ಇದ್ದರೆ, ನಮ್ಮ ರಾಜ್ಯದ ಸರಾಸರಿ ಶೇಕಡ 17.25 ಮಾತ್ರ. ಅಂಥಾದ್ರಲ್ಲಿ ನೀರಾವರಿಗೆ ಪ್ರಾಶಸ್ತ್ಯ ಕೊಡಬೇಕು. ಕಾವೇರಿ ನದಿಗೆ ಯಾವ ವರ್ಷವೂ ಕೂಡಾ ಖರ್ಚಾಗಲ್ಲ. ಕಾವೇರಿ ನದಿಗೆ 1991-92ರಲ್ಲಿ 140.47 ಕೋಟಿ ರೂಪಾಯಿಗಳನ್ನು ಇಟ್ಟದ್ದೀರಿ. ನಿಜ. ಆದರೆ ಖರ್ಚಾಗಿರತಕ್ಕಂಥಾದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 40-50 ರಷ್ಟು ಸಹ ಖರ್ಚಾಗಿಲ್ಲ. ಏಕೆ? ಅದೇ ರೀತಿ ಕೃಷ್ಣಾ ನದಿ ಯೋಜನೆಗಳಿಗೆ ಬಜೆಟ್‌ನಲ್ಲಿ ಪ್ರತಿ ವರ್ಷ ಹಣ ಇಟ್ಟಿರುತ್ತಾರೆ. ಆ ಹಣ ಯಾವ ವರ್ಷವೂ ಪೂರ್ತಿಯಾಗಿ ಖರ್ಚಾಗಿಲ್ಲ. ಇದಕ್ಕೆ ಕಾರಣ ಏನು ಎಂದು ಹೇಳಬೇಕಾಗುತ್ತದೆ. ಹಣ ಇಲ್ಲದೆ ನೀವು ಖರ್ಚು ಮಾಡುತ್ತಿಲ್ಲವೋ? ಅಥವಾ ನೀರಾವರಿಗೆ ಖರ್ಚು ಮಾಡತಕ್ಕ ಹಣ ಪೋಲಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ನೀವು ಖರ್ಚು ಮಾಡುವುದಿಲ್ಲವೋ? ಅಥವಾ ಖರ್ಚು ಮಾಡತಕ್ಕಂಥ ಇಚ್ಛಾಶಕ್ತಿ ನಿಮಗೆ ಇಲ್ಲವೆಂದೇ? ಅಥವಾ ಸರ್ಕಾರದ ಮುಖಂಡತ್ವ ವಹಿಸಿರತಕ್ಕಂಥವರಿಗೆ ಈ ಎರಡೂ ನದಿಗಳಲ್ಲಿರತಕ್ಕಂಥ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಮನಸ್ಸು ಇಲ್ಲವೆಂದೋ? ಏನು ಇದಕ್ಕೇ ಕಾರಣ? ಏಕೆ ಬಜೆಟ್‌ನಲ್ಲಿ ಇಲ್ಲಿರತಕ್ಕ ಹಣ ಪೂರ್ತಿಯಾಗಿ ಖರ್ಚಾಗುತ್ತಿಲ್ಲವೆಂದು ಕೇಳುತ್ತೇನೆ. ಇದಕ್ಕೆ ಉತ್ತರ ಹೇಳಬೇಕಾಗುತ್ತದೆ. ನೀವು ಬೇರೆ ಬೇರೆ ವಿಚಾರಕ್ಕೆ ದಿಢೀರ್ ಅಂಥ ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ ರಾತ್ರಿಯಲ್ಲಿ ಸರ್ಕಾರದ ಆಜ್ಞೆಗಳು ಜಾರಿಯಾಗುತ್ತವೆ. ಸರ್ಕಾರದ ಆಜ್ಞೆಗಳನ್ನು ರಾತ್ರೋರಾತ್ರಿ ಹೊರಡಿಸುತ್ತೀರಿ. ನಿಮ್ಮ ಇಲಾಖೆಗಳಲ್ಲಿ ಒಂದನ್ನು ಮಾಡಬೇಕಾದರೆ ಒಂದು ತಿಂಗಳಲ್ಲಿ ಎರಡು ಆಜ್ಞೆಗಳನ್ನು ಮಾಡುತ್ತೀರಿ. ಆದರೆ, ನಿಗದಿಪಡಿಸಿರತಕ್ಕಂಥ ಹಣ, ಈ ಸದನ ಒಪ್ಪಿಗೆ ಕೊಟ್ಟಿರತಕ್ಕಂಥ ಹಣ, ಇದನ್ನು ಖರ್ಚು ಮಾಡತಕ್ಕಂಥ ಇಚ್ಛಾಶಕ್ತಿ ನಿಮಗಿಲ್ಲ. ಏಕೆ? ಏನು ಕಾರಣ ಅದು? ಮಲ್ಲಾರಿಗೌಡ ಪಾಟೀಲರೇ, ಇದನ್ನು ದಯವಿಟ್ಟು ತಿಳಿಸಬೇಕು ಏನು ಕಾರಣ ಅಂಥ? ಇದು ನಿಮಗೆ ಗೊತ್ತಿದ್ದರೂ ನೀವು ಅದನ್ನು ಹೇಳುವುದಿಲ್ಲ. ನೀವು ಹೇಳದಿದ್ದರೆ ನಾನಾದರೂ ಹೇಳಬೇಕಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಣಿಯವರೆ, ಅವರಿಗೆ ಗೊತ್ತಿದ್ದರೆ ಹೇಳುವುದು ಒಳ್ಳೆಯದು. ಸುಮ್ಮನೆ ನಾನು ಹೇಳಬೇಕೆಂದು ಏಕೆ ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷಣಿಯವರೆ, ಇವತ್ತಿನ ದಿವಸ ಏಕೆ ಹಣ ಖರ್ಚಾಗುತ್ತಿಲ್ಲವೆಂದರೆ, ಯಾರು ಮುಖ್ಯಮಂತ್ರಿಗಳ ಸ್ಥಾನದಲ್ಲಿ ಕುಳಿತಿದ್ರೋ ಅವರ ಜಾತಿ ಜನ ಅಲ್ಲಿ ಇಲ್ಲ, ಅದಕ್ಕೋಸ್ಕರ ಕಾವೇರಿ ನದಿ ತೀರದಲ್ಲಿ ಹಣ ಖರ್ಚು ಮಾಡಿದರೆ ಒಕ್ಕಲಿಗರಿಗೆ ಪ್ರಯೋಜನವಾಗುತ್ತದೆ. ಆ ಕಡೆ ಹೋದರೆ ಲಿಂಗಾಯಿತರಿಗೆ ಪ್ರಯೋಜನವಾಗುತ್ತದೆಂದು ಖರ್ಚಾಗಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ತರಹದ ಆರೋಪ ಮಾಡುವುದು ಸರಿಯಲ್ಲ, ಇಲ್ಲಿ, ವಿಷಯಕ್ಕೆ ಅನುಗುಣವಾಗಿ ಮಾತನಾಡುವುದು ಒಳ್ಳೆಯದು.

ಶ್ರೀ ಸಿ. ಬೈರೇಗೌಡ : ಹೌದು, ಅದೇ ಕಾರಣವೆಂದು ನಾನು ಹೇಳುತ್ತೇನೆ. ಬೇರೆ ಕಾರಣ ಏನು? ಹಾಗಾದರೆ ಹಣ ಏಕೆ ಖರ್ಚು ಮಾಡಿಲ್ಲ?

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದು ಜಾತಿವಾದ ಅಲ್ಲದೆ ಬೇರೆ ಏನು? ಇಲ್ಲಿ ಜಾತಿ ವಾದ ಎನ್ನತಕ್ಕದ್ದನ್ನು ಇಲ್ಲವೆಂದು ಅಂಕಿ ಅಂಶಗಳ ಸಹಿತ ಬೇಕಾದರೆ ಹೇಳುತ್ತೇನೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಣಿಯವರೇ, ಬೈರೇಗೌಡರು ಒಂದು ನಿಮಿಷ ಯೀಲ್ಡ್ ಆದರೆ ಹೇಳುತ್ತೇನೆ.....

ಶ್ರೀ ಎಸ್. ಹೆಚ್. ಕೌಜಲಗಿ : ಲಿಂಗಾಯಿತರಿಗೆ ಬೆನಿಫಿಟ್ಸ್ ಆಗುತ್ತದೆ ಎಂದು ಮಲಪ್ರಭಾ ಘಟಪ್ರಭ ಯೋಜನೆಗಳು ಆಗುವಲ್ಲದು. ಇಲ್ಲದಿದ್ದರೆ ಇಂದು ಆಗುತ್ತಾ ಇತ್ತು..

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಣಿಯವರೇ, ಇಲ್ಲಿಯವರೆಗೆ, ಇದ್ದಂತಹ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸಮಾಜದಿಂದ ಬಂದಿರತಕ್ಕವರು. ಅವರು ಇದ್ದಾಗ ಏನಾದರೂ ಲಿಂಗಾಯಿತರು ಯಾರು ಇದ್ದರು, ಚೀಫ್ ಇಂಜಿನಿಯರು ಯಾರಿದ್ದಾರು; ಹಾಗೂ ಹಣ ಖರ್ಚು ಮಾಡಿರುವುದನ್ನು ಉದಾಹರಣೆ ಸಹಿತ ಮಾನ್ಯ ಕೌಜಲಗಿಯವರು ಕೊಡುತ್ತಾರೋ? ಅಲ್ಲಿರತಕ್ಕ ಚೀಫ್ ಇಂಜಿನಿಯರ್ ಅವರು ಸಮಾಜವನ್ನು ನೋಡಿ ಕೆಲಸ ಮಾಡಿದ್ದಾರೋ? ಏಕೆ ಈ ತರಹ ಆರೋಪ ಮಾಡುವುದು. ಆರೋಪ ಮಾಡುವುದು ಇದ್ದರೆ ಏನಾದರೂ ಯೋಗ್ಯವಾದ ಆರೋಪ ಮಾಡಿ. ಅವರು ಏನೋ ಮುಖ್ಯಮಂತ್ರಿ ಇದ್ದಾರೆ. ಅವರು ಒಳ್ಳೆಯವರಲ್ಲ, ಅವರಿಗೆ ಜಮೀನು ಇಲ್ಲ, ಅವರು ಆ ಸಮಾಜದ ಜನ ಅಲ್ಲ ಇದಕ್ಕಾಗಿ ಖರ್ಚು ಮಾಡುತ್ತಿಲ್ಲ ಎನ್ನತಕ್ಕ ಆರೋಪ ಏನು ಇದೆ, ಅದನ್ನು ನಾನು ಅಲ್ಲಗಳೆಯುತ್ತಾ ಇದ್ದೇನೆ. ಆದ್ದರಿಂದ ಸರಿಯಾಗಿ ಹೇಳಬೇಕು. ಏಕೆಂದರೆ ಮಾನ್ಯ ಬೈರೇಗೌಡರು ಹಿರಿಯ ಸದಸ್ಯರು. ಅವರ ಬಗ್ಗೆ ನನಗೆ ಬಹಳ ಅಭಿಮಾನ ಇದೆ. ಈ ತರಹದ ಆರೋಪ ಮಾಡುವುದು ಸರಿಯಲ್ಲ, ಸರಿಯಾದ ಆರೋಪ ಇದ್ದರೆ ಮಾಡುವುದು ಒಳ್ಳೆಯದು.

ಶ್ರೀ ಸಿ.ಬೈರೇಗೌಡ : 1988-89ರಲ್ಲಿ, ಬಜೆಟ್‌ನಲ್ಲಿ ಇದ್ದುದು 97.37 ಕೋಟಿರೂಪಾಯಿಗಳು. ಖರ್ಚು ಆಗಿರತಕ್ಕದ್ದು 69.78 ಕೋಟಿ ರೂಪಾಯಿಗಳು ಮಾತ್ರ. 1989-90 ರಲ್ಲಿ ಬಜೆಟ್‌ನಲ್ಲಿ ಇದ್ದುದು 119.86 ಕೋಟಿ ಆದರೆ ಖರ್ಚು ಆಗಿರುವುದು

ಕೇವಲ 91.5 ಕೋಟಿ ರೂಪಾಯಿ ಮಾತ್ರ. ಅದೇ ರೀತಿಯಾಗಿ 1990-91 ರಲ್ಲಿ ಅಂದರೆ ಈ ಸಾರಿ 124.44 ಕೋಟಿ ರೂಪಾಯಿ ಇಟ್ಟಿದ್ದೀರಿ. ಖರ್ಚು ಆಗಿರತಕ್ಕದ್ದು ಕೇವಲ 100 ಕೋಟಿ ರೂಪಾಯಿಗಳು ಮಾತ್ರ. ಇದಕ್ಕೆ ಏನು ಹೇಳಬೇಕು? ಬಜೆಟ್‌ನಲ್ಲಿ ಇಟ್ಟಿರತಕ್ಕ ಹಣವನ್ನು ಏಕೆ ಖರ್ಚು ಮಾಡಿಲ್ಲ. ನಾನು ಹೇಳಿದ್ದೇ ಕಾರಣ ಅಲ್ಲದೆ ಬೇರೆ ಕಾರಣ ಇಲ್ಲ ಎನ್ನತಕ್ಕದ್ದನ್ನು ಇವತ್ತು ಅಂಕಿ ಅಂಶಗಳು ಸಾಬೀತುಪಡಿಸುತ್ತಿವೆ. ಇದನ್ನು ನಾನು ಹೇಳಬೇಕಾಗಿಲ್ಲ. ಅಂಕಿ ಅಂಶಗಳೇ ಇವತ್ತು ಸಾಬೀತು ಮಾಡುತ್ತವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಬೈರೇಗೌಡರು ಒಂದು ನಿಮಿಷ ಯೀಲ್ಡ್ ಆದರೆ ಹೇಳುತ್ತೇನೆ. ಮಾನ್ಯ ಬೈರೇಗೌಡರು ಜಾತಿ ವಾದ ಇರುವುದರಿಂದ ಪೂರ್ತಿ ಖರ್ಚಾಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಿದ್ದರೆ ಹಣ ಖರ್ಚು ಮಾಡಿದ್ದಾರಲ್ಲ, ಅಲ್ಲಿ ಜಾತಿವಾದ ಬರಲಿಲ್ಲವಾ? ಅಲ್ಲಿ ಜಾತಿವಾದ ಬರಬೇಕಾಗಿತ್ತಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೆ ಏಕೆ ಬರಲಿಲ್ಲ. ಪೂರ್ತಿ ಹಣ ನಿಲ್ಲಿಸಬೇಕಾಗಿತ್ತಲ್ಲ, ಸ್ವಲ್ಪ ಹಣ ಖರ್ಚು ಮಾಡದೇ ಉಳಿದಿರತಕ್ಕದ್ದಕ್ಕೆ ಬೇರೆ ಏನೋ ತೊಂದರೆ ಇರಬಹುದು. ಲ್ಯಾಂಡ್ ಅಕ್ವಿಸಿಷನ್ ತೊಂದರೆ ಇರಬಹುದು. ಆದ್ದರಿಂದ ಈ ತರಹ ಆರೋಪ ಮಾಡುವುದು ಸರಿಯಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ಯಾವಾಗಲೂ ಉತ್ತರ ಕರ್ನಾಟಕದ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ ಮಾಡುವಾಗ ಕೈ ಗಡಗಡನೆ ನಡುಗುತ್ತದೆ. ಹಣ ಬಿಡುಗಡೆ ಮಾಡಬೇಕಾದರೆ ಕೈ ಗಡಗಡ ನಡುಗುತ್ತದೆ. ಯಾವುದೇ ಒಂದು ಪ್ರಾಜೆಕ್ಟ್‌ಗೆ ಅಪ್ರೂವಲ್ ತೆಗೆದುಕೊಳ್ಳಬೇಕಾದರೂ ಸಹ ಮಂತ್ರಿಗಳ ಕೈ ಗಡಗಡ ನಡಗುತ್ತದೆ. ಹೀಗೆ ಯಾವುದೂ ಸರಿಯಾಗಿ ಆಗವಲ್ಲುದು. ಏಕೆ ಆಗುವುದಿಲ್ಲ ಎಂದರೆ ಉಪಯೋಗ ಬೀಳುವುದು ಉತ್ತರ ಕರ್ನಾಟಕದ್ದು, ಕೆಲಸ ಮಾಡಿಸಿಕೊಳ್ಳುವುದು ಓಲ್ಡ್ ಮೈಸೂರಿನದ್ದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಹಳೆಯ ಮೈಸೂರು. ಹೊಸ ಮೈಸೂರಿನವಾದ ಅಲ್ಲ. ನಾವು ನೂರಕ್ಕೆ ನೂರು ಕರ್ನಾಟಕ ಏಕೀಕರಣ ಎಂದು ಹೇಳಿದ್ದೇವೆ. ಇದರಲ್ಲಿ ಜಾತಿ ವಾದ ಇಲ್ಲ. ಇದು ಸಮಗ್ರವಾಗಿ ನಾಲ್ಕೂವರೆ ಕೋಟಿ ಜನರ ಪ್ರಶ್ನೆ. ಆದರೆ ಇವರು ಜಾತಿ ಪ್ರಶ್ನೆ ಮಾತನಾಡಿದರೆ ನಾವು ಕಿವಿ ಮುಚ್ಚಿಕೊಳ್ಳಬೇಕಾಗಿದೆ. ಜಾತಿ ಪ್ರಶ್ನೆ ಇಲ್ಲಿ ಬರುವುದು ಬೇಡ. ಇದು ಮಾರಕವಾದದ್ದು. ಅದನ್ನು ಹೇಳಬಾರದು.

ಶ್ರೀ ಎಸ್.ಹೆಚ್. ಕೌಜಲಗಿ : ಕರ್ನಾಟಕ ಏಕೀಕರಣ ಆದಮೇಲೆ ಇಲ್ಲಿಯವರೆಗೆ ನಾವು ಅನ್ಯಾಯ ಸಹಿಸಿದ್ದೇವೆ....

(ಗೊಂದಲ)

ಛೇರ್ಮನ್ : ಕೌಜಲಗಿಯವರೇ, ನಿಮಗೆ ಅವಕಾಶ ಕೊಟ್ಟಿಲ್ಲ. ದಯಮಾಡಿ ಕುಳಿತುಕೊಳ್ಳಿ. ಬೈರೇಗೌಡರೇ ನೀವು ಮುಗಿಸದಿದ್ದರೆ ನಿಮ್ಮ ಸಮಯವನ್ನು ಬೇರೆಯವರಿಗೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಇವತ್ತು ಏನು ಆಗಿದೆ ಎಂದು ಇನ್ನೂ ಮುಂದಕ್ಕೆ ಹೋಗಿ ಹೇಳಬೇಕಾಗಿದ್ದರೆ....

ಶ್ರೀ ಗೋಪಿನಾಥ ಆರ್. ಸಾಂಡ್ರ: ಶ್ರೀಮಾನ್ ಬೈರೇಗೌಡರು ಹಿರಿಯ ಸದಸ್ಯರು, ಅಂತಹವರು ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ: ನಾನು ಈ ಮಾತನ್ನು ಹೇಳದೇ ಹೋದರೆ ಲೋಪ ಆಗುತ್ತದೆ. ಆ ಕಾರಣಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಮಾನ್ಯ ಬೈರೇಗೌಡರಿಗೆ ಕೋಪ ಇರಬಹುದಾ? ಅವರಿಗೆ ಕೋಪ ಇದ್ದರೂ ಸಹ ಅವರು ಜಾತಿ ಆಧಾರದ ಮೇಲೆ ಕೆಲಸ ಆಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈ ರೀತಿ ಹೇಳುವುದು ಶುದ್ಧ ತಪ್ಪು. ಅದೂ ನಿಮ್ಮಂಥವರು ಹೇಳತಕ್ಕ ಮಾತಲ್ಲ. ದಯಮಾಡಿ ನೀವು ಆ ಶಬ್ದಗಳನ್ನು ಹಿಂದೆ ತೆಗೆದುಕೊಳ್ಳಿ. ತಮ್ಮ ಹತ್ತಿರ ಸ್ಟ್ಯಾಟಿಸ್ಟಿಕ್ಸ್ ಇದೆ, ಫಿಗರ್ಸ್ ಇದೆ, ಅದನ್ನು ಹೇಳಿ. ಅದರ ಬಗ್ಗೆ ವಾದ ಮಾಡಿ. ಜಾತಿ ಆಧಾರದ ಮೇಲೆ ಕೆಲಸ ನಡೆಯುತ್ತಿಲ್ಲ ಎಂದು ಹೇಳುವುದು ಶುದ್ಧ ತಪ್ಪು ಎಂದು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ: ನಾನು ಈ ಮಾತನ್ನು ಹೇಳದೇ ಇದ್ದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಬೈರೇಗೌಡರು ಈಗ ಬೇಡಿಕೆಗಳ ಚರ್ಚೆಯಲ್ಲಿ ಮಾತನಾಡುತ್ತಾ ಕಳೆದ ಹಲವಾರು ವರ್ಷಗಳಲ್ಲಿ ಕಾವೇರಿ ಯೋಜನೆಗೆ ಬಹಳ ಕಡಿಮೆ ಹಣ ಖರ್ಚು ಆಗಿದೆ, ಬಜೆಟ್‌ನಲ್ಲಿರತಕ್ಕ ಹಣ ಖರ್ಚು ಆಗಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಉತ್ತರ ಕರ್ನಾಟಕದಲ್ಲಿರತಕ್ಕ ಯೋಜನೆಗಳಿಗೂ ಸಹಿತ ಬಜೆಟ್‌ನಲ್ಲಿರತಕ್ಕ ಪೂರ್ತಿ ಹಣ ಖರ್ಚು ಆಗಿಲ್ಲ ಎಂದರು, ಇದರಿಂದ ಹಳೆ ಕರ್ನಾಟಕದಲ್ಲಿ ಖರ್ಚಾಗದೇ ಹೋದರೆ ಒಕ್ಕಲಿಗರಿಗೆ ಅನ್ಯಾಯ ಆಗುತ್ತದೆ; ಹೊಸ ಕರ್ನಾಟಕದಲ್ಲಿ ಖರ್ಚು ಆಗದೇ ಹೋದರೆ ಲಿಂಗಾಯಿತರಿಗೆ ಅನ್ಯಾಯ ಆಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ. ಕರ್ನಾಟಕ ರಾಜ್ಯದ ಅತ್ಯಂತ ಉನ್ನತವಾದಂಥ ಈ ಸಭೆಯಲ್ಲಿ ನಾವೆಲ್ಲಾ ನಮಗಿಂತ ಹೆಚ್ಚಾಗಿ ರಾಜ್ಯಕ್ಕೋಸ್ಕರವಾಗಿ ದುಡಿದಿರತಕ್ಕವರು ಇದ್ದೀರಿ. ಕನ್ನಡ ನಾಡು ವಿಶಾಲ ಕರ್ನಾಟಕ ಆಗಬೇಕು ಎಂದು ಹೇಳಿ ಅದಕ್ಕಾಗಿ ದುಡಿದಿರತಕ್ಕವರು ಇದ್ದೀರಿ.

ಆದ್ದರಿಂದ ನಮ್ಮ ಕಣ್ಣಮುಂದೆ ಇರತಕ್ಕಂಥ ಪ್ರಶ್ನೆ ಕೃಷ್ಣ ಯೋಜನೆಗೆ ಹೆಚ್ಚಿಗೆ ಹಣವನ್ನು ಹೇಗೆ ತರುವುದು, ಕಾವೇರಿ ನದಿ ನೀರಿನ ಯೋಜನೆಗೆ ಯಾವ ತರಹದಲ್ಲಿ ಹಣ ತರಬೇಕೆಂಬುದನ್ನು ಹೇಳಬೇಕು, ಈಗ ಹೈದ್ರಾಬಾದ್ ಕರ್ನಾಟಕದವರು ನಾವು ಹಿಂದುಳಿದಿದ್ದೇವೆ ನಮ್ಮ ಅಭಿವೃದ್ಧಿಗೆ ಹೆಚ್ಚಿಗೆ ಹಣ ಕೊಡಿ ಎಂದು ಕೇಳುತ್ತಿದ್ದಾರೆ. ಕೊಡೋಣ. ಗಡಿಪ್ರದೇಶದಲ್ಲಿರತಕ್ಕಂಥ ಬೆಳಗಾಂ ಜಿಲ್ಲೆಯವರು ಅಭಿವೃದ್ಧಿಗೋಸ್ಕರ ಹೆಚ್ಚಿಗೆ ಹಣ ಕೊಡಿ ಎಂದು ಕೇಳುತ್ತಾರೆ. ಕೊಡೋಣ, ಮಾನ್ಯ ಸಿ. ಬೈರೇಗೌಡರು ಈ ಮನೆಯ ಹಿರಿಯ ಸದಸ್ಯರಿದ್ದಾರೆ. ಮೂರು ನಾಲ್ಕು ಬಾರಿ ಸದಸ್ಯರಾಗಿ ಈ ಮನೆಗೆ ಗೆದ್ದು ಬಂದಿದ್ದಾರೆ. ನಾವೇ ಸ್ವತಃ ಮಂತ್ರಿಗಳಾಗಿದ್ದಾಗ, ನಾವೇ ಸರಕಾರವನ್ನು ನಡೆಸುತ್ತಿದ್ದಾಗ ಎಷ್ಟೊಂದು ಜವಾಬ್ದಾರಿಯಿಂದ ನಡೆದುಕೊಳ್ಳುತಿದ್ದೆವು ಎಂಬುದು ನಮಗೆ ಗೊತ್ತಿದೆ. After all it is only an estimate we make.

ಬಜೆಟ್‌ನಲ್ಲಿರತಕ್ಕಂಥ ಹಣವೆಲ್ಲಾ ಸರಕಾರದ ಬೊಕ್ಕಸಕ್ಕೆ ಬಂದಿದ್ದರೆ ಈ ಒಂದು ವಿಷಬೀಜ ಏನಿದೆ ಅದು ಸರಿಯಿಲ್ಲ. ಹಾಗಾದರೆ ನೀರಾವರಿ ಕೇವಲ ಒಕ್ಕಲಿಗರಿಗೆ ಮಾತ್ರ ಉಪಯೋಗ ಆಗುವುದೇ? ಉತ್ತರ ಕರ್ನಾಟಕದಲ್ಲಿರುವ ನೀರಾವರಿ ಯೋಜನೆಗಳು ಕೇವಲ ಲಿಂಗಾಯತ ಸಮಾಜಸ್ಥರಿಗೆ ಮಾತ್ರ ಉಪಯೋಗವಾಗುತ್ತಿದೆಯೇ? ಅಲ್ಲಿ ಬೇರೆ ಯಾರೂ ಜಮೀನು ಸಾಗುವಳಿ ಮಾಡುವುದಿಲ್ಲವೆ? ಎಲ್ಲಾ ಜಾತಿಗಳಲ್ಲಿಯೂ

ಇವೊತ್ತು ರೈತರು ಇದ್ದಾರೆ. ನೀರಾವರಿ ಯೋಜನೆಗಳು ಆಗುವುದರಿಂದ ಬರೇ ಜಮೀನು ಇರುವ ವರ್ಗಗಳಿಗೆ ಮಾತ್ರ ಉಪಯೋಗವಾಗುವುದಿಲ್ಲ, ಅದರೊಂದಿಗೆ ಎಲ್ಲಾ ವರ್ಗದವರಿಗೂ ಉಪಯೋಗವಾಗುತ್ತದೆ. ಆದ್ದರಿಂದ ತಾವುಗಳು ಈ ಸದನವನ್ನು ತಮ್ಮ ನೋವನ್ನು ತೋಡಿಕೊಳ್ಳುವುದಕ್ಕೆ ಬಳಸುವಾಗ ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ, ತಾವುಗಳು ಬೇಕಾದರೆ ಅದಕ್ಕಾಗಿ ಹೋರಾಟ ಮಾಡಿ; ನಾವೆಲ್ಲರೂ ಅದಕ್ಕೆ ನಾವು ನಿಮ್ಮ ಜೊತೆಯಲ್ಲಿದ್ದೇವೆ. ಯಾವರೀತಿಯಾಗಿ ಇದಕ್ಕೆ ಬೇಕಾಗುವ ಹಣವನ್ನು ಸಂಗ್ರಹ ಮಾಡಬೇಕು ಎಂಬುದು ಮುಖ್ಯವಾದುದು. ಅದನ್ನು ಎಲ್ಲಿಂದ ತರಬೇಕು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಆದ್ದರಿಂದ ದಯವಿಟ್ಟು ಈ ಸಂಕುಚಿತ ಮನೋಭಾವನೆಯನ್ನು ಬಿಟ್ಟು ನಾವೆಲ್ಲರೂ ರಾಜ್ಯದ ಜನತೆಗೆ ಮತ್ತು ಘನಸದನಕ್ಕೆ ಇನ್ನೂ ಹೆಚ್ಚಿನ ನಾಯಕತ್ವವನ್ನು ನಿಮ್ಮಿಂದ ನಾನು ಬಯಸುತ್ತೇನೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್. : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ವಿಚಾರಗಳನ್ನು ನಾನು ಮೊದಲೇ ಹೇಳಿದ್ದೇನೆ. ಹಿರಿಯ ಸದಸ್ಯರಾಗಿ ಈ ಸದನದಲ್ಲಿ ಈ ತರಹದ ಮಾತುಗಳು ಅವರಿಂದ ಬರುತ್ತವೆಂದು ನನಗನಿಸಿರಲಿಲ್ಲ. ನೀರಾವರಿ ಕ್ಷೇತ್ರದಲ್ಲಿ ನೀವು ಹಿಂದೆ ಬೀಳುತ್ತಾ ಇದ್ದೀರಿ ಎಂದು ನಮಗೆ ಹೇಳಬಹುದಾಗಿತ್ತು. ಇದಕ್ಕೋಸ್ಕರ ವಿಶೇಷವಾದಂಥ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ, ಹಣಕಾಸಿನ ವ್ಯವಸ್ಥೆಯನ್ನು ಮಾಡಿ,ಇತ್ಯಾದಿಯಾಗಿ ಕೇಳಿದ್ದರೆ ನಾನು ನಿಶ್ಚಿತವಾಗಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆಲಸ ಮಾಡಬಹುದಾಗಿತ್ತು. ಈಗ ನಾನೇನಾದರೂ ಮಾಡಲು ಹೊರಟರೆ ಜನರು ಏನು ಹೇಳುತ್ತಾರೆ? ಇವರು ಉನ್ನತಮಟ್ಟದಲ್ಲಿ, ಪಂಥದಲ್ಲಿ ಹುಟ್ಟಿದವರು, ಲಿಂಗಾಯಿತರಿಗಾಗಿ ಇವರು ಕೆಲಸ ಮಾಡುತ್ತಾ ಇದ್ದಾರೆ ಎಂದು ಹೇಳಬಹುದು. ಆಗ ನೀವು ಸುಮ್ಮನೆ ಇರುತ್ತೀರಾ?

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು ಹೇಳಿದ್ದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೂಡಾ ಕೊಡುವಂಥ ಪ್ರಯತ್ನವನ್ನು ಮಾಡಿದರು. ಈಗಾಗಲೇ ರಾಜ್ಯವು ಬೇರೆ ಬೇರೆ ಕಾರಣಗಳಿಗೋಸ್ಕರ ಛಿದ್ರಛಿದ್ರವಾಗುವ ಒಂದು ಪರಿಸ್ಥಿತಿ ಇದೆ. ಜಾತಿಯ ಹೆಸರಿನಲ್ಲಿ ಮತ್ತೆ ಮತ್ತೆ ಇದೇ ಪ್ರಸ್ತಾಪವನ್ನು ಇಲ್ಲಿ ನಾವು ಮಾಡುವುದರಿಂದ ಸಾಮಾನ್ಯ ಜನರು ಎಲ್ಲರನ್ನೂ ಒಂದಾಗಿ ನೋಡುತ್ತಾ ಇದ್ದಾರೆ, ಹಣಕಾಸು ಇಲ್ಲದಿರುವಾಗ ನಾವೆಲ್ಲರೂ ಒಟ್ಟಾಗಿ ಸೇರಿ ಹೋರಾಟ ಮಾಡಿ, ಅದು ಕೃಷ್ಣಬೇಸಿಸ್ ಇರಬಹುದು. ಕಾವೇರಿ ಬೇಸಿನ್ ಇರಬಹುದು. ಅದಕ್ಕೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಆದಷ್ಟು ಬೇಗ ನೀರಾವರಿ ಯೋಜನೆಗಳು ಮುಗಿಸುವುದಕ್ಕೆ ಹೆಚ್ಚಿನ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಒಂದು ಒತ್ತಾಯವನ್ನು ತರುವಂಥ ಪ್ರಯತ್ನ ಈಗ ಆಗಬೇಕಾಗಿತ್ತು. ಆದರೆ ಬೈರೇಗೌಡರು ಯಾವುದೋ ಆವೇಶದಲ್ಲಿ ಈ ಮಾತನ್ನು ಬಹುಶಃ ಹೇಳಿರಬಹುದು.

ಶ್ರೀ ಸಿ. ಬೈರೇಗೌಡ ; ಆ ಮಾತನ್ನು ಹೇಳದೇ ಇದ್ದರೇ ನಾನು ಲೋಪ ಮಾಡಿದ ಹಾಗೆ ಆಗುತ್ತದೆ ಎಂಬ ಅರ್ಥವನ್ನು ಇಟ್ಟುಕೊಂಡೇ ಪ್ರಜ್ಞಾಪೂರ್ಣವಾಗಿಯೇ ನಾನು ಮಾತನಾಡಿದ್ದೇನೆ.

ಈ ಸದನದಲ್ಲಿ 100 ಕೋಟಿ ರೂಪಾಯಿಗಳು ಕಾವೇರಿ ಯೋಜನೆಗಳಿಗೆ ಖರ್ಚಾಗಬೇಕು, ಕೃಷ್ಣಯೋಜನೆಗೆ 200 ಕೋಟಿ ರೂಪಾಯಿಗಳು ಖರ್ಚಾಗಬೇಕು ಎಂದು ತೀರ್ಮಾನವಾಗಿದೆ. ಆದರೆ ಏಕೆ ಖರ್ಚಾಗಲಿಲ್ಲ? ಅದಕ್ಕೆ ಏನು ಕಾರಣ? ಆದ್ದರಿಂದ ನಾನು ಹೇಳಬೇಕಾಗುತ್ತದೆ. ನಾನು ಈ ಭಾಗ, ಆ ಭಾಗ ಎಂದು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಹೇಳಿದ ಅರ್ಥದಲ್ಲಿ ನಾನು ಹೇಳಿಲ್ಲ. ಇದು ಒಟ್ಟಿನಲ್ಲಿ ರೈತರ ಜಮೀನಿಗೆ ಅವರು ಯಾರೇ ಆಗಿರಲಿ ರೈತರ ಜಮೀನಿಗೆ ನೀರು ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದೆ. ಇವೊತ್ತು ನಮ್ಮ ರಾಷ್ಟ್ರೀಯ ಸರಾಸರಿ ಎಷ್ಟಿದೆ, ರಾಷ್ಟ್ರೀಯ ಸರಾಸರಿಗಿಂತ ಕರ್ನಾಟಕದಲ್ಲಿ ಕಡಿಮೆ ನೀರಾವರಿ ಆಗಿದೆಯೆಂದು ಅಂಕಿಅಂಶಗಳ ಮೂಲಕವೇ ಸಾಬೀತು ಆಗುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಗಳಾಗಿದ್ದಷ್ಟು ಕಾಲ ಬೇರೆ ಯಾರೂ ಆಗಿರಲಿಲ್ಲ. ಚೆನ್ನಬಸಪ್ಪನವರು ಹಿಂದೆ ಕಾಮಗಾರಿ ಇಲಾಖೆ ಮಂತ್ರಿಯಾಗಿದ್ದರು, ಅದು ಆದ ಮೇಲೆ ಕರ್ನಾಟಕದ ಇತಿಹಾಸದಲ್ಲಿ ಅಷ್ಟು ದೀರ್ಘಕಾಲ ಅತ್ಯಂತ ದೀರ್ಘಾವಧಿಕಾಲದಲ್ಲಿ ದೊಡ್ಡ ನೀರಾವರಿ ಮಂತ್ರಿಗಳಾಗಿದ್ದವರು ಶ್ರೀಮಾನ್ ದೇವೇಗೌಡರು. ಆದ್ದರಿಂದ ನಿಮ್ಮಿಂದ ಈ ಮಾತನ್ನು ನಿರೀಕ್ಷೆ ಮಾಡಿರಲಿಲ್ಲ. ಇದು ದುಃಖದ ಸಂಗತಿ, ಇದನ್ನು ತಾವು ಹೇಳಬಾರದಿತ್ತು. ಆದರೂ ತಾವು ಹೇಳಿದ್ದೀರಿ. ಶ್ರೀಮಾನ್ ದೇವೇಗೌಡರು, ಕಾವೇರಿ ಆಗಬಹುದು, ಕೃಷ್ಣ ಆಗಬಹುದು, ಒಂದು ವರ್ಷವಾದರೂ ಆಯವ್ಯಯದಲ್ಲಿ ಇಟ್ಟ ಹಣವನ್ನು ಅವರು ಸಂಪೂರ್ಣವಾಗಿ ಖರ್ಚು ಮಾಡಿದ್ದರೆ? ಇದು ಒಂದೇ ಒಂದಕ್ಕೆ ತಾವುಗಳು ಉತ್ತರ ಹೇಳಿಬಿಡಿ.

ಜೊತೆಗೆ ಕೃಷ್ಣಾಮೇಲ್ದಂಡೆ ಯೋಜನೆ ಹಣವನ್ನು ಈಕಡೆ ತಂದಿದ್ದರು ಎಂದು ನಿಮಗೆ ಹೇಳಿದ್ದರೆ ನಿಮಗೇನನಿಸುತ್ತಿತ್ತು. ಆದ್ದರಿಂದ ಆ ರೀತಿ ಹೇಳೋಕೆ ಹೋಗಬಾರದು ಪ್ರಾಮಾಣಿಕವಾಗಿ ಮಾಡೋ ಕೆಲಸವನ್ನು ಪ್ರತಿ ಹಂತದಲ್ಲಿ ಮಾಡಲಿಲ್ಲ; ಅದಕ್ಕೆ ಅನೇಕ ಲೋಪದೋಷಗಳಿರಬಹುದು ಅನೇಕ ಕಾರಣಗಳಿರಬಹುದು, ಅಷ್ಟು ಹಣವನ್ನು ಖರ್ಚು ಮಾಡದಿರುವುದು? ಕೇವಲ ಉದ್ದೇಶಪೂರ್ವಕವಾಗಿ ಹಾಗೆ ಮಾಡಿದ್ದಾರೆಂದು ಅಲ್ಲ, ನಾನು ಈಗಲೂ ಹೇಳ್ತೇನೆ, ಕೃಷ್ಣಾಮೇಲ್ದಂಡೆಯಲ್ಲಿ ಯಾಕೆ ಆಗಿದೆ, ಎಂದು ಚರ್ಚೆಗೆ ಬಂದರೆ. ಏಕೆಂದರೆ ಆ ಪ್ರದೇಶದಲ್ಲಿ ಇಂಜಿನಿಯರ್‌ಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದಾರೆ, ಹಳೇ ಮೈಸೂರು ಕಡೆಯ ಇಂಜಿನಿಯರುಗಳು ಒಬ್ಬರೂ ಅಲ್ಲಿಗೆ ಹೋಗೋದಿಲ್ಲ. ನಮ್ಮಂಥ ಶಾಸಕರು ಅದಕ್ಕೆ ಕಾರಣರಾಗಿದ್ದೀವಿ. ಅಲ್ಲಿ ವರ್ಗ ಮಾಡಿದರೆ ಹೋಗುವುದಿಲ್ಲ. ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ನಾವೇ ಹೋಗುವುದು. ಅದಕ್ಕೆ ಇಲ್ಲದ್ದು ಜಾತಿ ಹಚ್ಚೋದು. ಆದ್ದರಿಂದ ಅದಕ್ಕೆ ಯಾರ ಉದ್ದೇಶವಲ್ಲ ಅನೇಕ ಕಾರಣದಿಂದ ನಡೆದುಬಂದಿದೆ ದಯವಿಟ್ಟು, ನಿಮ್ಮ ಬಾಯಿಂದ ಒಕ್ಕಲಿಗರಿಗೆ ಅನ್ಯಾಯ ಲಿಂಗಾಯಿತರಿಗೆ ಅನ್ಯಾಯ ಎಂದು ಹೇಳಬೇಡಿ ನಾವೂ ನೀವೂ ಎಲ್ಲ ಸೇರಿ ಎರಡು ಪ್ರದೇಶಗಳಿಗೆ ಇನ್ನಷ್ಟು ಜಾಸ್ತಿ ಕೊಡಬೇಕು ಯಾವ ಮೂಲದಿಂದ ಕೊಡಬೇಕು ಎಂಬ ಬಗ್ಗೆ ಸಲಹೆ ಕೊಡಿ. ಆದರೆ ಈ ಭಾಷೆಯನ್ನು ದಯಮಾಡಿ ಬಳಸಬೇಡಿ. ಅಧ್ಯಕ್ಷರೇ, ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಬೈರೇಗೌಡರನ್ನು ವಿನಂತಿಮಾಡಿಕೊಳ್ಳುತ್ತೇನೆ. ದಯವಿಟ್ಟು ಅವರು ಆ ಮಾತನ್ನು ವಾಪಸ್ ಪಡೆಯಬೇಕು.

ಶ್ರೀ ಸಿ. ಬೈರೇಗೌಡ : ಆ ಪ್ರಶ್ನೆ ಬರುವುದಿಲ್ಲ. ನಾನು ವಿಷಾದಪಡಬೇಕಾಗಿರುವುದು ಏನೂ ಇಲ್ಲ. ಪ್ರಜ್ಞಾಪೂರ್ವಕವಾಗೇ ವಿಷಯ ತಿಳಿದುಕೊಂಡು ಮಾತನಾಡಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಮಾತು ಹೇಳಿದರು. ಇಂಜಿನಿಯರುಗಳೆಲ್ಲ

ಈ ಕಡೆಯವರು ಅಲ್ಲಿಗೆ ಯಾರೂ ಹೋಗ್ತಾ ಇಲ್ಲ ಎಂದು. ಸ್ವಾಮಿ, ಹಾಗಿದ್ದರೆ ಇಲ್ಲಾದರೂ ಹಣ ಖರ್ಚಾಗಿರಬೇಕಲ್ಲ? ಕಾವೇರಿ ನದಿಪತ್ರದಲ್ಲಾದರೂ ಹಣ ಖರ್ಚಾಗಿರಬೇಕಲ್ಲ, ಬಜೆಟ್‌ನಲ್ಲಿರುವ ಅಂಕಿ ಅಂಶಗಳನ್ನು ಹೇಳಿ; ಯಾವ್ಯಾವ ವರ್ಷ ಎಷ್ಟೆಷ್ಟು...

ಶ್ರೀ ಕೆ. ಹೆಚ್ ರಂಗನಾಥ್ : ಕಬಿನಿಯಲ್ಲಾಗಿಲ್ಲ, ಹಾರಂಗಿಯಲ್ಲಾಗಿಲ್ಲ, ಕಾವೇರಿಮೇಂಟೆನೆನ್ಸಾಗಿಲ್ಲ, ತೆಗೆದುನೋಡಿ, ಇವತ್ತು ಕೊಟ್ಟಿರುವ ಬಜೆಟ್‌ಪುಸ್ತಕದಲ್ಲಿ. ಓದಿದರೆ ಗೊತ್ತಾಗುತ್ತದೆ. ಹೆಚ್ಚು ಹುಡುಕಬೇಕಾಗಿಲ್ಲ. ಇವತ್ತು ಒಂದು ಆರ್ಡಿನೆನ್ಸ್ ಮಾಡಿಬಿಟ್ಟರೆ, ಒಂದು ಆಕ್ಟ್ ಮಾಡಿಬಿಟ್ಟರೆ, ನಮ್ಮ ರಕ್ಷಣೆಯಾಗುತ್ತದೆಯೋ? ಕಬಿನಿಯಲ್ಲಿ ಪ್ರಾರಂಭವಾಗಿದ್ದು ಯಾವಾಗ? ಅದರ ಎಸ್ಕಲೇಶನ್ ರೇಟ್ ಎಲ್ಲಿವರೆಗೂ ಹೋಯ್ತು? ಇಂದು ನೀರು ತುಂಬಿಬಿಟ್ಟಿದ್ದೇವೆ, ಅದನ್ನು ಬಳಸಿಕೊಳ್ಳುವುದು ಬೇಡವೋ. ಕಾಲುವೇ ತೆಗೆದಿದ್ದಾರೆಯೋ ಸ್ಟೇಟ್‌ಮೆಂಟ್ ಇಂದು ಕೊಟ್ಟು ದೊಡ್ಡವರೆನಿಸಿಕೊಳ್ಳುವುದು ಬಹಳ ಸುಲಭ. ಆದರೆ ಮಾಡಿರುವದೇನು? ತಿಮ್ಮಪ್ಪನವರು ಹೇಳಿದಂತೆ 83ರಿಂದ ಅಧಿಕಾರ ಬರೋವರೆಗೂ ಅವರಿದ್ದರು, ಪಿಡಬ್ಲ್ಯೂಡಿಯಲ್ಲೂ ಇದ್ದರು, ನೀರಾವರಿ ಬೇಡ, ರಸ್ತೆಗಳು ಚೆನ್ನಾಗಿದ್ದಾವ್ವೋ? ಯಾವ ಊರಿನಲ್ಲಿ ಚೆನ್ನಾಗಿವೆ? 20 ಜಿಲ್ಲೆಗಳಲ್ಲಿ ? ಡಿಸ್ಟ್ರಿಕ್ಟ್ ರಸ್ತೆ ಚೆನ್ನಾಗಿದ್ದಾವ್ವೋ?ಇಂಟರ್ ಡಿಸ್ಟ್ರಿಕ್ಟ್ ರಸ್ತೆ ಚೆನ್ನಾಗಿದ್ದಾವ್ವೋ? ಇಂಟರ್ ತಾಲ್ಲೂಕು, ಹೋಬಳಿ ರೋಡ್? ಯಾವುದು ಚೆನ್ನಾಗಿದೆ? ಎಲ್ಲಿ ಚೆನ್ನಾಗಿದೆ? ಆದ್ದರಿಂದ ಯಾರೋ ಏನೋ ಮಾತನಾಡುವುದಲ್ಲ. ಮೊದಲು ರಾಜ್ಯದ ಎಲ್ಲ ಜಿಲ್ಲೆಯ ಇಂಟರೆಸ್ಟ್ ಇಟ್ಟುಕೊಂಡು ಮಾತನಾಡಿದರೆ ಮತ್ತು ಕೆಲಸ ಮಾಡಿದರೆ ಚೆನ್ನಾಗಿರುತ್ತದೆ. ನಾವು ಮಾಡಿರೋ ಕೆಲಸಕ್ಕೆ ಇವನು ಒಕ್ಕಲಿಗ, ಇವನು ಲಿಂಗಾಯಿತ ಇವನು ಹರಿಜನ ಎಂದು ಹೇಳಿದರೆ ಏನು ಬಂತು? ಸ್ವಾಮಿ, ಮೈನರ್ ಇರಿಗೇಶನ್‌ನಲ್ಲಿ ನನ್ನ ತಾಲ್ಲೂಕಿನಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇದ್ದಾನೆ. ಅವನನ್ನು ನಾನು ಭೇಟಿ ಮಾಡಬೇಕಾದರೆ ಚಿತ್ರದುರ್ಗಕ್ಕೆ ಬರಬೇಕು. ಎಕ್ಸಿಕ್ಯೂಟಿವ್ ಇಂಜಿನಿಯರನ್ನು ಭೇಟಿ ಮಾಡಿಬೇಕಾದರೆ ಎರಡು ಜಿಲ್ಲೆಗಳಿಗೆ ಹೋಗಬೇಕು. ಅಂದರೆ ಶಿವಮೊಗ್ಗಕ್ಕೆ ಚಿತ್ರದುರ್ಗಕ್ಕೆ ಹೋಗಬೇಕು. ಇದು ಏನು ಮಾಡಿರುವುದು? ಇಂದು ಯಾವ ಇಂಜಿನಿಯರನ್ನು ಕೇಳಿ, ಜಿಲ್ಲಾಪರಿಷತ್‌ಗೆ ಹೋಗ್ತೀನಿ ಅಂತಾನೆ. ಏತಕ್ಕೆ ಅಲ್ಲಿ ದುಡ್ಡು ಜಾಸ್ತಿ ತಿನ್ನೋಕೆ ಇದೆಯೆಂದು.

ಇದು ಯಾರು ಮಾಡಿದ್ದು? ಬಹಳ ಚೆನ್ನಾಗಿದೆಯೋ? ಸೆಕ್ರೆಟರೀಸ್ ಐಎಎಸ್ ಬೇಡ ಎಂದು, ತಂತ್ರಜ್ಞರನ್ನು ಹಾಕಿಕೊಂಡಿರಿ; ಅವರನ್ನು ಮಾಡಿದಮೇಲೆ ಅವರು ಸಲಹೆ ಕೊಟ್ಟಿದ್ದು ಏನು? ಇವತ್ತು ಯಾರಿಗಾದರೂ ತೊಂದರೆಯಾದರೆ ಅವರು ಹಾಗೆ ಇವರು ಹೀಗೆ ಅಂತ ಹೇಳೋದು, ಅದರ ಬದಲು ತೆಗೆದುನೋಡಿ ಎಲ್ಲಿ ಹಣ ಎಷ್ಟು ಖರ್ಚಾಗಿದೆ, ಇರಿಗೇಷನ್‌ನಲ್ಲಿ ಎಷ್ಟಾಗಿದೆ? ಪಿಡಬ್ಲ್ಯೂಡಿಯಲ್ಲಿ ಎಷ್ಟಾಗಿದೆ? ಮೇಜರ್ ಮತ್ತು ಮೀಡಿಯಂ ನಲ್ಲಿ ಎಷ್ಟಾಗಿದೆ? ಮೀಡಿಯಂ ಇರಿಗೇಶನ್ ಯಾವಾಗ ತೆಗೆದುಕೊಂಡಿದ್ದು, ಮೂರನೇ ಪಂಚವಾರ್ಷಿಕ ಯೋಜನೆಗೆ ತೆಗೆದುಕೊಂಡಿದ್ದು Still they are spill over. ಆದ್ದರಿಂದ, ದಯಮಾಡಿ ಈ ಸಭೆಯಲ್ಲಿ ಈ ರೀತಿ ಮಾತನಾಡುವುದು ಸರಿಯಲ್ಲ. ಈ ಘಳಿಗೆಯಿಂದ ಹಿಡಿದು ಇನ್ನು ಮೂರು ವರ್ಷದೊಳಗೆ ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಎಲ್ಲಾ ಯೋಜನೆಗಳನ್ನು ಮುಗಿಸಿದರೆ ಮಾತ್ರ ಈ ಆರ್ಡಿನೆನ್ಸ್ ಹೊರಡಿಸಿದ್ದಕ್ಕೆ ಸಾರ್ಥಕವಾಗುತ್ತದೆ.

ಇಲ್ಲದೇ ಹೋದರೆ ಅದು ಏನೂ ಸಾರ್ಥಕವಾಗುವುದಿಲ್ಲ. ಆ ಆಕ್ಟ್‌ನ್ನು ಹಣೆಗೆ ಹಚ್ಚಿಕೊಳ್ಳಬೇಕಾಗುತ್ತದೆ ಅಷ್ಟೆ. ಆದುದರಿಂದ ಈ ದೃಷ್ಟಿಯಲ್ಲಿ ವಿಚಾರವನ್ನು ಮಾಡೋಣ.

ಇವತ್ತು ನಾವು- ನೀವು ಎನ್ನುವುದನ್ನು ಮರೆತುಬಿಟ್ಟು We shall think about that. ಸುಮ್ಮನೆ ಮಾತನಾಡಿದರೆ ಏನು ಪ್ರಯೋಜನ ಬಂತು.

MR. SPEAKER : I think, Mr. Ranganath has made a very effective point; a telling point. Why do you dilute that?

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ : ಇವತ್ತಿಗೂ ನಮ್ಮಲ್ಲಿ ಒಂದು ವರ್ಕ್ಸ್ ಕೂಡಾ ಸ್ಟಾರ್ಟ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಏತಕ್ಕೆ ಅದನ್ನು ಡೈಲೂಟ್ ಮಾಡುತ್ತೀರಿ?

ಶ್ರೀ ಸಿ. ಬೈರೇಗೌಡ: ಮಾನ್ಯ ರಂಗನಾಥ್‌ನವರು ಏನು ಹೇಳಿದರೋ ಅದು ನಡೆಯಲಿಲ್ಲ ಎನ್ನತಕ್ಕಂಥದ್ದೇ ನನ್ನ ವ್ಯಥೆ. ಅದಕ್ಕೆ ಕಾರಣವೇನು ಎನ್ನತಕ್ಕಂಥದ್ದನ್ನುನಾನು ಹೇಳಿದ್ದೇನೆ ಅಷ್ಟೆ. ಅದು ನಡೆಯಲಿಲ್ಲ, ಆಗಲಿಲ್ಲವೆಂದು ಇವತ್ತಿನ ದಿವಸ ಎಲ್ಲ ಅಂಕಿ ಅಂಶಗಳನ್ನು ತೋರಿಸುತ್ತಿದ್ದೇನೆವೆಂದು ಎಲ್ಲೆಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಇಡಲಾಗಿತ್ತು. ಅಷ್ಟನ್ನು ಖರ್ಚು ಮಾಡಿದ್ದರೆ ಯಾವತ್ತೋ ಮುಗಿಯಬೇಕಾಗಿತ್ತು. ಅದು ಮುಗಿಯದೇ ಇರುವುದಕ್ಕೆ ಕಾರಣವೇನು? ಇದಕ್ಕೆ ಅವರ ಚಿಂತನೆ ಏನು ಇದೆ, ಅವರ ವ್ಯಥೆ ಏನು ಇದೆ, ಅದೇ ನನಗೂ ಕೂಡಾ ಇರತಕ್ಕಂಥದ್ದು. ಅದು ಆಗಲಿಲ್ಲ ಎನ್ನುವ ಕಾರಣಕ್ಕೋಸ್ಕರ ಈ ಮಾತನ್ನು ನಾನು ಬಳಸಿದ್ದೇನೆಯೇ ವಿನಹಾ ಮತ್ತೆ ಬೇರೆ ಕಾರಣದಿಂದ ಅಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತಿನ ದಿವಸ..

ಅಧ್ಯಕ್ಷರು : ದಯವಿಟ್ಟು ತಾವು ಮುಗಿಸಬೇಕು. ನಿಮ್ಮ ಟೈಮ್ ಮುಗಿಯಿತು.

ಶ್ರೀ ಸಿ. ಬೈರೇಗೌಡ : ಇವತ್ತಿನ ದಿವಸ ನೀರಾವರಿಗೆ...

ಶ್ರೀ ಕೆ.ಹೆಚ್. ರಂಗನಾಥ್ : ಮೊನ್ನೆ ತಾನೆ ಕೆ.ಆರ್. ಪೇಟೆಯ ಶಾಸಕರಾದ ಮಾನ್ಯ ಪುಟ್ಟಸ್ವಾಮಿಗೌಡರು ಮಾತನಾಡುತ್ತಾ 50 ಸಾವಿರ ರೂಪಾಯಿಗಳಿಗೆ ಬದಲು 50 ಲಕ್ಷ ರೂಪಾಯಿಗಳನ್ನು ಕೊಟ್ಟರು ಎಂದು ಹೇಳಿದರು. ಇದು ಆಗಬಹುದೇ?

ಶ್ರೀ ಹೆಚ್. ಏಕಾಂತಯ್ಯ : M.I.P.C. ಬೋರ್ಡ್ ಎಂದು ಇದೆ. ಕೋಟ್ಯಾಂತರ ರೂಪಾಯಿಗಳನ್ನು, ಹೆಚ್ಚೆಚ್ಚು ಹಣವನ್ನು ಕೊಟ್ಟಿದ್ದಂಥ ಪ್ರಕರಣಗಳು ಬೇಕಾದಷ್ಟು ಈ ಇಲಾಖೆಯಲ್ಲಿ ಇದೆ. ಇದರ ಬಗ್ಗೆ ಯಾರಿಗೂ ಕೂಡಾ ಚಿಂತನೆ ಇಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ರಂಗನಾಥ್‌ರವರು ಹೇಳಿದ್ದಕ್ಕೆ ನನ್ನದೂ ಒಂದು ಮಾತಿದೆ. ಕೇವಲ ಒಂದೂವರೆ ಲಕ್ಷ ರೂಪಾಯಿ ಅಂದಾಜು ಒಂದು ಕೆರೆಗೆ ಆಗಿತ್ತು. ಅದು ಮುಗಿಯುವ ಒಳಗೆ 14 ಲಕ್ಷ ರೂಪಾಯಿಗಳಾಯಿತು. ಇವತ್ತು ಅದಕ್ಕೆ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ಕೆಲಸ ನಡೆಯುತ್ತಿದೆ. ಸುಮಾರು 18 ಲಕ್ಷ ರೂಪಾಯಿಗಳಾಯಿತು.ಆವತ್ತು ಒಂದೂವರೆ ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಇದ್ದದ್ದು ಇವತ್ತಿನ ದಿವಸ 32 ಲಕ್ಷ-33 ಲಕ್ಷ ರೂಪಾಯಿಗಳಾಗಿವೆ.

ಶ್ರೀ ಕೆ. ಹೆಚ್. ರಂಗನಾಥ್ : ಎಸ್ಟಿಮೇಟ್ ಮಾಡಿ ಎಂದು ಹೇಳಿದರೆ ವಾಸ್ತವವಾದ ಎಸ್ಟಿಮೇಟನ್ನು ಮಾಡುವುದಿಲ್ಲ. ಇನ್‌ಫ್ಲೇಟೆಡ್ ಎಸ್ಟಿಮೇಟನ್ನು ಮಾಡುತ್ತಾರೆ. ನಿನ್ನೆ ವಿರೋಧಪಕ್ಷದ ನಾಯಕರ ಬಾಯಲ್ಲಿ ಒಂದು ಮಾತು ಬಂದಿದೆ. ಅದನ್ನು

ನಾನು ಪತ್ರಿಕೆಯಲ್ಲಿ ಬೆಳಿಗ್ಗೆ ಓದುತ್ತಿದ್ದೆ. ಏನೆಂದರೆ, ನೇರವಾದೇ ಅಪಾಯಿಂಟ್‌ಮೆಂಟ್ ಬೇಡ, ಎಲ್ಲಾ ಪ್ರಮೋಷನ್ ಕೊಡಿ ಎಂದು. 62ನೇ ಇಸವಿಯಲ್ಲಿ ರೆಕ್ರೂಟ್‌ಮೆಂಟ್ ಆಗಿತ್ತು. ನೇರವಾಗಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಹುದ್ದೆಯ ಬಗ್ಗೆ ಇವತ್ತಿನವರೆಗೂ ನೇಮಕ ಆಗಿಲ್ಲ.ಒಂದಲ್ಲ ಒಂದು ಕಾರಣದಿಂದ The matter is being taken upto the High Court and it is being ŏcuttled.

ಬುದ್ಧಿವಂತರು ಬೇಡವೇ ನಿಮಗೆ. ನಿಮಗೆ ತಜ್ಞರು ಬೇಡವೇ? ಬರೀ ಆಡಳಿತದಲ್ಲಿ ಎಲ್ಲಿಯಾದರೂ ಒಂದು ಹಂತದಲ್ಲಿ ಒಳ್ಳೆಯವರನ್ನು ನಾವು ನೇಮಕ ಮಾಡುವುದು ಬೇಡವೇ? ಏತಕ್ಕೆ ಚಂದ್ರೇಗೌಡರು ಈ ರೀತಿ ಮಾತನಾಡಿದರೋ ಗೊತ್ತಿಲ್ಲ. ನಾನು ಬೆಳಿಗ್ಗೆ ಪತ್ರಿಕೆಯನ್ನು ಓದುತ್ತಿರುವಾಗ ಇದನ್ನು ನೋಡಿದೆ. ನೇರ ನೇಮಕಾತಿ ಬೇಡ ಎಂದು ಹೇಳಿದರೆ ಹೇಗೆ? ಲಂಚ ನಡೆದಿದೆ ಎಂದು ನೇರನೇಮಕಾತಿಯನ್ನು ಮಾಡಿಕೊಳ್ಳಬಾರದು,

ರೆಕ್ರೂಟ್‌ಮೆಂಟನ್ನೇ ಮಾಡಬಾರದು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೋಸ್ಟ್‌ಗಳನ್ನು ಭರ್ತಿಮಾಡಬಾರದೆಂದು ಹೇಳಿದರೆ ಸರಿಯಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಇದೆ. ಐದು ಸಾವಿರ ಜನ ಏನು ಅಸಿಸ್ಟೆಂಟ್ ಇಂಜಿನಿಯರ್ಸ್ ಇದ್ದಾರೆ, ಅವರಿಗೆ ಪ್ರಮೋಷನ್ ಇಲ್ಲದೇ 22 ವರ್ಷಗಳ ಕಾಲ ಇಲಾಖೆಯಲ್ಲಿ ದುಡಿದಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ರೆಕ್ರೂಟ್‌ಮೆಂಟ್ ರೂಲ್‌ನಲ್ಲಿ 1-3 ಪ್ರತಿ ವರ್ಷ ಕೂಡ ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಗಬೇಕು ಎಂದು ಹೇಳಿದ್ದಾರೆ. ಪ್ರತಿ ವರ್ಷ ಕ್ಲಾಸಿಫಿಕೇಷನ್ಸ್ ಮಾಡಿ ಅಪಾಯಿಂಟ್‌ಮೆಂಟ್‌ನ್ನು ಮಾಡಿ ವೇಕೆನ್ಸೀಸ್ ಎಷ್ಟು ಬರುತ್ತದೆ ಎಂದು ಹೇಳಿ ಆಯಾಯ ವರ್ಷ ನೇಮಕ ಮಾಡಿದ್ದರೆ ಈ ಪರಿಸ್ಥಿತಿಗೆ ನಾವು ಬರುತ್ತಿರಲಿಲ್ಲ. 61-62ರಲ್ಲಿ ನೇರ ನೇಮಕಾತಿ ಆಗಿತ್ತು ನಂತರ ಇಲ್ಲಿಯವರೆಗೂ ಆಗಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಇದು ಆಗಿಲ್ಲ. ಇದಕ್ಕೆ ಯಾರು ಕಾರಣ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಮಾನ್ಯ ರಂಗನಾಥ್‌ರವರಿಗೆ ಒಂದು ವಿಚಾರ ತಿಳಿಸುತ್ತೇನೆ.

I put the record straight. ಈಗ ಇರತಕ್ಕ ಅಸಿಸ್ಟೆಂಟ್ ಇಂಜಿನಿಯರ್ಸ್ ಏನು ಇದ್ದಾರೆ ಅವರಲ್ಲಿಯೂ ಕೂಡ ಪ್ರತಿಭಾವಂತರು ಇದ್ದಾರೆ. 20-22 ವರ್ಷಗಳ ಕಾಲ ಅವರು ಸೇವೆ ಮಾಡಿದರೂ ಒಂದು ಪ್ರಮೋಷನ್ ಸಿಗುವುದಿಲ್ಲ. ಅಂದರೆ ಹೇಗೆ? ಅವರಿಗೆ ಒಂದು ರೀತಿಯ frustration ಆಗುತ್ತದೆ. ಆ ಕಾರಣಕ್ಕಾಗಿ ನೀವು ಅಸಿಸ್ಟೆಂಟ್ ಇಂಜಿನಿಯರ್ಸ್ ಅನ್ನೆ ನೇಮಕಮಾಡಿಕೊಳ್ಳಿ. Why Asst. Executive Engineers?

ಶ್ರೀ ಕಾಗೋಡು ತಿಮ್ಮಪ್ಪ : ಇನ್ನು ಎಷ್ಟು ದಿವಸ ಹೀಗೆ ಹಳೆ ಕತೆ ಹೇಳಿಕೊಂಡು ಈ ಜನರಿಗೆ ಮೋಸಮಾಡಬೇಕೆಂದು ಹೇಳುತ್ತೀರಿ. 1962 ರಿಂದ ನೇರ ರಿಕ್ರೂಟ್‌ಮೆಂಟ್ ಆಗಿದ್ದರೆ ಎಷ್ಟು ಜನ ಹರಿಜನರು ಬರುತ್ತಿದ್ರು. 10 ಜನ ಬರುತ್ತಿದ್ದರೋ ಏನೋ? ಯಾರಾದರೂ ಇದ್ದರೆ ಅವರಿಗೆ ಕೊಡ್ರಿ ಬೇಡ ಅನ್ನುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಡಳಿತದಲ್ಲಿ ಬಹಳ ಹೆಚ್ಚಿನ ಅನುಭವವನ್ನು ಪಡೆದಿರತಕ್ಕಂಥ ಹಿರಿಯ ಸದಸ್ಯರಿದ್ದಾರೆ. ಆದರೆ ನನಗೆ ಅರ್ಥವಾಗದೆ ಇರತಕ್ಕಂಥದ್ದು ಏನೆಂದರೆ ಒಂದನೆಯದು ಬೇರೆ ಬೇರೆ ಇಲಾಖೆಗಳಲ್ಲಿ ನಾವು ಡೈರೆಕ್ಟಾಗಿ ಅಪಾಯಿಂಟ್‌ಮೆಂಟ್ ಮಾಡಿ ಕೊಂಡಿದ್ದೇವೆ. ಈಗ ಮೋಟಾರ್ ವೆಹಿಕಲ್

ಡಿಪಾರ್ಟ್‌ಮೆಂಟ್‌ನಲ್ಲಿ ಆರ್.ಟಿ.ಓ.ಗಳನ್ನು ಡೈರೆಕ್ಟಾಗಿ ನಾವು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದೇವೆ. ಕೆಲವರನ್ನು ಸೀನಿಯರ್ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಆರ್.ಟಿ.ಓ. ಗಳಾಗಿ ಮಾಡಿದ್ದೇವೆ. ಡೈರೆಕ್ಟಾಗಿ ಅಪಾಯಿಂಟ್‌ಮೆಂಟ್ ಮಾಡಿಕೊಂಡ ಮೇಲೆ ಅವರು ಏನು ಕೆಲಸವನ್ನು ಮಾಡುತ್ತಿದ್ದಾರೆ, ಅವರ ಮತ್ತು ಪ್ರಮೋಷನ್ ತೆಗೆದುಕೊಂಡವರ ಎಫಿಷಿಯನ್ಸಿಯಲ್ಲಿ ನನಗೇನು ವ್ಯತ್ಯಾಸ ಕಾಣುತ್ತಿಲ್ಲ.

SRI K.H. RANGANATH : From engineering point of view..

SRI P.G.R. SINDHIA : I myself an engineering graduate, and I was teaching in a college. I know what is engineering. I was also Irrigation Minister. ಇಲ್ಲಿ ಮುಖ್ಯವಾದ ಅಂಶ ಏನೆಂದರೆ ಎಂ.ಇ., ಪಿ.ಹೆಚ್.ಡಿ.ನೋ ಮಾಡಿದ್ದಾನೆ, ಅವನಿಗೆ ಹೆಚ್ಚಿನ ಅನುಭವ ಇದೆ ಅಥವಾ ಸಾಯಿಲ್ ಮೆಕ್ಯಾನಿಕ್ಸ್ ಅಥವಾ ಸಿವಿಲ್ ಇಂಜಿನಿಯರ್‌ನಲ್ಲೂ ಇರಿಗೇಷನ್ ಇಂಜಿನಿಯರ್‌ನಲ್ಲೂ, ಸ್ಪೇಷಲೈಜೇಷನ್ ಇದೆ ಅದಕ್ಕೋಸ್ಕರವಾಗಿ ನಾವು ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಡೈರೆಕ್ಟಾಗಿ ರಿಕ್ರೂಟ್ ಮಾಡಿಕೊಳ್ಳುತ್ತೇವೆಂದರೆ ಅದು ಒಂದು ರೀತಿ ಅದೂ ಇಲ್ಲ, ಅಥವಾ ಪಿ.ಡಬ್ಲ್ಯೂ.ಡಿನಲ್ಲಿ ಸೆಕ್ಷನಲ್ ಡಿಸೈನ್ಸ್‌ಲ್ಲಿ ಮತ್ತೆ ಬಿಲ್ಡಿಂಗ್ ಡಿವಿಜನ್‌ನಲ್ಲಿ, ಬಿಲ್ಡಿಂಗ್ ಮೆಟೀರಿಯಲ್ಸ್‌ನಲ್ಲಿ ಅಥವಾ ರೋಡ್ ಇಂಜಿನಿಯರಿಂಗ್‌ನಲ್ಲಿ occanal engineeringನಲ್ಲಿ ಸ್ಪೇಷಲೈಜೇಷನ್ ಇದೆ. ಪೋರ್ಟ್‌ಗೊ, ಹಾರ್ಬರ್‌ಗೊ, ರೋಡ್‌ಗೋ ಬೇಕಾಗಿದೆ. ಅದಕ್ಕೋಸ್ಕರ ಡೈರೆಕ್ಟಾಗಿ ರೆಕ್ರುಟ್ ಮಾಡಿಕೊಳ್ಳುತ್ತೇವೆಂದರೆ ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ನಿಜ ಆದರೆ ಇಬ್ಬರು ಓದಿರತಕ್ಕದ್ದು ಬಿ.ಇ. ನೆ, ಈಗ ಅವನು ಬಿ.ಇ. ಓದಿ. ಯಾವ್ಯಾವ ಸೆಲೆಕ್ಷನ್ ಯಾವ್ಯಾವ ರೀತಿಯ ಆಗುತ್ತದೆಂದು ತಮಗೂ ಗೊತ್ತಿದೆ. ನಮ್ಮ ಕಾಲದಲ್ಲಿ ಆಗಿರುವುದು ಅದೇ ಈಗ ಆಗುತ್ತಿರುವುದು ಅದೇ. ಅದರ ಬಗ್ಗೆ ನಾನು ಕಾಮೆಂಟ್ ಮಾಡುತ್ತಿಲ್ಲ. ಇಲ್ಲಿ ಪ್ರಶ್ನೆ ಇರತಕ್ಕದ್ದು ಏನೆಂದರೆ, ಮಿನಿಮಂ ಕ್ವಾಲಿಫಿಕೇಷನ್ ಇಷ್ಟೇ ಇಟ್ಟು ಅಸಿಸ್ಟೆಂಟ್ ಇಂಜಿನಿಯರ್ ಆಗಿ ಬಂದು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆದರೂ ಅದೇ. ಡೈರೆಕ್ಟಾಗಿ ಅಸಿಸ್ಟೆಂಟ್ ಇಂಜಿನಿಯರ್ ಆದರೆ ಹೆಚ್ಚಿನ ವ್ಯತ್ಯಾಸ ಏನು ಇರುವುದಿಲ್ಲ. ಇದರಿಂದ ಸ್ಟೇಟ್ ಎಕ್ಸ್‌ಚೆಕರ್ ಮೇಲೆ ಸ್ಯಾಲರಿ ಬರ್ಡನ್ ಜಾಸ್ತಿಯಾಗುತ್ತದೆಯೇ ಹೊರತು ಎಫಿಷಿಯನ್ಸಿ ಇಂಪ್ರೂ ಆಗುತ್ತದೆಂದು ನಾನಂತೂ ಅಂದುಕೊಂಡಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ನಿಮ್ಮ ಟೈಮ್ ಮುಗಿತ್ತಲ್ಲಾ.

ಶ್ರೀ ಸಿ. ಬೈರೇಗೌಡ : ನಾನು ಮಾತನಾಡಲೇ ಇಲ್ಲ, ಎಲ್ಲಾ ಬೇರೆಯವರು ಮಾತನಾಡಿದ್ದಾರೆ.

ಅಧ್ಯಕ್ಷರು : ನೀವು ಯೀಲ್ಡ್ ಆಗಿ ಯೀಲ್ಡ್ ಆಗಿ ನಿಮ್ಮ ಟೈಮ್ ಎಲ್ಲಾ ಅವರಿವರು ಇವತ್ತು ರಾತ್ರಿವರೆಗೂ ಕುಳಿತು ಈ ಡಿಮ್ಯಾಂಡ್ ಮುಗಿಸಿ, ಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟು..

ಶ್ರೀ ವಾಟಾಳ್ ನಾಗರಾಜ್ : ಸರಿ ರಾತ್ರಿ ಅಂದರೆ ಭಯ ಬರುತ್ತಿದೆ. ನಮ್ಮ ಪರಿಸ್ಥಿತಿಯನ್ನು ದಯವಿಟ್ಟು ಅಲ್ಲಿಯವರೆಗೆ ತರಬೇಡಿ. ಬೆಳಿಗ್ಗೆಯಿಂದ ಕುಳಿತಿದ್ದೇವೆ.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ನಾನು ಈ ಸದನದ ಟ್ರಾನ್ಸ್‌ಕ್ರಿಪ್ಟ್ ತರಿಸಿ ನೋಡಿದ್ದೇನೆ. ಆದ್ದರಿಂದ I want to set the records straight. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಯಾವುದೋ ಒಂದು ಅನಾನಿಮಸ್ ಪತ್ರ ಕೆಲವು ಭಾಗಗಳನ್ನು ಈ ಸದನದಲ್ಲಿ ಓದಿದ್ದಾರೆ. ನನಗೆ ಅನ್ನಿಸುತ್ತದೆ, ಆ ಅನಾಮಧೇಯ ಪತ್ರದಿಂದ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ಅದು ಈ ಕಡತಕ್ಕೆ ಹೋಗುವುದು ಸರಿಯಿಲ್ಲ ಎನ್ನುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪುತ್ತಾರೋ ಹೇಗೆ ಎಂದು ನಾನು ಭಾವನೆ ಮಾಡುತ್ತೇನೆ.

Sri D.B. CHANDRE GOWDA : I referred to the anonymous letter in connection with the Chairman of the KEB. If that is wrong, I will leave it to you.

Mr. SPEAKEr: The Chief Minister also figures here.

ಶ್ರೀ ಡಿ.ಬಿ. ಚಂದ್ರೇಗೌಡ : ಕೆ.ಇ.ಬಿ. ಚೀಫ್ ಇಂಜನಿಯರ್ ಇಂತಹ ದುರಂತ ತಪ್ಪುಗಳನ್ನು ಮಾಡಿದ್ದಾರೆ. ಆ ಭಾಗವನ್ನು ಬೇಕಾದರೆ ತೆಗೆದುಬಿಡಿ.

Mr. SPEAKER : That is right. That is exactly....

(Interruption)

Mr. SPEAKER : This letter whosoever has written it, he talks universal truth.

Sri D.B. CHANDRE GOWDA : No. No.

Mr. SPEAKER : Yes. "It is the universal truth in Karnataka that so and so has done so and so..." Who is this man to speak about the universal truth? Are you...

Sri D.B. CHANDRE GOWDA : My submission is simply this. With reference to the Chairman of the KEB...

Mr. SPEAKER : If you want to say it even with reference to the Chairman of the KEB, you could have taken the responsibility to say it. But you cannot invoke an anonymus letter written by somebody and then make it part of the proceedings of this House. Even if you were here, I am sure, you would have done the samething which I am going to do now.

SRI D.B. CHANDRE GOWDA : At the same time I would like to correct it at a later stage..

MR. SPEAKER : I will show the transcript to you. In the meanwhile you (Sri C. Byre Gowda) continue.

ಶ್ರೀ ಸಿ. ಬೈರೇಗೌಡ : ನಾನು ಪ್ರಸ್ತಾಪ ಮಾಡಿರುವುದು ನೀರಾವರಿಗೆ ಸಂಬಂಧ ಪಟ್ಟಂತೆ. ಮಾತ್ರ. ಅದರ ಮಧ್ಯೆ ನಮ್ಮ ಸ್ನೇಹಿತರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಕೆ.ಹೆಚ್. ರಂಗನಾಥ್‌ರವರು ಕೆಲವು ವಿಚಾರಗಳನ್ನು ಪ್ರಸ್ತಾಪ

ಮಾಡಿದ್ದಾರೆ. ದೇವೇಗೌಡರವರು ಅಲ್ಲಿ ಅಷ್ಟು ವರ್ಷ ಮಂತ್ರಿಗಳಾಗಿದ್ದರಲ್ಲ ಎಂದು ಹೇಳಿದ್ದಾರೆ. ನಿಜ, ಆದರೆ ಅವರಿಗೆ ಖರ್ಚು ಮಾಡುವುದಕ್ಕೆ ಹಣವನ್ನು ಕೊಡಬೇಕಲ್ಲ, ಹಣ ಇಲ್ಲದೇ ಹೋದರೆ ಯಾರು ಮಂತ್ರಿಯಾಗಿದ್ದರೂ ಏನು ಪ್ರಯೋಜನ?

(ಗೊಂದಲ)

ಅಧ್ಯಕ್ಷರು : ನೀವು ಯಾರಿಗೆ ಹೇಳುತ್ತಿದ್ದೀರಿ ಅದನ್ನು. ಇವರ ಮುಂದೆ ನ್ಯಾಯ ಒಪ್ಪಿಸಿದರೆ ಅದು ಬಗೆ ಹರಿಯುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಹಳೆ ಮೈಸೂರು, ಹೊಸ ಮೈಸೂರು, ಕರ್ನಾಟಕ, ದೇವೇಗೌಡರು ಹೀಗೆ ವಿಷಯ ಎತ್ತೆತ್ತಲೋ ಹೋಗುತ್ತಿದೆ ಇದು.

ಶ್ರೀ ಸಿ.ಬೈರೇಗೌಡ : ಎಫಿಷಿಯೆನ್ಸಿ ಬಗ್ಗೆ ಮಾನ್ಯ ರಂಗನಾಥ್‌ರವವು ಮಾತನಾಡಿದ್ದಾರೆ. ಹಾಗೆಯೇ ಇಂಜಿನಿಯರ್ಸ್ ರೆಕ್ರೂಟ್‌ಮೆಂಟ್ ಬಗ್ಗೆ ಮಾತನಾಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಒದಗಿಸಿರುವ ಹಣ ಖರ್ಚು ಆಗದಿದ್ದರೆ, ಒದಗಿಸಿರತಕ್ಕ ಹಣವನ್ನು ಖರ್ಚು ಮಾಡಿದಿದ್ದರೆ, ಆಗ ಏನು ಮಾಡಬೇಕು?

ಶ್ರೀ ಸಿ. ಬೈರೇಗೌಡ : ಹಾಗಿದ್ದರೆ, ಅದನ್ನು ಒಪ್ಪಿಕೊಳ್ಳೋಣ. ಆದರೆ ಹಣವನ್ನು ಕೊಡದಿದ್ದರೆ ಏನೂ ಆಗುವುದಿಲ್ಲ. ವರ್ಷಗಟ್ಟಳೆ ಎಲ್.ಓ.ಸಿ.ಯನ್ನು ಕೊಡದೇ ಇರುವಂಥ ವಿಚಾರ ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಕೆಲವು ಭಾಗಗಳಲ್ಲಿ ಕೆಲವು ವರ್ಷಗಳಲ್ಲಿ ಎಲ್.ಓ.ಸಿಯನ್ನೇ ಕೊಟ್ಟಿರಲಿಲ್ಲ. ಇದಕ್ಕೆ ನನ್ನಲ್ಲಿ ದಾಖಲೆಗಳಿವೆ. ಅದಕ್ಕೋಸ್ಕರವೇ ನಾನ ಹೇಳುತ್ತಿರುವುದು.

(ಗೊಂದಲ)

ಶ್ರೀ ಸಿ.ಬೈರೇಗೌಡ : ನೀವು ಈ ವರ್ಷದ್ದು ಹೇಳುತ್ತಿದ್ದೀರಿ. ಹಾಗೂ ದೇವೇಗೌಡರವರು ಆರೆಂಟು ವರ್ಷಗಳ ಕಾಲ ಮಂತ್ರಿಯಾಗಿದ್ದರು ಎಂದು ರೆಫರ್ ಮಾಡುತ್ತಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಹೆಸರನ್ನು ಹೇಳಿಲ್ಲ. 1983ರಿಂದ ಎಂದು ಹೇಳಿದೆ ಅಷ್ಟೆ.

ಶ್ರೀ ಸಿ. ಬೈರೇಗೌಡ : ಆರು ಯಾವ ಯಾವ ತಿಂಗಳಲ್ಲಿ ಯಾವ ಯಾವ ವರ್ಷದಲ್ಲಿ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಎಲ್.ಓ.ಸಿಯನ್ನು ಕೊಟ್ಟಿದ್ದೀರಿ. ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಆಧಾರವಾಗಿ ಇಟ್ಟುಕೊಂಡು ಹೇಳಿದರೆ ನಾನು ಒಪ್ಪುತ್ತೇನೆ. ಎಲ್.ಓ.ಸಿ.ಯನ್ನು ಕೊಡದೇ ಇದ್ದರೆ, ಯಾರು ಮಂತ್ರಿಯಾಗಿದ್ದರೂ ಸಹ ಏನು ಪ್ರಯೋಜನ? ಈಗ ದುಡ್ಡು ಇಲ್ಲದೇ ಶ್ರೀ ಅಶ್ವಥರೆಡ್ಡಿಯವರನ್ನು ರಸ್ತೆ ಮಾಡಿಸಿ ಎಂದರೆ ಅವರು ಮಾಡಿಸುವುದಕ್ಕೆ ಆಗುವುದೇ, ದುಡ್ಡು ಇಲ್ಲದೇ ಶ್ರೀ ಮಲ್ಲಾರಿಗೌಡ ಪಾಟೀಲರನ್ನು ಪ್ರಾಜೆಕ್ಟ್ ಕಟ್ಟಿರಿ ಎಂದರೆ ಕಟ್ಟುವುದಕ್ಕೆ ಆಗುವುದೇ? ಏನಾದರೂ ಯಕ್ಷಿಣಿ ಮಾಡುವ ಹಾಗೆ ಇದ್ದರೆ ಮಾಡಿ ತೋರಿಸಿ. ಬಹಳ ಸಂತೋಷ ಇವತ್ತು ಹಣ ಬೇಕು ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರ ಹಣ ಕೊಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ, ರಾಜ್ಯದಲ್ಲಿ ನೀರಾವರಿ ಬಾಂಡ್‌ಗಳನ್ನು ಹೊರಡಿಸಿ. ನೀರಾವರಿ ಬಾಂಡ್‌ಗಳನ್ನು ಫ್ಲೋಟ್ ಮಾಡುವುದಕ್ಕೆ ಅವಕಾಶ ಬೇಕು ಎಂದು ಹೇಳಿದ್ದೀರಿ. ಹಣವನ್ನು ಪಡೆಯುವುದಕ್ಕೆ ರಾಜ್ಯ ಸರ್ಕಾರದಿಂದ ಏನು ಪ್ರಯತ್ನವನ್ನು ಮಾಡಿದ್ದೀರಿ? ಇವತ್ತು ರಾಜ್ಯದಲ್ಲೂ ಮತ್ತು ಕೇಂದ್ರದಲ್ಲೂ ಒಂದೇ

ಪಕ್ಷದ ಸರ್ಕಾರ ಆಡಳಿತ ನಡೆಸುತ್ತಿದೆ. ಇಲ್ಲಿ ನಿಮಗೆ ಈ ಬಗ್ಗೆ ಕಾಳಜಿ ಇದ್ದರೆ, ಏನೇನು ಮಾಡುವುದಕ್ಕೆ ಹೊರಟಿದ್ದೀರಿ ಎಂಬುದನ್ನು ಹೇಳಿ. ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಎಲ್ಲಿಂದಾದರೂ ಹಣವನ್ನು ತಂದು ಈ ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡುವಂಥ, ಒದಗಿಸುವಂಥ ಒಂದು ಪ್ರಯತ್ನವನ್ನು ತಾವು ಮಾಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇವತ್ತು ನಮ್ಮ ಸರ್ಕಾರ ಇಲ್ಲೂ ಇದೆ, ಕೇಂದ್ರದಲ್ಲೂ ಇದೆ. ಈ ಹಿಂದೆ ನಿಮ್ಮ ಸರ್ಕಾರ ರಾಜ್ಯದಲ್ಲೂ ಮತ್ತು ಕೇಂದ್ರದಲ್ಲೂ ಇದ್ದಾಗ ನೀವೇಕೆ ಈ ಇರಿಗೇಷನ್ ಬಾಂಡ್‌ಗಳನ್ನು ಮಂಜೂರು ಮಾಡಿಸಿಕೊಳ್ಳಲಿಲ್ಲ?

ಶ್ರೀ ಸಿ. ಬೈರೇಗೌಡ : ಇವತ್ತು ಈ ನೀರಾವರಿ ಬಾಂಡ್‌ಗಳನ್ನು ಫ್ಲೋಟ್ ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಹಣವನ್ನು ಕೊಡುವಂಥ ವಿಚಾರದಲ್ಲಿ ಏನು ಪ್ರಯತ್ನ ಆಗಿದೆ ಎನ್ನುವುದನ್ನು ದಯವಿಟ್ಟು ಉತ್ತರದಲ್ಲಿ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ದಕ್ಷಿಣ ರಾಜ್ಯಗಳಲ್ಲಿ ಮತ್ತು ಇಡೀ ದೇಶದಲ್ಲೇ ನೀರಾವರಿಯಲ್ಲಿ ನಮ್ಮ ರಾಜ್ಯ ಹಿಂದುಳಿದಿದೆ. ರಾಷ್ಟ್ರೀಯ ಮಟ್ಟದಲ್ಲಿ 31.61 ಇದ್ದರೆ, ನಮ್ಮ ರಾಜ್ಯದ್ದು 17.25 ಇದೆ. ಸರಿಸುಮಾರು ಶೇಕಡ 50ರಷ್ಟು ವ್ಯತ್ಯಾಸ ಇದೆ. ನಮ್ಮಲ್ಲಿ ನೀರಾವರಿಯಾಗಬೇಕು. ಅದಕ್ಕೆ ಬೇಕಾದಂಥ ಪೊಟೆನ್‌ಶಿಯಲ್ ಇದೆ. ಕಾವೇರಿ ಮತ್ತು ಕೃಷ್ಣ ಈ ಎರಡೂ ನದಿಗಳ ನಮ್ಮ ಪಾಲಿನ ನೀರನ್ನು ಉಪಯೋಗಿಸುವುದರಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಆದ್ದರಿಂದ, ನೀರಾವರಿ ಬಾಂಡ್‌ಗಳನ್ನು ಜಾರಿಗೆ ತಂದು ಆದಷ್ಟು ಬೇಗನೆ ನಮ್ಮ ರಾಜ್ಯದ ನೀರಾವರಿ ಯೋಜನೆಗಳನ್ನು ಮುಗಿಸಬೇಕೆಂದು ಆಗ್ರಹ ಮಾಡುವುದಕ್ಕೆ ಇಷ್ಟಪಡುತ್ತೇನೆ.

6.05 ಪಿ.ಎಂ.

ಇನ್ನು ಕರ್ನಾಟಕದ ರೈಲ್ವೆ ಅತ್ಯಂತ ಹೀನಾಯವಾಗಿರತಕ್ಕಂಥ ಪರಿಸ್ಥಿತಿಯಲ್ಲಿದೆ. ನಮ್ಮಲ್ಲಿ ಅನೇಕರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ಅದೆಲ್ಲವನ್ನೂ ಕೂಡ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ರಾಜ್ಯ ಸರ್ಕಾರದ ಪ್ರಯತ್ನ ಇವೊತ್ತು ಕೊಂಕಣ ರೈಲ್ವೆ ಕಡೆಗೆ ಮಾತ್ರ ಇದೆ. ಅಂತಹ ಒಂದು ಬೃಹತ್ ಪ್ರಮಾಣದಲ್ಲಿರತಕ್ಕ ಒಂದು ಯೋಜನೆ ಬಿಟ್ಟರೆ, ಅನೇಕ ಯೋಜನೆಗಳು ಇನ್ನು ಆಗಿಲ್ಲ. ಇವೊತ್ತು ಕಾರವಾರ "ಸರ್ವ ಋತು ಬಂದರು" ಆಗಿದೆ. ಅದೊಂದು ಮೀಡಿಯಂ ಪೋರ್ಟ್ ಆಗಿದೆ. ಇದು ರಾಜ್ಯ ಸರ್ಕಾರದಲ್ಲಿರತಕ್ಕಂಥ ಒಂದು ಪ್ರಮುಖವಾದಂಥ ಬಂದರು. ಸರಕು ಸಾಗಾಣಿಕೆ ಆಗಬೇಕಾಗಿದ್ದರೆ, ಕಾರವಾರದ ಬಂದರು ಮೂಲಕ ಆಗಬೇಕು. ಹೊಸಪೇಟೆಯ ಕಬ್ಬಿಣದ ಅದಿರು ಈಗ ರಸ್ತೆ ಮೂಲಕ ಹೊರದೇಶಕ್ಕೆ ಹೋಗುತ್ತಿದೆ. ಈ ರಸ್ತೆ ಮೇಲೆ ಯಾವುದೇ ಸರಕು ಸಾಗಾಣಿಕೆ ಹೋಗಬೇಕಾದಲ್ಲಿ, ಲಾರಿಗಳ ಮುಖಾಂತರ ಹೋಗಬೇಕಾಗುತ್ತದೆ. ಅದರಿಂದ ಹಣ ಹೆಚ್ಚು ಖರ್ಚಾಗುತ್ತದೆ. ಆದರೆ, ರೈಲ್ವೆ ಇದ್ದರೆ ಕಡಿಮೆ ಖರ್ಚಿನಲ್ಲಿ ಸಾಗಾಣಿಕೆ ಮಾಡಬಹುದು. ಕಾರವಾರದಿಂದ ಹೊಸಪೇಟೆಗೆ ಲಿಂಕ್ ಮಾಡುವ ಪ್ರಯತ್ನ ಇನ್ನೂ ನಡೆದಿಲ್ಲ. ಅದೇ ರೀತಿಯಲ್ಲಿ ಇವೊತ್ತಿನ ದಿವಸ ರೈಲ್ವೆ ವಿಚಾರದಲ್ಲಿ ನಮ್ಮ ರಾಜ್ಯ ಹಿಂದೆ ಬಿದ್ದಿರತಕ್ಕಂಥಾದ್ದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇದಕ್ಕೂ ಕೂಡಾ ತಾವು ದಯವಿಟ್ಟು ಪ್ರಯತ್ನ ಮಾಡಬೇಕು. ನಮ್ಮಲ್ಲಿ ನ್ಯಾಷನಲ್ ಹೈವೇಸ್ ಇದೆ. ಎಲ್ಲಾ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ, ಯಾವ್ಯಾವ ರಸ್ತೆಗಳು ಏನೇನು? ಎಂದು ದಕ್ಷಿಣ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದ ಪ್ರಗತಿ ಆಶಾದಾಯಕವಾಗಿಲ್ಲ. ಎಷ್ಟು ಸ್ಕ್ವೆಯರ್

ಕಿಲೋ ಮೀಟರ್ ನ್ಯಾಷನಲ್ ಹೈವೇ ಇರಬೇಕೆಂಬುದರ ಪ್ರಗತಿಯೂ ಕೂಡಾ ಆಶಾದಾಯಕವಾಗಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಹೆಚ್ಚು ಒತ್ತಡ ತಂದು, ಕೇವಲ ಅಧಿಕಾರಯುತವಾಗಿ ಒತ್ತಡ ತರುವುದಲ್ಲದೆ, ರಾಜಕೀಯವಾಗಿ ಒತ್ತಡ ತಂದು ಅನೇಕ ರಸ್ತೆಗಳನ್ನು ಮೇಲ್ದರ್ಜೆಗೇರಿಸಬೇಕಾಗಿದೆ. ಉದಾಹರಣೆಗೆ ಇವೊತ್ತಿನ ದಿವಸ ಬೆಂಗಳೂರು-ಕಡಪ ರಸ್ತೆ ಹೋಗುತ್ತದೆ. ಇದು ಸುಮಾರು ಮುನ್ನೂರು ಕಿಲೋಮೀಟರು ಇದೆ. ನಾನು ತಮ್ಮಲ್ಲಿ ಕೈಜೋಡಿಸಿ ಬೇಡಿಕೊಳ್ಳುತ್ತೇನೆ, ದಯವಿಟ್ಟು ಆ ರಸ್ತೆ ಕಡೆ ಒಂದು ಸಲ ಬನ್ನಿ. ಬಂದರೆ, ತಮಗಾದರೂ ಕೂಡಾ ಅರ್ಥವಾಗುತ್ತದೆ. ನಾವು ಕಂಡ ಕಂಡವರಿಗೆ ನಮಸ್ಕಾರ ಮಾಡಿದ್ದಾಯಿತು. ಸಾಷ್ಟಾಂಗ ನಮಸ್ಕಾರ ಒಂದು ಮಾಡಿಲ್ಲ. ಅದನ್ನೂ ಕೂಡಾ ಮುಂದೆ ರಿಪೇರಿ ಮಾಡಬೇಕಾಗುತ್ತದೆ. ಇಂಥ ರಸ್ತೆಗಳನ್ನು ನೀವು ರಾಷ್ಟ್ರೀಯ ಹೆದ್ದಾರಿ ಮಟ್ಟಕ್ಕೆ ಏರಿಸುವ ಒಂದು ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ನಾನು ವಿದ್ಯುತ್ತಿನ ಬಗ್ಗೆ ಇಲ್ಲಿ ಮಾತನಾಡದಿದ್ದರೆ, ಜನರು ಮೊನ್ನೆ ಬೀದರ್‌ನಲ್ಲಿ ಕೆಲವು ಅಧಿಕಾರಿಗಳಿಗೆ ಬಟ್ಟೆ ಬಿಚ್ಚಿಸಿದಂತೆ ನನಗೂ ಬಟ್ಟೆ ಬಿಚ್ಚಿಸುತ್ತಾರೆ. ಅಂತಹ ಭೀಕರವಾದ ಪರಿಸ್ಥಿತಿ ಇದೆ. ಮಾನ್ಯ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಈಗಲೇ ಹೋಗೋಣ ಎಂದು ಹೇಳುತ್ತಿದ್ದಾರೆ. ಈಗಲೇ ಬೇಡ, ಬೆಳಿಗ್ಗೆ ಹೋಗೋಣ. ಒಂದು ವೇಳೆ ಅವರು ಬಂದರೆ ನನ್ನ ಪರವಾಗಿ ಅವರ ಬಟ್ಟೆ ಬಿಚ್ಚಬೇಡಿರಿ ಎಂದು ಜನರನ್ನು ಕೇಳಿಕೊಳ್ಳುತ್ತೇನೆ, ಆದರೆ ಅವರ ಬಟ್ಟೆಯನ್ನಲ್ಲ, ನನ್ನ ಬಟ್ಟೆಯನ್ನು ಬಿಚ್ಚುತ್ತಾರೆ. ಇವೊತ್ತು ಬೆಳಿಗ್ಗೆಯಿಂದ ನಾಲ್ಕು ಸಾರಿ ಫೋನ್ ಮಾಡಿ ಹೇಳಿದ್ದಾರೆ. ಒಂದು ದಿವಸದಲ್ಲಿ ಕೆಲವು ಗಂಟೆಗಳಾದರೂ ವಿದ್ಯುತ್ತನ್ನು ಕೊಡತಕ್ಕಂಥ ಏರ್ಪಾಟು ನಮ್ಮಲ್ಲಿ ಆಗಿಲ್ಲ. ಇಲ್ಲಿ ವಿದ್ಯುತ್ತಿನ ಬಗ್ಗೆ ಅನೇಕ ಸಾರಿ ಚರ್ಚೆಯಾಗಿದೆ. ಆದರೂ ವಿದ್ಯುತ್ತಿನ ಬಗ್ಗೆ ಮಾತನಾಡುತ್ತಿದ್ದೇನೆಂದು ತಮಗೆ ಬೇಜಾರಾಗಬಹುದು.

ಅಧ್ಯಕ್ಷರು : ಬೇಜಾರು ಅಲ್ಲ.

ಶ್ರೀ ಸಿ. ಬೈರೇಗೌಡ : ಇದರ ಬಗ್ಗೆ ಎಷ್ಟೋ ಸಾರಿ ಚರ್ಚೆಯಾಗಿದೆ. ತಮಗೆ ಬೇಜಾರಾಗದಿದ್ದರೆ ಸಂತೋಷ. ಆದರೆ, ಪ್ರತಿಫಲ ಏನಾಗಿದೆ? ತಾವಾದರೂ ಕೂಡಾ ದಯವಿಟ್ಟು ಅಲ್ಲಿಗೆ ಬರಬೇಕು. ಬಂದು ಕಣ್ಣಾರೆ ಕಂಡರೆ, ನಂತರ ಸರ್ಕಾರಕ್ಕೆ ಇದನ್ನು ಮಾಡಲೇಬೇಕು ಎಂಬ ಕಟ್ಟಾಜ್ಞೆ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಇವರಿಗೆ ಮೊರೆ ಹೋಗಿದ್ದಾಯಿತು, ನಮಸ್ಕಾರ ಮಾಡಿದ್ದಾಯಿತು. ಇವೆಲ್ಲಾ ಮುಗಿದು ಇವೊತ್ತಿನ ದಿವಸ ತಮಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಮ್ಮ ಜಿಲ್ಲೆಗೆ ದಯವಿಟ್ಟು ಒಂದು ಸಾರಿ ಬರಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇವೊತ್ತಿನ ದಿವಸ ಎಷ್ಟೋ ಜನರು ವಿದ್ಯಾವಂತರಲ್ಲದಿದ್ದರೂ ಕೂಡಾ ಅವರಿಗೆ ಕಾಮನ್ ಸೆನ್ಸ್ ಎನ್ನತಕ್ಕಂಥಾದ್ದು ಇದೆ. ಎಲ್ಲಾ ನದಿಗಳು, ಜಲಾಶಯಗಳು ಕೋಡಿ ಹರಿಯುತ್ತಿದ್ದರೂ ಇವೊತ್ತಿನ ದಿವಸ ನಮಗೆ ವಿದ್ಯುತ್ ಇಲ್ಲ, ಇಂಥ ಪರಿಸ್ಥಿತಿ ಇದೆ. ಆದರೆ, ಅಲ್ಲಿ ಉಂಟಾಗಿರತಕ್ಕದ್ದು, ವಿದ್ಯುತ್ತಿನ ಕೊರತೆಯಲ್ಲ, ಅಲ್ಲಿರತಕ್ಕ ಲೈನುಗಳು ಏನಿವೆ, ಮತ್ತು ಸಬ್ ಸ್ಟೇಷನ್‌ಗಳು ಏನು ಆಗಬೇಕಾಗಿದೆ, ಅದು ಯಾವ ಪ್ರಮಾಣದಲ್ಲಿ ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಅನೇಕ ಸಭೆಗಳಾದವು, ಮಂತ್ರಿಗಳನ್ನು ಕರೆಸಿದ್ದರು, ಮುಖ್ಯಮಂತ್ರಿಗಳನ್ನು ಕರೆಸಿದ್ದರು, ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿಯಾಯಿತು, ರೈತರೆಲ್ಲಾ ಕೂಡಾ ಮಾತನಾಡಿದರು. ಆಗ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ತಕ್ಷಣ ವಿದ್ಯುತ್ ಕೊಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂಬ ಆಶ್ವಾಸನೆ ಕೊಟ್ಟರು.

ಆದರೆ ಇಲ್ಲಿಯವರೆಗೂ ಕೂಡ ಅಲ್ಲಿ ಯಾವುದೇ ಕೆಲಸವಾಗಿಲ್ಲ. ಈವತ್ತು ನಮ್ಮಲ್ಲಿ ಒಂದು ಭೀಕರವಾದ ಪರಿಸ್ಥಿತಿ ಉಂಟಾಗಿದೆ. ಇದನ್ನು ದಯಮಾಡಿ ಮಾನ್ಯ ಮಂತ್ರಿಗಳು ಬಂದು ನೋಡಬೇಕು. ನೀವು ಯಾವಾಗ ಬರುತ್ತೀರೆಂದು ತಿಳಿಸಬೇಕು. ಇನ್ನು ಈ ಮೀನುಗಾರಿಕೆ ಮತ್ತು ಬಂದರು ಖಾತೆಗೆ ನಾನು ಮಂತ್ರಿಯಾಗಿದ್ದೆ. ನಮ್ಮಲ್ಲಿ ಮೀನುಗಾರಿಕೆಗೆ ಬಹಳ ವಿಫುಲವಾದ ಅವಕಾಶವಿದೆ. ನಮ್ಮಲ್ಲಿ 300 ಕಿ.ಮೀ. ಉದ್ದದ ಕಡಲ ತೀರವಿದೆ. ಆದರೆ ದುರಾದೃಷ್ಟವಶಾತ್ ನಾವು ಯಾವ ಪ್ರಮಾಣದಲ್ಲಿ ನಮ್ಮ ಕಡಲ ತೀರವನ್ನು ಮೀನುಗಾರಿಕೆಗೆ ಬಳಕೆ ಮಾಡಬೇಕಾಗಿತ್ತೋ ಆ ಪ್ರಮಾಣದಲ್ಲಿ ಬಳಕೆ ಮಾಡುತ್ತಿಲ್ಲ. ನಾನು ಅಧಿಕಾರದಲ್ಲಿ ಇದ್ದಾಗ ಡೀಪ್ ಸೀ ಫಿಷರೀಸ್ ಮಾಡಬೇಕೆಂದು ಒಂದೆರಡು ಟ್ರಾಲರ್‌ಗಳನ್ನು ಕೊಂಡುಕೊಳ್ಳಲಾಯಿತು. ಆದರೆ ಅದು ನನ್ನ ಜೊತೆಯಲ್ಲಿಯೇ ಹೋಯಿತೆಂದು ಕೇಳಿ ದುಃಖವಾಯಿತು. ತೈವಾನ್‌ನಂತಹ ದೂರ ದೇಶದಿಂದ ಬಂದು ನಮ್ಮ ಕಡಲ ತೀರದಲ್ಲಿ ಮೀನನ್ನು ಹಿಡಿಯುತ್ತಾರೆ. ಕೊರಿಯ, ತೈವಾನ್ ಮುಂತಾದ ದೇಶದಿಂದ ಬಂದು ಕಳ್ಳತನದಿಂದ ಮೀನನ್ನು ಹಿಡಿಯುತ್ತಿದ್ದಾರೆ. ವಿದೇಶಿವಿನಿಮಯವನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಗಳಿಸಿಕೊಡತಕ್ಕ ಮೀನುಗಾರಿಕೆಗೆ ನಮ್ಮಲ್ಲಿ ಬಹಳ ಅವಕಾಶವಿದೆ. ಆ ಪ್ರಯತ್ನ ಈವತ್ತು ನಮ್ಮಲ್ಲಿ ನಡೆಯುತ್ತಿಲ್ಲ. ಮತ್ತೆ ಈ ಮೀನುಗಾರರ ಸಮಸ್ಯೆಗಳು ಅಷ್ಟೇ ಭೀಕರವಾಗಿದೆ. ಈವತ್ತು ಮಾನ್ಯ ಇದಿನಬ್ಬನವರು ಈ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಮಂಗಳೂರಿನ ಹಳೆ ಬಂದರಿನಲ್ಲಿ ಮುಂಗಾರು ಪ್ರಾರಂಭವಾಯಿತೆಂದರೆ ಮೀನುಗಾರರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡಬೇಕಾಗುತ್ತದೆ. ಅನೇಕ ಸಾವುನೋವುಗಳು ಉಂಟಾಗಿವೆ. ಅಲ್ಲಿ ಮುಖ್ಯವಾಗಿ ಆಗಬೇಕಾಗಿರತಕ್ಕದ್ದು ಏನೆಂದರೆ, ನೇತ್ರಾವತಿ ನದಿಗೆ ರಿವರ್ ಟನಲ್ ವಾಲ್‌ನ್ನು ಹಾಕಬೇಕಾಗಿದೆ. ಅಲ್ಲಿ ಲೇಕ್ ಡ್ರೆಗಿಂಗ್ ಆಗಬೇಕಾಗಿದೆ. ಇನ್ನು ಮಲ್ಪೆ ಬಂದರು. ಮಲ್ಪೆಯಲ್ಲಿ ಮೀನುಗಾರಿಕೆಯ ಬಂದರಿದೆ. ಅಲ್ಲಿಯೂ ಕೂಡ ಡ್ರೆಗಿಂಗ್ ಅತ್ಯಂತ ಅವಶ್ಯಕವಾಗಿ ಆಗಬೇಕಾಗಿದೆ. ಅದು ಈಗ ಆಗಿದೆಯೋ ಏನೋ ಗೊತ್ತಿಲ್ಲ.

ಮಲ್ಪೆ ಬಂದರಿನಲ್ಲಿ ಮೊದಲನೆಯ ಹಂತದ ಡ್ರೆಗಿಂಗ್ ಕೆಲಸವಾಗಿದೆ. ಇನ್ನು ಸ್ಲೀಪ್‌ವೇ ಆಗಬೇಕಾಗಿದೆ. ಅದು ಆಗಿದೆಯೋ ಏನೋ ಗೊತ್ತಿಲ್ಲ. ಅದು ಮೊದಲಿನಿಂದಲೂ ಎಲ್ಲಿತ್ತೋ ಅಲ್ಲೇ ಇದೆ. ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಮೀನುಗಾರಿಕೆಗೆ ಬಹಳಷ್ಟು ಅವಕಾಶವಿದೆ. ಮಲ್ಪೆ ಬಂದರನ್ನು ಬಹಳ ಹಿಂದೆ ಮಾಡಿದ್ದಾರೆ, ಅಲ್ಲಿ ದೊಡ್ಡ ದೊಡ್ಡ ಟ್ರಾಲರ್ಸ್‌ಗಳು ಈ ಪರ್ಷಿಯನ್ ಬೋಟ್ಸ್ ಏನಿವೆ ಅವು ಹೋಗಲು ಅವಕಾಶವಿಲ್ಲ. ನಾನು ಹೇಳಿದಂತೆ ಮೀನುಗಾರರು ಜೀವವನ್ನು ಕೈಯಲ್ಲಿ ಇಟ್ಟುಕೊಂಡು ಓಡಾಡತಕ್ಕ ಪರಿಸ್ಥಿತಿ ಬಂದಿದೆ. ಮತ್ತು ಅಲ್ಲಿ ಅನೇಕ ಕೋಲ್ಡ್ ಸ್ಟೋರೇಜ್‌ಗಳಿವೆ. ಅಲ್ಲಿಗೆ ದಿನದ 24 ಗಂಟೆ ಕಾಲವೂ ವಿದ್ಯುತ್‌ನ್ನು ಸರಬರಾಜು ಮಾಡಬೇಕಾಗಿದೆ. ಈ ಹಿಂದೆ ವಿದ್ಯುತ್ ಸರಬರಾಜಿನಲ್ಲಿ ತೊಂದರೆ ಇರಲಿಲ್ಲ.

ಅಲ್ಲಿರುವ ಕೋಲ್ಡ್ ಸ್ಟೋರೇಜ್‌ಗಾದರೂ ಕೂಡ ದಿನಪೂರ್ತಿ ವಿದ್ಯುತ್ ಕೊಡತಕ್ಕಂಥ ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ. ಒಳನಾಡಿನ ಮೀನುಗಾರಿಕೆ ಕೈಗೊಳ್ಳಲು ದೊಡ್ಡ ದೊಡ್ಡ ಜಲಾಶಯಗಳಿವೆ. ಸ್ವಲ್ಪ ಮುಂದೆ ಯಾರೋ ಮೀನುಗಾರಿಕೆಗೆ ನೀರೇ ಇಲ್ಲವೆಂದು ಹೇಳುತ್ತಿದ್ದರು. ಹೌದು ಒಳನಾಡಿನ ಕೆಲವುಕಡೆ ಮೀನುಗಾರಿಕೆಗೆ ನೀರೇ ಇಲ್ಲ. ಕೆಲವು ಕಡೆ ಫಾರಂಗಳಿವೆ. ದಯವಿಟ್ಟು ಮಾನ್ಯ ಮಂತ್ರಿಗಳಾಗಿರತಕ್ಕವರು ಕೆಲವುಕಡೆಗೆ ಅನಿರೀಕ್ಷಿತವಾಗಿ ಹೋಗಿ ನೋಡಿದರೆ ಅಲ್ಲಿ ನಿಮಗೆ ಆಶ್ಚರ್ಯ ಅದ್ಭುತಗಳು ಕಾಣುತ್ತವೆ. ಕೆಲವು ಒಳನಾಡಿನ ಮೀನುಗಾರಿಕೆ ಕಛೇರಿಗಳಿಗೆ ಹೋಗಬೇಕು. ಆಗ ನಿಮಗೆ ಅದ್ಭುತಗಳು ಸಿಗುತ್ತವೆ. ಆದ್ದರಿಂದ ಒಳನಾಡಿನ ಮೀನುಗಾರಿಕೆಗೆ ಹೆಚ್ಚಿನ

ಪ್ರೋತ್ಸಾಹವನ್ನು ಕೊಡಬೇಕು. ಮತ್ತು ಈ ಮೀನುಗಾರಿಕೆಗೆ ಅತಿ ಮುಖ್ಯವಾಗಿರತಕ್ಕಂಥದ್ದು ಏನೆಂದರೆ ನರ್ಸರಿ. ಈ ಮೀನುಗಾರಿಕೆಗೆ ಬೇಕಾದ ಮರಿಗಳು ಎಲ್ಲೋ ಒಂದು ಕಡೆ ಬೆಳೆದುಕೊಳ್ಳುತ್ತವೆ. ಹಾಗೆಯೇ ಎಲ್ಲೋ ಒಂದುಕಡೆ ಇವುಗಳಿಗೆ ಆಶ್ರಯ ಸಿಗುತ್ತದೆ. ಈ ನರ್ಸರಿಗಳೇನಿವೆ. ಇವನ್ನು ಅತೀ ಉತ್ತಮವಾದಂಥ ರೀತಿಯಲ್ಲಿ ನೀವು ಬೆಳೆಸಬೇಕು. ನಮ್ಮಲ್ಲಿ ಕೆಲವು ಮಾನ್ಯುಮೆಂಟ್ಸ್ ಕಟ್ಟಿದ್ದಾರೆ. ನೀವು ಅಪ್ಪರ್ ಕೃಷ್ಣಾದ ನಾರಾಯಣಪುರದ ಡ್ಯಾಮ್ ಹತ್ತಿರ ಹೋದರೆ ಸುಮಾರು 70-80 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಅಲ್ಲಿ ಮಾನ್ಯುಮೆಂಟ್ಸ್ ಕಟ್ಟಿದ್ದಾರೆ. ಅದು ಈಗ ಡೆಮಾಲಿಷ್ ಆಗಿದೆಯೋ? ಏನು ಗೊತ್ತಿಲ್ಲ. ನನಗಂತೂ ನೋಡುವುದಕ್ಕೆ ಆಗಲಿಲ್ಲ. ಇದೊಂದು ದೊಡ್ಡ ಕರ್ಮಕಾಂಡ. ಅಲ್ಲಿ ದೊಡ್ಡ ನರ್ಸರಿ ಮಾಡುವುದಕ್ಕೆ ಹೋದರು. ಆದರೆ ಅವು ಈಗ ಒಂದು ಮಾನ್ಯುಮೆಂಟ್ಸ್ ಆಗಿ ಉಳಿದಿವೆ. ಈ ಬಗ್ಗೆ ಖರ್ಚಾಗಿರತಕ್ಕಂಥ ಹಣ ಏನು ಇದೆ. ಅದಕ್ಕೆ ಪ್ರತಿಫಲ ಕೊಡತಕ್ಕಂಥದ್ದಕ್ಕೆ ತಾವು ಪ್ರಯತ್ನಪಡಬೇಕು. ಮತ್ತು ಒಳನಾಡಿನ ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri D.B.ChandreGowda : I leave the matter to the Chair so far as expunction is concerned. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದರೆ ನನ್ನ ಸುಮಾರು ಇಪ್ಪತ್ತು ವರ್ಷಗಳ ಸಂಸದೀಯ ನಡವಳಿಕೆಗಳಲ್ಲಿ ಸದನದ ಕಡತದಿಂದ ತೆಗೆದು ಹಾಕಿದಂಥ ಪ್ರಸಂಗಗಳು ಇಲ್ಲ. ತಾವು ಅದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಮತ್ತೊಂದು ನನ್ನ ವಿನಂತಿಯೇನೆಂದರೆ ಈಗ 6-20 ಆಗಿದೆ, ನಾವೆಲ್ಲಾ ಬೆಳಿಗ್ಗೆ 11-00 ಗಂಟೆಗೆ ಬಂದಿದ್ದೇವೆ, ನಾಳೆ ಬೇಕಾದರೆ ಬೆಳಿಗ್ಗೆ 9-00 ಗಂಟೆಗೆ ಸೇರೋಣ.

MR. SPEAKER : I am going to deal it in a very limited manner. Whatever you have quoted by taking the reference of an anonymous letter is not your own assertion. I am only expunging that. I am also expunging whatever has been stated by the hon'ble Member Sri Swamy Rao.

SRI D.B. CHANDRE GOWDA : I expected that to stay in the proceedings of this House.

MR. SPEAKER : I do not want it to stay. I understand your anxiety that you wanted it to be a part of the record of this House. But, I have to be guided by rules of this House which is binding on you and me. That will be expunged. ಈಗ ಏನೆಂದರೆ ಇನ್ನು ಬಹಳ ಜನ ಮಾನ್ಯ ಸದಸ್ಯರುಗಳು ಭಾಷಣ ಮಾಡಬೇಕೆಂದಿದ್ದಾರೆ. ಆದರೆ ಇವತ್ತು ಮಾನ್ಯ ಮಂತ್ರಿಗಳ ಉತ್ತರವಾಗಬೇಕಿತ್ತು.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಈಗ ಯಾರ್‍ಯಾರು ಮಾತನಾಡುತ್ತಾರೆ, ಮಾತನಾಡಲಿ, ನಾಳೆ ಬೆಳಿಗ್ಗೆ 9-00 ಗಂಟೆಗೆ ಉತ್ತರ ಕೊಡುತ್ತೇವೆ.

ಅಧ್ಯಕ್ಷರು : 3-4 ಮಾನ್ಯ ಸದಸ್ಯರುಗಳು ಈಗ ಮಾತನಾಡುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ಕ್ಷಮಿಸಬೇಕು ನಾಳೆ ಮುಂಜಾನೆ ಮೀಟಿಂಗ್ ಇದೆ. ಆದುದರಿಂದ 9-00 ಗಂಟೆಗೆ ನಾವು ಬರುವುದಕ್ಕಾಗುವುದಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ತಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ತಾವು ನಮಗೆ 5 ನಿಮಿಷ ಅವಕಾಶ ಮಾಡಿಕೊಡಿ. ಹೆಚ್ಚಿಗೆ ಬೇಡ.

ಅಧ್ಯಕ್ಷರು : ನಿಮ್ಮ ಪಕ್ಷದ ಸಮಯ ಒಟ್ಟು 3-30 ಗಂಟೆ ಮುಗಿದಿದೆ. ಆದುದರಿಂದಲೇ ನಾನು ಹೇಳಿದ್ದು ಇನ್ನೂ ಸ್ವಲ್ಪ ಹೊತ್ತು ಕೂತುಕೊಳ್ಳೋಣ ಎಂದು. ಇದು ಬಹಳ ಮುಖ್ಯವಾದ ಬೇಡಿಕೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ಕೂತಿದ್ದೇವೆ. ನಾಳೆ ಬೆಳಿಗ್ಗೆ 8 ಗಂಟೆಗೆ ಬೇಕಾದರೂ ಕೂತುಕೊಳ್ಳೋಣ. ಈಗ..

ಅಧ್ಯಕ್ಷರು : ಈಗ ಮಾನ್ಯ ಮನೋಹರ ತಹಸಿಲ್ದಾರ್‌ರವರು ಮಾತನಾಡುವವರು, ನಾನು ಕೇಳುವವನು, ನಮ್ಮಿಬ್ಬರನ್ನು ಬಿಟ್ಟು ಬಾಕಿಯವರೆಲ್ಲಾ ಹೋಗಬೇಕೆಂದು ಹೇಳುತ್ತಿದ್ದೀರಿ. ಅವರೂ ರೆಡಿಯಾಗಿದ್ದಾರೆ, ನಾನೂ ರೆಡಿಯಾಗಿದ್ದೇನೆ ನಮ್ಮ ಜೊತೆಗೆ ಮಾನ್ಯ ಏಕಾಂತಯ್ಯನವರೂ ಒಬ್ಬರಿದ್ದಾರೆ. ಈಗ ಮಾನ್ಯ ಮನೋಹರ ತಹಸಿಲ್ದಾರ್‌ರವರ ಭಾಷಣ ಮುಗಿದಮೇಲೆ ಮತ್ತೆ ಈ ಬಗ್ಗೆ ಯೋಚನೆ ಮಾಡೋಣ.

ಶ್ರೀ ಮನೋಹರ್ ಹನುಮಂತಪ್ಪ ತಹಶೀಲ್ದಾರ್ (ಹಾನಗಲ್) : ಸನ್ಮಾನ್ಯ ಅಧ್ಯಕ್ಷರೆ, ಇಂಗು ಮಂಡಿಸಲಾಗಿರುವ ಅನೇಕ ಇಲಾಖೆಗಳ ಬೇಡಿಕೆಗಳ ಬಗ್ಗೆ ನಾನು ಒಂದೆರಡು ಸೂಚನೆಗಳನ್ನು ಕೊಡುತ್ತೇನೆ. ಈಗ ಲೋಕೋಪಯೋಗಿ ಇಲಾಖೆಯ ವಿಚಾರದಲ್ಲಿ ಮಾತನಾಡಬೇಕೆಂದರೆ ಜಿಲ್ಲಾ ಪರಿಷತ್ತುಗಳು ಈ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಮೇಲೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕ ರಸ್ತೆಗಳೆಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಹೋಗಿವೆ. ಆದರೆ ಅವುಗಳನ್ನು ರಿಪೇರಿ ಕೂಡ ಮಾಡಿಸದೇ ಇರತಕ್ಕ ಪರಿಸ್ಥಿತಿಯಲ್ಲಿ ಜಿಲ್ಲಾ ಪರಿಷತ್ತುಗಳು ಇವೆ. ನಾನಾದರೂ ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಲ್ಲ ಕೇಳಿಕೊಳ್ಳುವುದಿಷ್ಟೆ, ತಾವು ಅತ್ಯಮೂಲ್ಯವಾದ ಈ ಇಲಾಖೆಯನ್ನು ಹೊಂದಿದ್ದು ಕೆಲವು ಮುಖ್ಯ ರಸ್ತೆಗಳನ್ನಾದರೂ ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿಕೊಂಡು ಕನಿಷ್ಠ ಒಂದೊಂದು ತಾಲೂಕಿಗೆ 50 ಕಿ.ಮೀ. ರಸ್ತೆಗಳನ್ನಾದರೂ ಪ್ರತಿವರ್ಷ ಅಭಿವೃದ್ಧಿಪಡಿಸಬೇಕು. ಇಲ್ಲದಿದ್ದರೆ ಈ ರಸ್ತೆಗಳಲ್ಲಿ ಬಸ್ಸುಗಳ ಸಂಚಾರ ಇರಲಿ, ಬೇರೆ ಯಾವುದೇ ಗಾಡಿಗಳೂ ಕೂಡ ಹೋಗದಂಥ ಪರಿಸ್ಥಿತಿ ಬರುತ್ತದೆ. ಆದುದರಿಂದ ಇದನ್ನು ತಾವು ತೀವ್ರಗತಿಯಲ್ಲಿ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಅನೇಕ ಕಟ್ಟಡಗಳೂ ಕೂಡ ನಾದುರಸ್ತಿಯಲ್ಲಿವೆ. ಆದ್ಯತೆಯಮೇಲೆ ಈ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕ ಕಟ್ಟಡಗಳನ್ನು ತಕ್ಷಣ ರಿಪೇರಿ ಮಾಡಿಸಬೇಕೆಂದು ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅವರಿಗೆ ಈಗ ಒದಗಿಸಿರತಕ್ಕ ಹಣ ಏನೇನೂ ಸಾಲದು ಅವರಿಗೆ ಸರ್ಕಾರ ಇನ್ನೂ ಹೆಚ್ಚಿಗೆ ಹಣವನ್ನೊದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿಗೆ ಸಂಬಂಧಪಟ್ಟಂತೆ ಮೇಜರ್ ಇರಿಗೇಷನ್ ವಿಚಾರದಲ್ಲಿ ಇದುವರೆಗೆ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮೇಜರ್ ಇರಿಗೇಷನ್ ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯ ಈ ಸಣ್ಣ ನೀರಾವರಿ ಯೋಜನೆಗಳೂ

ಕೂಡ. ಇವತ್ತು ನಮ್ಮ ಉತ್ತರ ಕರ್ನಾಟಕದಲ್ಲಿ ಅನೇಕ ನದಿಗಳಿವೆ. ಆ ನದಿಗಳು ತುಂಬಿ ಹರಿಯುತ್ತಿದ್ದರೂ ಕೂಡ, ಲಿಫ್ಟ್ ಇರಿಗೇಷನ್ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ನಾವು ಇಲ್ಲ. ಲಿಫ್ಟ್ ಇರಿಗೇಷನ್‌ನ್ನು 2 ಭಾಗ ಮಾಡಿ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಒಂದು ಕಾವೇರಿ ಜಲಾನಯನ ಪ್ರದೇಶಕ್ಕೆ ಇನ್ನೊಂದು ಎಂದು ಮಾಡಿದ್ದರೂ ಕೂಡ ಏನೇನೂ ನಮಗೆ ಪ್ರಯೋಜನವಾಗಿಲ್ಲ. ಏಕೆಂದರೆ ಕೃಷ್ಣಾ ಜಲಾನಯನ ಪ್ರದೇಶವು ನಮ್ಮ ವ್ಯಾಪ್ತಿಗೆ ಬರುತ್ತದೆ. 10 ಜಿಲ್ಲೆಗಳು ನಮ್ಮ ಕೃಷ್ಣಾ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತವೆ. ಆದರೆ ಇದು ಒಂದು ಬಿಳಿ ಆನೆಯಾಗಿ ಬೆಳೆಯುತ್ತಿದೆಯೇ ಹೊರತು ಯಾವುದೇ ಪ್ರಯೋಜನವೂ ಇದರಿಂದಾಗುತ್ತಿಲ್ಲ. ಇವತ್ತಿನವರೆಗೂ ಒಂದೇ ಒಂದು ಲಿಫ್ಟ್ ಇರಿಗೇಶನ್ ಕೆಲಸವನ್ನೂ ಕೂಡ ಪೂರೈಸುವುದಕ್ಕೆ ಇದಕ್ಕೆ ಸಾಧ್ಯವಾಗಿಲ್ಲ. ಇವತ್ತು ಏನಾಗಿದೆ ಎಂದರೆ ಎಲ್ಲ ಯೋಜನೆಗಳೂ ತಯಾರಾಗಿವೆ, ಇವು ಸಾಧುವಾಗಿವೆ ಎಂದು ಒಂದುಸಾರಿ ಉತ್ತರವನ್ನು ಕೊಟ್ಟರೆ ಇನ್ನೊಂದುಸಾರಿ ಇವು ಅಸಾಧುವಾಗಿವೆ ಎಂದು ಅದೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಈ ಎರಡೂ ರೀತಿಯ ಉತ್ತರಗಳೂ ನಮ್ಮ ಹತ್ತಿರ ಇವೆ. ಆದುದರಿಂದ ನಾನು ಹೇಳಿದ್ದು ಇದು ಒಂದು ಬಿಳಿ ಆನೆ ಎಂದು. ಇದರಿಂದ ನಮಗೆ ಯಾವುದೇ ಒಂದು ಉಪಯೋಗವೂ ಇಲ್ಲ. ಇದನ್ನು ವೈಂಡ್‌ಅಪ್ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಲಿಫ್ಟ್ ಇರಿಗೇಷನ್‌ನ್ನು ಮಾಡತಕ್ಕ ಈ ಸಂಸ್ಥೆ 1986ರಿಂದ ಇವತ್ತಿನವರೆಗೂ ಒಂದೇ ಒಂದು ಯೋಜನೆಯನ್ನೂ ಕೂಡ ಕಾರ್ಯಗತ ಮಾಡಿಲ್ಲ. ಇವರ ಯೋಜನೆಗಳೆಲ್ಲಾ ಕೇವಲ ಪೇಪರ್‌ಮೇಲೆ ನಿಂತಿವೆಯೇ ಹೊರತು ಕಾರ್ಯಗತವಾಗಿಲ್ಲ. ಉದಾಹರಣೆಗೆ ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ 5 ಲಿಫ್ಟ್‌ಇರಿಗೇಷನ್ ಯೋಜನೆಗಳು ಕಳೆದ ಸುಮಾರು 10-12 ವರ್ಷಗಳಿಂದಲೂ ಪ್ರಸ್ತಾಪದಲ್ಲಿದ್ದರೂ ಒಂದೂ ಕೂಡ ಕಾರ್ಯಗತ ಆಗಿಲ್ಲ. ಅವು ಯಾವುವು ಎಂದರೆ, ಚೊಳವಳ್ಳಿ, ಮಕರವಳ್ಳಿ, ಬಸಾಪುರ, ವಾಸನ, ಸಿನಿಮಾಪುರ, ಈ 5 ಲಿಫ್ಟ್ ಇರಿಗೇಶನ್ ಯೋಜನೆಗಳನ್ನು ವರದಾ ಮತ್ತು ಧರ್ಮಾ ನದಿಗಳ ವ್ಯಾಪ್ತಿಯಲ್ಲಿ ಮಾಡುವುದಕ್ಕೆ ಯೋಜನೆ ಮಾಡಿದ್ದು ಕಳೆದ 10-12 ವರ್ಷಗಳಿಂದಲೂ ಇವುಗಳನ್ನು ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. ಇವು 1980-81 ನೇ ಬಜೆಟ್‌ನಲ್ಲಿ ಸೇರಿರತಕ್ಕಂಥವು.

ಇದರ ಅರ್ಥ ಏನು? ಸುಮ್ಮನೆ ನಾವು ಜನರಿಗೆ, ರೈತರಿಗೆ ಕಣ್ಣೊರೆಸುವುದಕ್ಕೆ ನಾವು ಬಜೆಟ್‌ನಲ್ಲಿ ಹಣ ಪ್ರವೈಡ್ ಮಾಡುವುದಾದರೆ ಇದು ನಿಜಕ್ಕೂ ವ್ಯಥೆಪಡುವಂಥ ವಿಚಾರ. ಆದ್ದರಿಂದ ನಿಜವಾಗಿಯೂ ನಮ್ಮ ಈ ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇದ್ದರೆ ಖಂಡಿತವಾಗಿಯೂ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ನಿಗಮಕ್ಕೂ ಮತ್ತು ಈ ನಬಾರ್ಡ್‌ನ ಮಧ್ಯೆ ಸರ್ಕಾರ ಏನಾದರೂ ಒಂದು ವಯಾಮೀಡಿಯಾ ಹುಡುಕಿ ಆ ಒಂದು ಯೋಜನೆಗಳು ಕಾರ್ಯಗತವಾಗುವಂತೆ ಮಾಡಿದರೆ ಅದು ಎಲ್ಲರಿಗೂ ಕ್ಷೇಮವೆಂದು ನನ್ನ ಅಭಿಪ್ರಾಯ. ಇಲ್ಲದೆಹೋದರೆ ಈ ಒಂದು ಸಂಸ್ಥೆಯನ್ನು ಮುಚ್ಚಿ ಸಣ್ಣ ನೀರಾವರಿ ಯೋಜನೆಗಳ ಇಲಾಖೆ ಎಂದು ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ ಇತ್ತೀಚೆಗೆ ಎಲ್.ಐ.ಎಸ್.ಎಸ್. ಮಾಡುವುದಕ್ಕಿಂತ ಸುಳ್ಳು ವರದಿಯನ್ನು ಕೊಡುವುದೇ ಜಾಸ್ತಿಯಾಗಿದೆ. ಪೇಪರ್‌ನಲ್ಲಿ ಕೊಡುತ್ತಿದ್ದಾರೆ. ಸುಮ್ಮನೆ ಇಷ್ಟು ವರದಿಗಳು ಸಾಲದು ಎಂದು ಕೊಡುತ್ತಿದ್ದಾರೆ. ಏಕೆಂದರೆ, ಉತ್ತರ ಹೇಳುತ್ತಾರೆ. ಇವತ್ತು ಒಂದು ಹೆಕ್ಟೇರ್‌ಗೆ ಮೂರುವರೆ ಸಾವಿರಕ್ಕಿಂತ ಹೆಚ್ಚು ಖರ್ಚುಮಾಡಲು ಸಾಧ್ಯವಿಲ್ಲ. ಮೂರುವರೆ ಸಾವಿರಕ್ಕಿಂತ ಹೆಚ್ಚಿದ್ದರೆ ಅದು ಇನ್‌ಫ್ಯೂಜಬಲ್ ಎಂದು ಕೊಡುತ್ತಾರೆ. ಜೊತೆಗೆ ಸಣ್ಣ ಕೆರೆಕಟ್ಟೆಗಳಿಗೆ ಒಂದು ಅಚ್ಚುಕಟ್ಟು ಎಂದು ಇರುತ್ತದೆ, ಈ ಕೆರೆಕಟ್ಟೆಗಳು ಮಳೆಬಂದು ನೀರುತುಂಬಿ ಸುಮಾರು

10-12 ವರ್ಷಗಳ ಮೇಲೆಯಾದರೂ ನೀರನ್ನು ಕಾಣದಿರತಕ್ಕಂಥದ್ದು ಇದೆ. ಆ ಒಂದು ಅಚ್ಚುಕಟ್ಟನ್ನು ಹೊರತುಪಡಿಸಿ ಆ ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ. ಇದು ಯಾವುದು ಪ್ರಯೋಜನಕ್ಕೆ ಬರುವುದಿಲ್ಲ, ಆದ್ದರಿಂದ 35000 ಕ್ಕಿಂತ ಹೆಚ್ಚು ಅಂದರೆ 5 ಸಾವಿರ ರೂಪಾಯಿವರೆಗೆ ಪರ್ ಹೆಕ್ಟೇರ್‌ಗೆ ಖರ್ಚುಮಾಡುವಂಥದ್ದನ್ನು ಎನಾನ್ಸ್ ಮಾಡಬೇಕು. ಜೊತೆಗೆ ಸಣ್ಣ ನೀರಾವರಿ ಅಚ್ಚುಕಟ್ಟು ಬರುವಂಥ ಕೆರೆಕಟ್ಟೆಗಳನ್ನು ಹೊರತುಪಡಿಸಿ ಅದನ್ನು ಸಹಿತ ಎಂದು ಹೇಳಿ ಮಾಡಬೇಕು. ಅಂದರೆ ಮಾತ್ರ ನಮಗೆ ಯೋಜನೆಗಳು ಸಾಧು ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಸಣ್ಣ ನೀರಾವರಿ ಯೋಜನೆಗಳಿಗೆ ಬಂದರೆ ಈಗ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮೂರು ಬ್ಯಾರೇಜ್‌ಸ್ ಆಗಬೇಕಾಗಿದೆ. ಇವತ್ತು ಕೊಂಕಣ ಬ್ಯಾರೇಜ್, ಅರೆಲಕ್ಕಾಪುರ ಬ್ಯಾರೇಜ್, ನಮ್ಮ ಹಾವೇರಿ ತಾಲ್ಲೂಕಿನ ನಾಗಪುರ ಬ್ಯಾರೇಜ್, ಇವೆಲ್ಲ ಏನಾಗಿದೆ ಅಂದರೆ ಸುಮ್ಮನೆ ಸ್ವಲ್ಪಸ್ವಲ್ಪ ಹಣ ಕೊಟ್ಟರೆ ಆ ಬ್ಯಾರೇಜಸ್‌ಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಷ್ಟೊಂದು ಬ್ಯಾರೇಜ್‌ಸ್‌ಗಳು ಅರ್ಧಂಬರ್ಧವಾಗಿ ನಿಂತಿವೆ. ಸವಣೂರು ತಾಲ್ಲೂಕಿನ ಒಂದು ಬ್ಯಾರೇಜ್ ಅರ್ಧಂಬರ್ಧವಾಗಿ ಬಿದ್ದಿವೆ. ಇದನ್ನು ಪೂರ್ಣಮಾಡದೆಹೋದರೆ ಮುಕ್ತಿ ಇಲ್ಲ. ಆದ್ದರಿಂದ ಸರ್ಕಾರ ತತ್‌ಕ್ಷಣ ಕ್ರಮವನ್ನು ತೆಗೆದುಕೊಂಡು ಈ ಬ್ಯಾರೇಜುಗಳನ್ನು ಮುಗಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಈ ಕೆಲಸಗಳಿಗೆ ಮುಂದಿನ ಬಜೆಟ್‌ನಲ್ಲಿ ಕೂಡ ಸರಿಯಾಗಿ ಹಣವನ್ನು ಕೊಟ್ಟಿಲ್ಲ. ಅಧಿಕಾರಿಗಳನ್ನು ಕೇಳಿದರೆ ಹಣವಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಆದ್ದರಿಂದ ಹೆಚ್ಚಿನ ಹಣವನ್ನು ಈ ಬ್ಯಾರೇಜ್‌ಸ್‌ಗೆ ಕೊಟ್ಟರೆ ಲಿಫ್ಟ್ ಇರಿಗೇಷನ್ ಮಾಡಿಕೊಳ್ಳಬಹುದು. ಮತ್ತು ನೀರನ್ನು ಗ್ರೌಂಡ್ ವಾಟರ್ ಲೆವಲ್‌ನಲ್ಲಿಯೂ ಕೂಡ ಉಪಯೋಗಿಸಬಹುದು. ಇಷ್ಟು ವಿಷಯಗಳನ್ನು ಈ ಒಂದು ಸಣ್ಣ ನೀರಾವರಿ ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟಹಾಗೆ ಹೇಳಿ ನಮ್ಮ ಉತ್ತರ ಕರ್ನಾಟಕದ ಬಗ್ಗೆ ಏನಾದರೂ ಮಾಡಿ ಅಪ್ಪರ್‌ತುಂಗಾ ಯೋಜನೆಯನ್ನು ಅನುಷ್ಠಾನಗೊಳಿಸಿ ಎಂದು ನಾವು ಕೇಳುತ್ತಲೇ ಇದ್ದೇವೆ. ನಮ್ಮ ಹಿರೆಕೆರೂರ್ ಶಾಸಕರು ಪದೇ ಪದೇ ಇದನ್ನು ಹೇಳುತ್ತಿದ್ದಾರೆ. ನಮಗೆ ಇರುವದು ಎಂದರೆ ಇದು ಒಂದೇ ಒಂದು ಆಶಾಕಿರಣ, ಆದ್ದರಿಂದ ಇದನ್ನು ಈಗಲಾದರೂ ತಕ್ಷಣ ಏನೇ ತೊಂದರೆ ಇದ್ದರೂ ಸರ್ಕಾರ ಕಾರ್ಯಗತ ಮಾಡುವುದಾದರೆ ಉತ್ತರ ಕರ್ನಾಟಕಕ್ಕೆ ಒಂದು ದೊಡ್ಡ ಕೆಲಸವನ್ನು ಮಾಡಿಕೊಟ್ಟಂತಾಗುತ್ತದೆ. ಈಗ ಏನಾಗಿದೆ ಎಂದರೆ, ನಮ್ಮ ನಮ್ಮಲ್ಲಿಯೇ ಭಿನ್ನಭೇದ ಮಾಡುವಂತಾಗಿದೆ. ಇವತ್ತು ದಕ್ಷಿಣ ಭಾಗದಲ್ಲಿ ಹೆಚ್ಚು ನೀರಾವರಿ ಪೊಟೆನ್‌ಶಿಯಾಲಿಟಿ ಬೆಳೆಯುತ್ತಿದೆ. ಉತ್ತರ ಭಾಗದಲ್ಲಿ ಸಣ್ಣ ಸಣ್ಣ ಯೋಜನೆಗಳನ್ನು ಕೂಡ ಸರ್ಕಾರ ಮಾಡಿಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಹಿರೇಕೆರೂರ್ ತಾಲ್ಲೂಕ್ ಹಾನಗಲ್, ಹಾವೇರಿ ತಾಲ್ಲೂಕ್ ಅಷ್ಟೇ ಅಲ್ಲ ಶಿವಮೊಗ್ಗದ 2-3 ತಾಲ್ಲೂಕುಗಳು, ಹರಿಹರ ತಾಲ್ಲೂಕು ಕೂಡ ಈ ಯೋಜನೆಯಲ್ಲಿ ಸೇರುತ್ತದೆ. ಮಾಲತಿ ಡ್ಯಾಮ್ ಕಟ್ಟಿದರೆ ಸಾಲದು ಎನ್ನುವುದನ್ನು ನಮ್ಮ ಸದಸ್ಯರು ಹೇಳಿದ್ದಾರೆ. ದಯವಿಟ್ಟು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ಮಾನ್ಯ ಬೃಹತ್ ನೀರಾವರಿ ಯೋಜನೆಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ನಮ್ಮ ಎಲ್ಲಿ ನೀರಾವರಿ ಯೋಜನೆಗಳು ಬಚಾವತ್ ಕಮಿಷನ್ ಪ್ರಕಾರ 2000ನೇ ಇಸವಿಗೆ ಮುಕ್ತಾಯವಾಗಬೇಕು. ಅಷ್ಟರೊಳಗೆ ಲಿಫ್ಟ್ ಇರಿಗೇಷನ್, ಬ್ಯಾರೇಜಸ್ ಆಗದೆ ಹೋದರೆ ನಮ್ಮ ಭಾಗದಲ್ಲಿ ಏನೂ ಕೆಲಸ ಆಗದಂತೆ ಆಗುತ್ತದೆ. ರೈತರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದಂತಹ ಪರಿಸ್ಥಿತಿ ಉಂಟಾಗುತ್ತದೆ.ಆದ್ದರಿಂದ ದಯವಿಟ್ಟು ಈ

ಕೆಲಸ ಕಾರ್ಯಗಳನ್ನು ಸರ್ಕಾರ ತ್ವರಿತವಾಗಿ ಕೈಗೊಳ್ಳಬೇಕೆಂದೂ ಮತ್ತು ಅದಕ್ಕೆ ಬೇಕಾದ ಹಣಕಾಸಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಾಬುರಾವ್ ಚವಾಣ್ (ಶಹಬಾದ್) : ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕದ ಗುಲ್ಬರ್ಗ, ಬೀದರ್, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳನ್ನು ನೋಡಿದರೆ ನಾವು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇಲ್ಲಿನ ಮುಖ್ಯವಾದ ಸಮಸ್ಯೆ ಎಂದರೆ ಈ ಜಿಲ್ಲೆಗಳಲ್ಲಿ ರಸ್ತೆಗಳು ಸರಿಯಾಗಿಲ್ಲ. ಹಿಂದೆ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಇದ್ದಾಗ ರಸ್ತೆಗಳ ರೂಪುರೇಷೆಯನ್ನು ಚೆನ್ನಾಗಿ ಮಾಡಿ, ಆ ಭಾಗ ಹಿಂದುಳಿದ ಭಾಗ, ಆ ಜನ ಹಿಂದುಳಿದ ಜನ, ಅಲ್ಲಿ ಕೆಲಸ ಆಗಬೇಕು ಎಂದು ದುಡ್ಡು ಕೂಡ ಅಲಾಟ್ ಮಾಡಿದ್ದರು. ನಂತರ ಕೆಲಸ ಕೂಡ ಆಗುತ್ತಾ ಬಂತು. ಆದರೆ ನಮ್ಮ ಭಾಗದ ಮುಖ್ಯ ಮಂತ್ರಿಯವರು ಹೋದ ನಂತರ ಕೆಲಸ ಬಹಳ ಮಂದಗತಿಯಿಂದ ಸಾಗುತ್ತಿದೆ. ನಾನು ಕಳಕಳಿಯಿಂದ ಏತಕ್ಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ಕೆಲಸ ಆಗುತ್ತಿದೆ, ಇಲ್ಲವೆಂದು ಅಲ್ಲ, ಆದರೆ ಸಂಬಂಧಪಟ್ಟ ಲೋಕೋಪಯೋಗಿ ಮಂತ್ರಿಗಳಾಗಲಿ, ವಿದ್ಯುಚ್ಛಕ್ತಿ ಮಂತ್ರಿಗಳಾಗಲಿ ಆ ಕಡೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದು ಹೇಗೆಂದರೆ, ಉದಾಹರಣೆಗೆ ರೋಡ್ ಮೆಯಿಂಟೆನೆನ್ಸ್ ವಿಚಾರದಲ್ಲಿ ಹೇಳುವುದಾದರೆ ಒಂದು ಜಿಲ್ಲೆಯಿಂದ ಒಂದು ತಾಲ್ಲೂಕಿಗೆ ಹೋಗಬೇಕಾದರೆ ಇರತಕ್ಕ ರಸ್ತೆ ಸರಿಯಿಲ್ಲ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಸೇಡಂನಿಂದ ಗುಲ್ಬರ್ಗಕ್ಕೆ ಬರಬೇಕಾದರೆ, ಆ ರಸ್ತೆಯಲ್ಲಿ ಹಾಕಿದಂತಹ ಮಣ್ಣಿನಲ್ಲಿ ವಾಹನಗಳು ಸರಿಯಾಗಿ ಚಲಿಸದೆ ಒಂದರ ಹಿಂದೆ ಒಂದರಂತೆ ನೂರಿನ್ನೂರು ಬಸ್ಸು, ಲಾರಿಗಳು ನಿಂತುಕೊಂಡು ಓಡಾಡುವುದಕ್ಕೆ ಹಾದಿ ಇಲ್ಲದೆ ಮುಂಜಾನೆಯಿಂದ ಸಂಜೆಯವರೆಗೆ ರೋಡ್ ಬ್ಲಾಕ್ ಆಗಿರುತ್ತದೆ. ನಂತರ ಎಲ್ಲಾ ಟ್ರಕ್ ಡ್ರೈವರ್ಸ್ ಲಾರಿ ಡ್ರೈವರ್ಸ್ ಬಂದು ಆರ್.ಟಿ.ಓ. ಕಛೇರಿಯಲ್ಲಿ ಗದ್ದಲ ಮಾಡಿ ಆರ್.ಟಿ.ಓ ಇನ್ಸ್‌ಪೆಕ್ಟರ್ಸ್ ಮತ್ತು ಅಧಿಕಾರಿಗಳಿಗೆ ಹೊಡೆದಂತ ಪ್ರಕರಣ ಗುಲ್ಬರ್ಗ ಜಿಲ್ಲೆಯಲ್ಲಿ ನಡೆದಿದೆ. ಏತಕ್ಕೆ ಜನರು ರೊಚ್ಚಿಗೇಳುತ್ತಾರೆಂದರೆ ಅಲ್ಲಿ ರಸ್ತೆಗಳು ಸರಿಯಾಗಿಲ್ಲ. ಇದು ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶದ ರಸ್ತೆಗಳ ಬಗ್ಗೆ ಇಷ್ಟು ನಿರ್ಲಕ್ಷ್ಯ ಮಾಡುವುದು ಬೇಡವೆಂದು ಹೇಳುತ್ತಿದ್ದೇನೆ. ಇನ್ನು ರೋಡ್ ಮೆಯಿಂಟೆನೆನ್ಸ್ ಬಗ್ಗೆ ಹೇಳುವುದಾದರೆ ಶಾಸಕರು ಹೋಗಿ ಯಾವ ರೀತಿ ರೋಡ್ ಮೆಯಿಂಟೆನೆನ್ಸ್ ಮಾಡುತ್ತಿದ್ದಾರೆ. ಏತಕ್ಕೆ ಗುಂಡಿಯನ್ನು ಮುಚ್ಚಿಲ್ಲ. ಹಣ ಖರ್ಚು ಮಾಡಿದ್ದೀರಾ ಇಲ್ಲವೇ ಎಂದು ಕೇಳಿದರೆ ಇದಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ಕೊಡಿ ಎಂದರೆ ಅಧಿಕಾರಿಗಳು ನಮಗೆ ತಂದುಕೊಡುವುದಿಲ್ಲ. ಫೋನ್ ಮಾಡಿ ಕೇಳಿದರೆ ಸಂಬಂಧಪಟ್ಟ ಅಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ. ಮನೆಗೆ ಫೋನ್ ಮಾಡಿದರೆ ಪೂಜೆ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಮಂತ್ರಿಗಳಿಗೆ ಪತ್ರ ಬರೆದರೆ ಉತ್ತರ ಸಿಗುವುದಿಲ್ಲ. ಈ ಸ್ಥಿತಿಯಲ್ಲಿ ಹೈದರಾಬಾದ್ ಕರ್ನಾಟಕದ ಗತಿ ಏನಾಗುತ್ತದೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ರೋಡ್ ಮೆಯಿಂಟೆನೆನ್ಸ್‌ಗೆ ಎಷ್ಟು ಖರ್ಚು ಮಾಡಿದಿರಿ, ಎಲ್ಲೆಲ್ಲಿ ಮಣ್ಣು ಮುಚ್ಚಿದ್ದೀರಿ, ಹೇಗೆ ಖರ್ಚು ಮಾಡಿದ್ದೀರಿ ತೋರಿಸಿ ಎಂದರೆ, ಅಧಿಕಾರಿಗಳು ಅದನ್ನು ತೋರಿಸದಿದ್ದರೆ ಅದು ನಮಗೆ ಎಷ್ಟು ಅಸಮಾಧಾನದ ವಿಷಯ ಎಂದು ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಜೆ.ಇ., ಇ.ಇ. ಏನಾದರೂ ರೋಡ್ ಎಸ್ಟಿಮೇಟ್ ಮಾಡಿದ್ದರೆ ಮಾಡಿದ ದಾಖಲೆ

ಕಾಪಿ ಕೊಡಿ ಎಂದರೆ ಕೊಡುವುದಿಲ್ಲ. ನಾನು ಗುಲ್ಬರ್ಗಾ ಜಿಲ್ಲೆಯಲ್ಲಿರತಕ್ಕ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಒಂದು ಕಾಗದ ಬರೆದು 3 ತಿಂಗಳಾಯಿತು. ಉತ್ತರವಿಲ್ಲ ಶಹಬಾದ್ ರಸ್ತೆಯ ಎಸ್ಟಿಮೇಟ್ ಕಾಪಿ ಕೊಡಿ ಎಂದರೆ 3 ತಿಂಗಳ ನಂತರ ತಂದುಕೊಟ್ಟಿದ್ದಾರೆ.

6.35 ಪಿ.ಎಂ.

ಸನ್ಮಾನ್ಯ ಅಧ್ಯಕ್ಷರೆ, ಆ ಶಹಬಾದ್‌ನ ನಾಲ್ಕೈದು ಜನ ನಾಲ್ಕೈದು ಟ್ರಕ್ಕಿನಲ್ಲಿ ತುಂಬಿ ನನ್ನ ಮನೆಗೆ ಬಂದರು. ನನ್ನ ಕ್ಷೇತ್ರದಲ್ಲಿ ಹೋಗುವುದಕ್ಕೆ ಸರಿಯಾದ ರಸ್ತೆ ಇಲ್ಲ. ಶಹಬಾದ್ ಪಟ್ಟಣದಲ್ಲಿರತಕ್ಕ ರಸ್ತೆ ಬದಿಯಲ್ಲಿ ಕೆದರಿಬಿಟ್ಟು ಮಣ್ಣು ಮುಚ್ಚಿದ್ದಾರೆ. ಎರಡು ಮೂರು ಲಾರಿಗಳು ಬಂದು ಆ ಮಣ್ಣಿನಲ್ಲಿ ಇಳಿದುಕೊಂಡು ಬಿಟ್ಟಿದೆ. ಶಹಬಾದ್‌ನಲ್ಲಿ ಇರತಕ್ಕ ಮೂರು ನಾಲ್ಕು ಲಾರಿ ಓನರ್ಸ್ ನನ್ನ ಮನೆಗೆ ಬಂದು ಹೇಳಿದರು, ಶಾಸಕರೇ, ರಸ್ತೆಗಳ ಪರಿಸ್ಥಿತಿ ನೋಡಿ, ನಮ್ಮ ಟ್ರಕ್‌ಗಳೆಲ್ಲಾ ಹಾಳಾಗಿಹೋಗಿದೆ, ನೀವು ಏನು ಮಾಡುತ್ತಿದ್ದೀರಿ ನೀವೂ ಶಾಮೀಲಾಗಿ ರಸ್ತೆ ದುಡ್ಡೆಲ್ಲಾ ಹಾಳು ಮಾಡಿದ್ದೀರಿ ಎಂದು ನನ್ನ ಮೇಲೆಯೇ ಆಪಾದನೆ ಮಾಡಿದರು. ಆಗ ಎಲ್ಲ ಜನರನ್ನೂ ಕರೆದುಕೊಂಡು ಎಗ್ಸಿಕ್ಯುಟೀವ್ ಇಂಜಿನಿಯರ್ ಮನೆಗೆ ಹೋದಾಗ ನನ್ನ ಜೊತೆ ಆ ಎಗ್ಸಿಕ್ಯುಟೀವ್ ಇಂಜಿನಿಯರ್ ಮಾತನಾಡುವುದಕ್ಕೆ ಸಿದ್ಧರಿಲ್ಲ. ಆಗ ನಾನು ಡಿವಿಷನಲ್ ಕಮಿಷನರ್ ವಿನಯಕುಮಾರ್ ಅವರ ಕಡೆ ಹೋಗಿ ಇದನ್ನು ಬಗೆಹರಿಸಿ ಎಂದು ಕಿರಿಕಿರಿ ಮಾಡಿದಾಗ ಮರುದಿವಸ ಕೆಲಸ ಮಾಡಿದರು. ಇದನ್ನು ಕಳಕಳಿಯಿಂದ ಮಂತ್ರಿಗಳಿಗೆ ಏತಕ್ಕೆ ಹೇಳುತ್ತೇನೆ ಎಂದರೆ ಒಬ್ಬ ಶಾಸಕರು ಫೋನ್‌ನಲ್ಲಿ ಕೇಳಿದಾಗ ರೆಸ್ಪಾನ್ಸ್ ಕೊಡದಿದ್ದರೆ ಎಷ್ಟು ಕೆಟ್ಟದ್ದೆನಿಸುತ್ತದೆ ಮಾನ್ಯ ಅಧ್ಯಕ್ಷರೆ? ಶಾಸಕರು ಕೇಳಿದರೆ ಅಧಿಕಾರಿಗಳು ಸರಿಯಾಗಿ ಉತ್ತರ ಕೊಡಬೇಕು. ಖರ್ಚಾಗಿದ್ದ ಪಟ್ಟಿಯನ್ನು ಕೊಡಬೇಕು ಎಂದು ಕಳಕಳಿಯಿಂದ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ತಾಲ್ಲೂಕು ಪಂಚಾಯಿತಿ ಮೀಟಿಂಗ್‌ನಲ್ಲಿ ಎಲ್ಲ ಡಿಪಾರ್ಟ್‌ಮೆಂಟ್ ಅಧಿಕಾರಿಗಳನ್ನು ನಾವು ಕರೆದು ಕೇಳುತ್ತೇವೆ. ಆದರೆ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳು ನಮ್ಮ ಕೈಗೆ ಸಿಗುವುದಿಲ್ಲ. ಜಿಲ್ಲಾ ಪರಿಷತ್ ಮೀಟಿಂಗ್‌ನಲ್ಲಿ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳು ಮಾತನಾಡುವುದಕ್ಕೆ ಸರಿಯಾಗಿ ಸಿಗುವುದಿಲ್ಲ. ಮೇಲಾಗಿ ಹುಡುಕಾಡುತ್ತಾ ಹೋದರೆ ನಮಗೆ ಅಧಿಕಾರಿಗಳು ಸಿಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಸಂಬಂಧಪಟ್ಟ ಶಾಸಕರಿಗೆ ರೋಡಿನ ವಿಷಯದಲ್ಲಿ ಲೆಕ್ಕಪತ್ರ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ಶಹಬಾದ್‌ನಲ್ಲಿ ಮೀಟಿಂಗ್ ಕರೆಸಿದೆ. ಆದರೆ ಅಧಿಕಾರಿಗಳು ಮೀಟಿಂಗ್‌ಗೆ ಬರಲಿಲ್ಲ. ನಮಗೆ ಒಂದು ಕಾರಣ ಹೇಳುತ್ತಾರೆ. ಎಗ್ಸಿಕ್ಯೂಟೀವ್ ಇಂಜಿನಿಯರ್ ಕರೆಸಿದ್ದರು, ಸೂಪರಿಂಟೆಂಡಿಂಗ್ ಇಂಜಿನಿಯರ್ ಮೀಟಿಂಗ್‌ಗೆ ಬಂದರು ಅಲ್ಲಿ ಬಂದರು ಇಲ್ಲಿ ಬಂದರು ಈ ಗಲಾಟೆಯಲ್ಲಿ ನಿಮಗೆ ಯಾವ ಲೆಕ್ಕಪತ್ರ ಕೊಡುವುದಕ್ಕೆ ರೆಡಿ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಲೆಕ್ಕಪತ್ರ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಕೆ.ಇ.ಬಿ. ಡಿಪಾರ್ಟ್‌ಮೆಂಟಿನಲ್ಲಿ ಅಸಿಸ್ಟೆಂಟ್ ಎಗ್ಸಿಕ್ಯುಟೀವ್ ಇಂಜಿನಿಯರ್‌ಗಳು, ಅಸಿಸ್ಟೆಂಟ್ ಇಂಜಿನಿಯರ್‌ಗಳು ಮತ್ತು ಜೂನಿಯರ್ ಎಂಜಿನಿಯರ್‌ಗಳು ಸರಿಯಾಗಿ ಕೆಲಸ ನಿರ್ವಹಣೆ ಮಾಡುವುದಿಲ್ಲ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಲ್ಲಿ ಬರತಕ್ಕ ಪರಿಜನ ಕಾಲೋನಿಗಳು, ಲಂಬಾಣಿ ತಾಂಡಾಗಳಿಗೆ ನಾಲ್ಕು ಜಿಲ್ಲೆಯಲ್ಲಿ ಶಾಸಕರು ಕೊಟ್ಟ ಲಿಸ್ಟ್‌ನಲ್ಲಿ ಸೆಲೆಕ್ಟ್ ಮಾಡಿ ಎಂದರೆ ಹಾಗೆ ಮಾಡಲಿಲ್ಲ. ಶಾಸಕರು ಕೊಡುವ ಲಿಸ್ಟೇ ಬೇರೆ, ಅವರು ಮಾಡತಕ್ಕ ಲಿಸ್ಟೇ ಬೇರೆ. ನಾವು ಪಟ್ಟಿ ಕಳುಹಿಸಿರುತ್ತೇವೆ.

ಇದು ದೊಡ್ಡ ಊರು, ದೊಡ್ಡ ತಾಂಡ, 2ನೇ ತಾಂಡಾ, ಮೂರನೇ ತಾಂಡಾ, ಟಾಪ್ ಪ್ರಿಯಾರಿಟಿ ಮೇಲೆ ಕಳುಹಿಸಿಕೊಡಿ ಎಂದು ಹೇಳಿದರೆ ನಮ್ಮ ಲಿಸ್ಟ್ ಕಳುಹಿಸುತ್ತಾರೆ. ಆದರೆ ಇಲ್ಲಿ ಬಂದನಂತರ ಬೆಂಗಳೂರಿನಿಂದ ಅಧಿಕಾರಿಗಳಿಂದಬೇರೆ ಲಿಸ್ಟ್ ಬಂದಿದೆ, ಅದರ ಪ್ರಕಾರ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಈ ರೀತಿಯ ತಾರತಮ್ಯ ಕೆ.ಇ.ಬಿ. ಡಿಪಾರ್ಟ್‌ಮೆಂಟಿನಿಂದ ಆಗುತ್ತಿದೆ. ಇದು ಆಗಬಾರದು ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮೇಲಾಗಿ ಎ.ಇ.ಇ.ಗಳು ಮತ್ತು ಜೆ.ಇ.ಗಳು ಎಕ್ಸ್‌ಟೆನ್‌ಷನ್ ಆಫ್ ಸ್ಟ್ರೀಟ್ ಲೈಟ್ ಕೇಳಿದರೆ ಆ ರೂಲ್ಸ್ ಅಡ್ಡ ಬರುತ್ತದೆ, ಈ ರೂಲ್ಸ್ ಅಡ್ಡ ಬರುತ್ತದೆ ಎಂದು ಎಕ್ಸ್‌ಟೆನ್‌ಷನ್ ಆಫ್ ಸ್ಟ್ರೀಟ್ ಲೈಟ್ಸ್ ಹಾಕುವುದಿಲ್ಲ. ಎಕ್ಸ್‌ಟೆನ್‌ಷನ್ ಆಫ್ ಸ್ಟ್ರೀಟ್ ಲೈಟ್‌ನಲ್ಲಿ ಊರಿಗೆ ಆರು ಪೋಲುಗಳನ್ನು ಹಾಕಿದರೆ ಮರುದಿವಸ ಅದನ್ನು ಕಳುವು ಮಾಡಿಕೊಂಡು ಐ.ಪಿ.ಸೆಟ್‌ಗಳಿಗೆ ಹಾಕುತ್ತಾರೆ. ಐ.ಪಿ. ಸೆಟ್ಟಗಳನ್ನು ಮೊದಲುಮಾಡುತ್ತಾರೆ. ಎಕ್ಸ್‌ಟೆನ್‌ಷನ್ ಆಫ್ ಸ್ಟ್ರೀಟ್ ಲೈಟ್ಸ್‌ಹಾಕುವುದಿಲ್ಲ. ಏತಕ್ಕೆ ಈ ತಾರತಮ್ಯ ಮಾಡುತ್ತಾರೆ? ಇನ್ನೊಂದು ಪ್ರಾಮುಖ್ಯವಾದ ವಿಷಯ. ನನ್ನ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ನಾನು ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವದಿಂದ ಮಾನ್ಯ ಇಂಧನ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಗುಲ್ಬರ್ಗ ಜಿಲ್ಲೆಯಲ್ಲಿರತಕ್ಕ ಪ್ರತಿಯೊಂದು ಊರಿನಲ್ಲಿ ಲೈನ್‌ಮನ್‌ಗಳು ಹುಡುಕಿದರೂ ಸಿಗುವುದಿಲ್ಲ. ನಮ್ಮ ಪರಿಸ್ಥಿತಿ ಈ ಮಟ್ಟಕ್ಕೆ ಬಂದುಬಿಟ್ಟಿದೆ. ಮಂಡಲ ಪಂಚಾಯಿತಿ ಪ್ರಧಾನರಾಗಲೀ ಮೆಂಬರ್ಸ್ ಆಗಲೀ ಶಾಸಕರಾಗಲೀ ಹೊಡೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಕೆ.ಇ.ಬಿ. ಲೈನ್‌ಮನ್‌ಗಳು ಒಂದು ಯೂನಿಯನ್ ಮಾಡಿಕೊಂಡು ಸ್ಟ್ರೈಕ್ ಮಾಡಿಕೊಂಡು ಆಫೀಸರನ್ನು ಹೆದರಿಸುತ್ತಾರೆ. ಆಫೀಸರ್‌ಗಳು ಲೈನ್‌ಮನ್‌ಗಳ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಸಿದ್ಧರಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏಕೆಂದರೆ ನನ್ನ ತಾಲ್ಲೂಕು ವ್ಯಾಪ್ತಿಯಲ್ಲಿ ಬರತಕ್ಕ ಶ್ರೀನಿವಾಸ ಹಳ್ಳಿಗಿ ಎಂಬ ಮಂಡಲ ಪಂಚಾಯಿತಿಯಲ್ಲಿ ಮಂಡಲ ಪ್ರಧಾನರಿಗೆ ಎಲ್ಲರೂ ಘೇರಾವೊ ಮಾಡಿದ್ದಾರೆ.

ಊರಿಗೆ ಲೈಟಿಲ್ಲ, ನೀನು ಮಂಡಲ ಪ್ರಧಾನ ಇದ್ದೀಯ, ನಮ್ಮ ಊರಿನಲ್ಲಿ ವಿದ್ಯುತ್ ಇಲ್ಲದ್ದಕ್ಕೆ ಹಿಟ್ಟಿನ ಗಿರಣಿ ಬಂದ್ ಆಗಿದೆ, ನಮಗೆ ನೀರು ಸಿಗುತ್ತಿಲ್ಲ, ಹಿಟ್ಟಿನ ಗಿರಣಿ ಬಂದ್ ಆಗಿ ನಮಗೆ ತೊಂದರೆಯಾಗುತ್ತಿದೆ, ಪ್ರಧಾನರೇ ತಾವು ಏನು ಮಾಡುತ್ತಿದ್ದೀರಿ ಎಂದು ಊರಿನ ಜನರು ಪ್ರಧಾನರಿಗೆ ಘೇರಾವೊ ಮಾಡಿದರು.

ಘೆರಾವು ಮಾಡಿದ ನಂತರ ಊರಿನ ಜನರು ಮತ್ತು ಪ್ರಧಾನರ ಮಧ್ಯೆ ಗಲಾಟೆಯಾಗಿ ಪ್ರಧಾನರಿಗೆ ಹೊಡೆತ ಬೀಳುವ ಮಟ್ಟಿಗೆ ಬಂತು. ಆಗ ಅಲ್ಲಿ ಪ್ರಧಾನರು ಕಾಂಪ್ರಮೈಸ್ ಮಾಡಿ ಎಲ್ಲಾ ಸರಿ ಮಾಡುತ್ತೇನೆ ಎಂದು ಊರಿನ ಜನರನ್ನು ಕಳುಹಿಸಿಕೊಟ್ಟರು. ಆ ನಂತರ ಆ ಊರಿಗೆ ಇಬ್ಬರು ಕೆ.ಇ.ಬಿ. ಲೈನ್‌ಮನ್‌ಗಳು ಆ ಸ್ಪಾಟ್‌ಗೆ ಬಂದರು. ಊರಿನ ಪ್ರಧಾನರು ನೀವು ಏಕೆ ಊರಿಗೆ ಬರುವುದಿಲ್ಲ ಎಂದು ಕೇಳಿದಾಗ ಅವರು ಪೋಲೀಸರಿಗೆ ಕಂಪ್ಲೇಂಟ್ ಮಾಡಿದ್ದಾರೆ. ಆಗ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಬಂದು ಪ್ರಧಾನರಿಗೆ ಒದ್ದು ಹೊರಗೆ ಹಾಕಿ ಅವರನ್ನು ಅರೆಸ್ಟ್ ಮಾಡಿದ್ದಾರೆ. ಇದರಿಂದಾಗಿ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಎಲ್ಲಾ ಪ್ರಧಾನರೂ ಬಾಯ್‌ಕಾಟ್ ಮಾಡಿದ್ದಾರೆ. ಊರಿಗೆ ಲೈನ್‌ಮೆನ್ ಏಕೆ ಬರುತ್ತಿಲ್ಲ, ಅವರು ಬರಬೇಕು ಎಂದು ಅವರು ಬಾಯ್‌ಕಾಟ್ ಮಾಡಿದ್ದಾರೆ. ನಾನೂ ಕೂಡ ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರವನ್ನು ಬರೆದು ಕೇಳಿದ್ದೇನೆ. ಆ ರೀತಿ ಕಂಪ್ಲೇಂಟ್ ಕೊಟ್ಟಿದ್ದು ಸರಿಯಿಲ್ಲ, ಅದನ್ನು ಅವರು

ವಾಪಸ್ ತೆಗೆದುಕೊಳ್ಳಲಿ. ಹಾಗೂ ಲೈನ್‌ಮೆನ್‌ಗಳನ್ನು ಸಸ್ಪೆಂಡ್ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ನಾನು ಕೆ.ಇ.ಬಿ. ಅಧಿಕಾರಿಗಳಿಗೆ ಪತ್ರ ಬರೆದರೆ ಏನೂ ರೆಸ್ಪಾನ್ಸ್ ಇಲ್ಲ. ಇವತ್ತು ಆ ಅಧಿಕಾರಿಗಳು ನಿರ್ಲಕ್ಷ್ಯ ಭಾವನೆ ವ್ಯಕ್ತ ಮಾಡಿದ್ದಾರೆ. ಈಗಲೂ ಕೂಡಾ ತಾಲ್ಲೂಕು ಪಂಚಾಯಿತಿ ಸಮಿತಿಗೆ ಯಾವ ಪ್ರಧಾನರು ಬರುತ್ತಾ ಇಲ್ಲ. ಅವರು ಬಾಯ್‌ಕಾಟ್ ಮಾಡಿರುವ ಪರಿಸ್ಥಿತಿಯಲ್ಲಿ ಹೇಗೆ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಕಾರ್ಯನಿರ್ವಹಿಸಬೇಕೆಂದು ಗೊತ್ತಾಗುತ್ತಿಲ್ಲ. ಈ ಬಗ್ಗೆ ಕೆ.ಇ.ಬಿ. ಮಂತ್ರಿಗಳು ಗಮನಹರಿಸಬೇಕು, ಪ್ರತಿಯೊಂದು ಊರಿನಲ್ಲಿ ಲೈನ್‌ಮೆನ್ ಇರುವುದಕ್ಕೆ ಏರ್ಪಾಡು ಮಾಡಬೇಕು. ಹೈದರಾಬಾದ್ ಕರ್ನಾಟಕ ಭಾಗಕ್ಕೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮತ್ತು ವಿದ್ಯುತ್ ಮಂತ್ರಿಗಳು ಮತ್ತು ಇತರೇ ಮಂತ್ರಿಗಳು ಏನು ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ ಅವುಗಳನ್ನು ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕಿಂತಲೂ ಮೊದಲು ಒಂದು ವಿಷಯವನ್ನು ಇಲ್ಲಿ ಹೇಳಬೇಕೆನ್ನಿಸುತ್ತದೆ. ಏಕೆಂದರೆ ಆ ಕಡೆಯಿಂದ ಹಲವಾರು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನು ನಾನು ನೋಡಿದೆ. ಶ್ರೀ ಡಿ.ಬಿ. ಚಂದ್ರೇಗೌಡರು ಬಹಳ ಅನುಭವಿಗಳು.

ಜೊತೆಗೆ ನನಗೆ ಅವರು ರಾಜಕೀಯವಾಗಿ ಗುರುಗಳು, ಅವರು ಮಾತನಾಡುವಾಗ ಸಾಕಷ್ಟು ಟೀಕೆ ಮಾಡಿದರು. ಹಿರಿಯರಾಗಿ, ಅನುಭವಿಗಳಾಗಿ, ಪಿ.ಡಬ್ಲ್ಯೂ.ಡಿ ಬಗ್ಗೆಯಾಗಲೀ, ಕೆ.ಇ.ಬಿ. ಬಗ್ಗೆಯಾಗಲೀ ಅಥವಾ ಭಾರಿ ನೀರಾವರಿ ಇಲಾಖೆ ಬಗ್ಗೆಯಾಗಲೀ ಉತ್ತಮವಾದ ಯಾವ ಒಂದು ಸಲಹೆಗಳನ್ನೂ ಅವರು ಕೊಡಲಿಲ್ಲ. ಹಿರಿಯ ಸದಸ್ಯರು ಮಾತನಾಡುವಾಗ ಕಿರಿಯ ಸದಸ್ಯರಾದ ನಾವು ಅವರಿಂದ ಕೇಳಿ ಕಲಿಯುವುದು ಸಾಕಷ್ಟು ಇರುತ್ತದೆ. ಅವರು ಸಲಹೆ ಸೂಚನೆ ಕೊಡುವಾಗ, ಸರ್ಕಾರದಲ್ಲಿ ಲೋಪದೋಷ ಇದ್ದರೆ ಅದನ್ನು ಹೇಗೆ ಸರಿಪಡಿಸಬೇಕೆಂದು ಅವರು ಸಲಹೆ ಕೊಟ್ಟಾಗ ಅದನ್ನು ಕೇಳಿ ತಿಳಿದುಕೊಳ್ಳುವುದು ನಮ್ಮಂಥಹವರಿಗೆ ಬೇಕಾದಷ್ಟು ಇದೆ. ಆದರೆ ಅವರು ಕೆ.ಇ.ಬಿ. ಛೇರ್ಮನ್ ಬಗ್ಗೆ ಸಾಕಷ್ಟು ಟೀಕೆ ಮಾಡಿದರು. ಹೊಸಹೊಸ ಪವರ್ ಪ್ರಾಜೆಕ್ಟ್‌ಗಳನ್ನು ಏಕೆ ಮಾಡಬಾರದು, ಕೆ.ಇ.ಬಿ. ಏಕೆ ಲಾಸ್‌ನಲ್ಲಿ ಇದೆ ಎನ್ನುವ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ. ಹೋದಸಾರಿಯ ಬಡ್ಜೆಟ್ ಭಾಷಣದ ಬಗ್ಗೆ ಚರ್ಚೆ ನಡೆಯುವ ಸಂದರ್ಭದಲ್ಲಿ ಅನಿಮಲ್ ಹಸ್ಬೆಂಡರಿ ಛೇರ್ಮನ್ ಆದ ಹನುಮಂತಪ್ಪನವರನ್ನು ಹಿಡಿದುಕೊಂಡಿದ್ದರು. ಆ ಬಗ್ಗೆ ಸಾಕಷ್ಟು ಟೀಕೆ ಮಾಡಿದರು. ನಾನು ಕಿರಿಯವಳಾಗಿ ಹೇಳುವುದು ಏನೆಂದರೆ, ಟೀಕೆ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಅದರ ಜೊತೆಗೆ ಸರ್ಕಾರದ ಲೋಪದೋಷ ಏನಾದರೂ ಇದ್ದರೆ ಅದನ್ನು ಸರಿದೂಗಿಸಿ ಹೇಗೆ ಇಲಾಖೆಗಳನ್ನು ಉತ್ತಮಪಡಿಸಬೇಕೆನ್ನುವುದರ ಬಗ್ಗೆ ಸಲಹೆ ಕೊಟ್ಟಿದ್ದರೆ ಒಳ್ಳೆಯದಿತ್ತು. ಅದು ಏನೇ ಇರಲಿ ನಾನು ಮೊದಲು ಲೋಕೋಪಯೋಗಿ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಇವತ್ತು ಈ ಇಲಾಖೆ ಬಹಳ ದೊಡ್ಡದು ಇದ್ದು ಬಹಳ ಪ್ರಮುಖವಾದ ಇಲಾಖೆ ಆಗಿದೆ. ಮಾನ್ಯ ಬನ್ನಿಕೋಡ್ ಅವರು ಏನೋ ಕಾಮೆಂಟ್ಸ್ ಮಾಡುತ್ತಿದ್ದಾರೆ. ಅದು ನನಗೆ ಕೇಳಿಸಲಿಲ್ಲ.

ಅಧ್ಯಕ್ಷರು : ಗುರುವಿಗೇ ತಿರುಮಂತ್ರ ಹೊಡೀತಾ ಇದ್ದೀರಿ ಎಂದು ಅವರು ಹೇಳಿದರು.

ಶ್ರೀಮತಿ ಮೋಟಮ್ಮ : ವಿರೋಧ ಪಕ್ಷದ ನಾಯಕರು ಈಗ ಸಭೆಯಲ್ಲಿ ಇಲ್ಲ, ಅವರು ಇದ್ದಿದ್ದರೆ ಚೆನ್ನಾಗಿತ್ತು. ಲೋಕೋಪಯೋಗಿ ಇಲಾಖೆ ಬಹಳ ಪ್ರಮುಖವಾದ ಇಲಾಖೆ. ಏಕೆಂದರೆ ಇವತ್ತು ನಮ್ಮ ಸಾರಿಗೆ ಸಂಪರ್ಕ ಉತ್ತಮವಾಗಬೇಕಾದರೆ, ಈ ಒಂದು ಇಲಾಖೆಗೆ ನಾವು ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಇವತ್ತು ರೋಡ್ಸ್ ಇಂಪ್ರೂವ್ ಮಾಡಬೇಕಾಗುತ್ತದೆ. ಆದರೆ ಈ ಇಲಾಖೆಗೆ ಇವತ್ತು ಬಡ್ಜೆಟ್‌ನಲ್ಲಿ ಕೊಟ್ಟಿರತಕ್ಕ ಹಣ ಕೇವಲ 41 ಕೋಟಿ ರೂಪಾಯಿಗಳು ಆದರೆ ಈ ಸಾರಿ, ಅವರು ಕೇಳಿದ್ದು 90 ಕೋಟಿ ರೂಪಾಯಿಗಳು.

ಈ 41 ಕೋಟಿ ರೂಪಾಯಿಗಳಲ್ಲಿ ಕಟ್ಟಡಗಳ ರಿಪೇರಿ ಮಾಡಿಸಬೇಕಾಗುತ್ತದೆ, ಅದಕ್ಕೆ ಹಣವನ್ನು ಹಾಕಬೇಕು. ರಸ್ತೆಗಳ ರಿಪೇರಿಗೆ ಹಣವನ್ನು ಹಾಕಬೇಕಾಗುತ್ತದೆ. ಆದರೆ ರಾಷ್ಟ್ರೀಯ ಹೆದ್ದಾರಿಗಳಿಗೆ ಕೇಂದ್ರಸರ್ಕಾರ ಖರ್ಚು ಮಾಡುತ್ತಿರುವುದನ್ನು ನಾವು ನೋಡಿದರೆ, ಒಂದು ಕಿಲೋಮೀಟರ್ ರಸ್ತೆಗೆ ಅವರು 33 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ಲೋಕೋಪಯೋಗಿ ಇಲಾಖೆಯವರು 1 ಕಿಲೋಮೀಟರ್ ರಸ್ತೆಗೆ 9 ಸಾವಿರ ರೂಪಾಯಗಳನ್ನು ಮಾತ್ರ ಖರ್ಚು ಮಾಡುತ್ತಾರೆ. ಎಲ್ಲ ರಸ್ತೆಗಳು ಒಂದೇ. ಈಗ ನಾವು ಹಾಸನ-ಮಂಗಳೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಿದ್ದೇವೆ. ಅಲ್ಲಿ ವಾಹನಗಳ ಸಂಚಾರ ಎಷ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ಕಡೂರು ಮಂಗಳೂರು ರಸ್ತೆಯಲ್ಲಿ ಹೆಚ್ಚು ವಾಹನ ಸಂಚಾರವಿದೆ. ಆದರೆ ಇಲ್ಲಿ ರಸ್ತೆ ಬಹಳ ಉತ್ತಮವಾಗಿದೆ. ಏತಕ್ಕೆ ಉತ್ತಮವಾಗಿದೆಯೆಂದರೆ ಅವರು ನಾಲ್ಕು ಇಂಚು ಜಲ್ಲಿ ಹಾಕಿ ಆಮೇಲೆ ಡಾಮರು ಹಾಕುತ್ತಾರೆ. ನಮ್ಮಲ್ಲಿ ಜಲ್ಲಿ ಒಂದು ಇಂಚು ಸಹ ಇರುವುದಿಲ್ಲ. ಒಂದು ಇಂಚು ಜಲ್ಲಿ ಹಾಕಿ ಡಾಮರು ಹಾಕಿದರೆ ಸರಿ, ಆದರೆ ಆ ಕೆಲಸ ಸಹ ನಮ್ಮಲ್ಲಿ ಸರಿಯಾಗಿ ಮಾಡುವುದಿಲ್ಲ. ಹಾಗೆ ಮಾಡದಿರುವುದರಿಂದ ಮಳೆಗಾಲದಲ್ಲಿ ರಸ್ತೆಗಳೆಲ್ಲ ಕೊಚ್ಚಿಕೊಂಡು ಹೋಗುತ್ತವೆ. ಈ ವರ್ಷ ಜಲ್ಲಿ ಹಾಕಿ ಮುಂದಿನ ವರ್ಷ ಡಾಮರು ಹಾಕಿದರೆ ಆ ಜಲ್ಲಿ ಎಲ್ಲಿರುತ್ತದೆ?

ಅದೆಲ್ಲ ಕೊಚ್ಚಿಕೊಂಡು ಹೋಗಿರುತ್ತದೆ. ಮಾನ್ಯ ಅಧ್ಯಕ್ಷರಿಗೆ ನಮ್ಮ ಭಾಗದ ಪರಿಸ್ಥಿತಿ ಚೆನ್ನಾಗಿ ಗೊತ್ತು. ಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳಿಗೆ ಒಂದೇ ಪ್ರಮಾಣದಲ್ಲಿ ಹಣವನ್ನು ಕೊಡುತ್ತಾರೆ. ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ಇವತ್ತು ರಸ್ತೆಗಳು ನಿಜವಾಗಿಯೂ ಚೆನ್ನಾಗಿ ಇರಬೇಕಾದರೆ ಒಂದು ಕಿಲೋಮೀಟರ್ ರಸ್ತೆಗೆ ಜಲ್ಲಿ ಹಾಕಿದ ತಕ್ಷಣ ಡಾಮರು ಹಾಕಿದರೆ ಮಾತ್ರ ಆ ರಸ್ತೆಗಳನ್ನು ಎರಡು-ಮೂರು ವರ್ಷಗಳು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿ ವರ್ಷ ಒಂದು ಕಿಲೋಮೀಟರ್ ರಸ್ತೆಗೆ ಜಲ್ಲಿ ಹಾಕಿ, ಇನ್ನೊಂದು ಕಿಲೋಮೀಟರ್ ರಸ್ತೆಗೆ ಡಾಮರು ಹಾಕಿದರೆ ಮುಂದಿನ ವರ್ಷಕ್ಕೆ ಜಲ್ಲಿ ಹಾಕಿದ ರಸ್ತೆ ಇರುವುದಿಲ್ಲ, ರಸ್ತೆಯೆಲ್ಲಾ ಅದ್ವಾನವಾಗಿರುತ್ತವೆ. ಅದಕ್ಕೆ ಆಸ್ಪದ ಕೊಡಬಾರದು. ಪಕ್ಕಾ ರಸ್ತೆಯನ್ನು ಮಾಡುವುದಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡಿಯೆಂದು ಹೇಳುತ್ತೇನೆ. ಲೋಕೋಪಯೋಗಿ ಇಲಾಖೆ ತೆಗೆದುಕೊಂಡರೂ ಸಹ ಮಲೆನಾಡು ಪ್ರದೇಶಗಳಲ್ಲಿರತಕ್ಕ ಆ ರಸ್ತೆಗಳಿಗೆ ಡಾಮರು ಹಾಕುವ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದರಲ್ಲೂ ಲೋಕೋಪಯೋಗಿ ಇಲಾಖೆಯ ಕಟ್ಟಡಗಳ ಬಗ್ಗೆ ಹೇಳಬೇಕಾದರೆ, ನಾನು ಹಿಂದೆ ಆರೋಗ್ಯ ಇಲಾಖೆಯ ಕಟ್ಟಡಗಳ ಬಗ್ಗೆ

ಶಾಸನಸಭೆಯಲ್ಲಿ ಹೇಳಿದ್ದೇನೆ. ಆರೋಗ್ಯ ಇಲಾಖೆಯ ಕಟ್ಟಡಗಳು ಅನಾರೋಗ್ಯದಿಂದ ನರಳುತ್ತಿವೆ ಎಂದು ಹೇಳಿದ್ದೇನೆ. ಯಾವತ್ತು ಆ ಕಟ್ಟಡಗಳು ಕುಸಿದು ಡಾಕ್ಟರುಗಳ ಮೇಲೆ ಮತ್ತು ಅಲ್ಲಿರತಕ್ಕ ಸಿಬ್ಬಂದಿಯ ಮೇಲೆ ಮತ್ತು ರೋಗಿಗಳ ಮೇಲೆ ಬಿದ್ದು ಅಪಘಾತವಾಗುವ ಸಂದರ್ಭ ಒದಗುತ್ತದೋ ಗೊತ್ತಿಲ್ಲ. ನಮ್ಮಲ್ಲಿ ಮಲೆನಾಡಿನಲ್ಲಿ ಕಟ್ಟಡಗಳನ್ನು ನೋಡುವಹಾಗೆ ಇಲ್ಲ. ಲೋಕೋಪಯೋಗಿ ಇಲಾಖೆಯ ವಶದಲ್ಲಿರುವ ಕಟ್ಟಡಗಳ ಮೇಲೆ ಹುಲ್ಲು ಬೆಳೆದಿದೆ, ಗಿಡಗಳು ಬೆಳೆದಿವೆ. ನಿಜಕ್ಕೂ ಆ ಕಟ್ಟಡಗಳಲ್ಲಿ ಜನರು ಹೇಗೆ ವಾಸ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ. ಅಂತಹ ವರ್ಸ್ಟ್ ಕಂಡೀಷನ್ ಇದೆ. ಅದರ ರಿಪೇರಿಗೆ ಎಷ್ಟು ದುಡ್ಡು ಕೊಟ್ಟಿದ್ದಾರೆ? 15 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಈರೀತಿ ಹಣವನ್ನು ಕೊಟ್ಟರೆ ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ಕಟ್ಟಡಗಳ ರಿಪೇರಿಗಾಗಿ ಇಟ್ಟಿರತಕ್ಕ ಹಣ ಸಾಲದು. ಕಟ್ಟಡಗಳು ಅಂದರೆ ಈ ಆರೋಗ್ಯ ಇಲಾಖೆಯ ಕಟ್ಟಡಗಳು ಹಾಗೂ ಇತರೆ ಎಲ್ಲ ಇಲಾಖೆಗಳ ಕಟ್ಟಡಗಳು ಬರುತ್ತವೆ. ಅವುಗಳನ್ನು ವರ್ಷಕ್ಕೊಮ್ಮೆಯಾದರೂ ರಿಪೇರಿ ಮಾಡದಿದ್ದರೆ ಆ ಕಟ್ಟಡಗಳನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಟ್ಟಡಗಳ ಬಗ್ಗೆ ಮಾನ್ಯ ರಾಮಸ್ವಾಮಿಯವರು ಮಾತನಾಡುತ್ತಾ ಈ ವರ್ಷ ಕಟ್ಟಿದ ಕಟ್ಟಡಗಳು ಮುಂದಿನ ವರ್ಷ ಬಿದ್ದುಹೋಗುತ್ತಿವೆಂದು ಹೇಳಿದರು. ಅಂತಹ ಕೆಲಸವನ್ನು ಕಾಮಗಾರಿ ಇಲಾಖೆಯವರು ಮಾಡುತ್ತಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಶಾಲಾಕಾಲೇಜುಗಳ ಕಟ್ಟಡಗಳು ಸಾಕಷ್ಟು ಬಿದ್ದುಹೋಗಿವೆ. ಕಾರಣ ಅವುಗಳ ಗುಣಮಟ್ಟ ಕಳಪೆ ಮಟ್ಟದ್ದು ಇರುತ್ತದೆ. ಅದಕ್ಕಾಗಿ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಅದರಲ್ಲೂ ಈ ಸಾರಿ ನಮ್ಮ ಭಾಗದಲ್ಲಿ 100 ಇಂಚು ಮಳೆಯಾಗಿದೆ. ಆ ಮಳೆಯಿಂದ ಸಾಕಷ್ಟು ಕಟ್ಟಡಗಳು ಬಿದ್ದುಹೋಗಿವೆ. ರಸ್ತೆಗಳು ತೊಳೆದು ಹೋಗಿವೆ. ಶಿರಾಡಿ ಘಾಟ್ ಮತ್ತು ಚಾರ್ಮುಡಿ ಘಾಟ್‌ನಲ್ಲಿ ಪೂರ್ತ ರಸ್ತೆಗಳು ಕುಸಿದಿದೆ. ಘಾಟ್ ರಸ್ತೆಗಳಲ್ಲಿ ಅರ್ಧಕರ್ಧ ಗುಡ್ಡಗಳು ಕುಸಿದು ರಸ್ತೆಯ ಮಧ್ಯ ಭಾಗದಲ್ಲಿ ಕೂತಿದೆ. ತಾವು ಕೊಡುವ ಹಣ ಯಾವುದಕ್ಕೂ ಸಾಲುವುದಿಲ್ಲ. ಈಗ ನೀವು ಕೊಡುತ್ತಿರುವ ಹಣ "ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ" ತರಹ ಆಗಿದೆ. ಆದ್ದರಿಂದ ಹೆಚ್ಚು ಹಣವನ್ನು ಕೊಟ್ಟು ರಸ್ತೆ ರಿಪೇರಿ ಮಾಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಜೊತೆಗೆ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಮತ್ತು ಕಟ್ಟಡಗಳನ್ನು ಉತ್ತಮಪಡಿಸುವುದಕ್ಕೆ ಉತ್ತಮವಾದ ದಾರಿ ಇದೆ. ಕೇಂದ್ರಸರ್ಕಾರದಿಂದ ಸಿ.ಆರ್.ಎಫ್. ಫಂಡ್ ಎಂದು ಬರುತ್ತದೆ. ಅದು ಕಳೆದ ಮೂರು ವರ್ಷಗಳಿಂದ ನಮ್ಮ ರಾಜ್ಯಕ್ಕೆ ಬಂದಿಲ್ಲ. ಅದರಲ್ಲಿ ಸುಮಾರು 45 ಕೋಟಿ ರೂಪಾಯಿ ಬಾಕಿ ಬರುವುದಿದೆ. ಆ ಹಣವನ್ನು ಪಡೆಯಲಿಕ್ಕೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಬಾಕಿ ಬರತಕ್ಕ ಈ 45 ಕೋಟಿ ರೂಪಾಯಿ ಹಣವನ್ನು ತಂದದ್ದೆ ಆದರೆ, ಸಿ.ಆರ್.ಎಫ್ ಫಂಡ್‌ನಲ್ಲಿ ರೆಕಮಂಡ್ ಆಗಿರುವ ರಸ್ತೆಗಳನ್ನಾಗಲೀ ಬ್ರಿಡ್ಜ್‌ಗಳನ್ನಾಗಲೀ ರಿಪೇರಿ ಮಾಡುವುದಕ್ಕೆ ಸಾಧ್ಯತೆ ಆಗುತ್ತದೆ. ಹಾಗೆಯೇ ಇನ್ನೊಂದು ಮುಖ್ಯವಾದ ಸಂಗತಿ ಏನೆಂದರೆ ಎಲ್ಲರೂ ಕೂಡ ಇಂಜಿನಿಯರ್‌ಗಳ ಬಗ್ಗೆ ಕಂಟ್ರಾಕ್ಟರುಗಳ ಬಗ್ಗೆ ಮಾತನಾಡುತ್ತಾ ಪರ್ಸೆಂಟೇಜ್ ಬಗ್ಗೆ ಮಾತನಾಡಿದರು. ಅದನ್ನು ತಾವು ತಪ್ಪಿಸುವುದಕ್ಕೆ ವಿಚಾರ ಮಾಡಬೇಕು. ಒಳ್ಳೆಯ ಕೆಲಸ ಮಾಡುವವರಿಗೆ ಪ್ರೋತ್ಸಾಹ ಮಾಡಿದ್ದೇ ಆದರೆ ಈ ಕರಪ್ಷನ್ ಕಡೆಗೆ ಯಾರೂ ಹೋಗುವುದಿಲ್ಲವೆಂದು ನನಗನಿಸುತ್ತದೆ. ಉತ್ತಮ ಕೆಲಸ ಮಾಡುವ

ಇಂಜಿನಿಯರ್‌ಗಳು ಎಲ್ಲಿದ್ದರೂ ಅವರಿಗೆ ಅವಾರ್ಡ್ ಕೊಟ್ಟಿದ್ದೆ ಆದರೆ ಅವರು ಅವಾರ್ಡ್‌ಗಾದರೂ ತಲೆಬಾಗಿ ಒಳ್ಳೆಯ ಕೆಲಸ ಮಾಡುತ್ತಾರೆ. ಲಂಚಕ್ಕಿಂತ ಹೆಚ್ಚಾಗಿ ನಮಗೆ ಅವಾರ್ಡ್ ಸಿಗುತ್ತದೆನ್ನುವ ಭಾವನೆಯಿಂದ ಒಳ್ಳೆಯ ಕೆಲಸ ಮಾಡುತ್ತಾರೆ.

ಅಂತಹ ಒಂದು ಉತ್ತಮವಾದ ಕೆಲಸವನ್ನು ಏಕೆ ನಮ್ಮ ಲೋಕೋಪಯೋಗಿ ಮಂತ್ರಿಗಳು ಮಾಡಬಾರದು ಅಥವಾ ಸರ್ಕಾರವಾದರೂ ಏತಕ್ಕೆ ಯೋಚನೆ ಮಾಡಬಾರದು? ಏಕೆಂದರೆ ಇವತ್ತಷ್ಟೇ ನಾನು ತಿಳಿದುಕೊಂಡೆ. ಏನೆಂದರೆ ಕುಮಾರಿ ಜಯಲಲಿತಾ ಅವರು ತಮಿಳುನಾಡಿನಲ್ಲಿ ಮುಖ್ಯಮಂತ್ರಿಯಾಗಿ ಬಂದಮೇಲೆ ಇವತ್ತು ಇಂಜಿನಿಯರುಗಳಿಗೆ ಈ ಅವಾರ್ಡ್‌ಗಳನ್ನು ಕೊಟ್ಟಿದ್ದಾರೆ. in recognition of their meritorious services ಅಂತ ಹೇಳಿ ಕೊಡುತ್ತಿದ್ದಾರೆ. ಹಾಗೆ ನಮ್ಮಲ್ಲಿ ಸಹ ಸರ್ ಎಂ. ವಿಶ್ವೇಶ್ವರಯ್ಯ ಅವರ ಹೆಸರಿನಲ್ಲಿ ಉತ್ತಮ ಸೇವೆ ಸಲ್ಲಿಸಿದ ಇಂಜಿನಿಯರುಗಳಿಗೆ ನೀವು ಅವಾರ್ಡ್ಸ್‌ನ್ನು ಇಂಟ್ರೊಡ್ಯೂಸ್ ಮಾಡಿದರೆ ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ನಿಜವಾಗಿಯೂ ಕರಪ್‌ಶನ್ ಕಡಿಮೆ ಆಗಬಹುದೋ ಏನೋ ಎಂದು ನನ್ನ ಒಂದು ಸಲಹೆ. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಗುಣಕ್ಕೆ ಮತ್ಸರ ಇರಬಾರದು. ಒಳ್ಳೆಯ ಕೆಲಸ ಮಾಡುವವರ ಬೆನ್ನು ತಟ್ಟೋಣ. ಇದರಲ್ಲಿ ತಪ್ಪೇನು ಆಗುತ್ತದೆ? ಹಾಗೆ ಮಾಡುವುದರಿಂದ ಅವರು ದಾರಿತಪ್ಪುತ್ತಾರೆ ಎಂದು ಹೇಳುವುದು ತಪ್ಪು. ಇಷ್ಟಕ್ಕೆ ನಾನು ಈ ಇಲಾಖೆ ಬಗ್ಗೆ ಹೇಳುವುದನ್ನ ಸೀಮಿತಗೊಳಿಸಿ ಇನ್ನು ಕೆ.ಇ.ಬಿ. ಬಗ್ಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೆ.ಇ.ಬಿ. ಬಗ್ಗೆ ಇದರ ಲೋಪದೋಷಗಳ ಬಗ್ಗೆ ಮಾತನಾಡಿದರು. ಆದರೆ ಕೆ.ಇ.ಬಿ. ಅನ್ನು ಯಾವರೀತಿ ಇಂಪ್ರೂವ್ ಮಾಡಬೇಕು, ಇದು ಯಾಕೆ ಲಾಸ್‌ನಲ್ಲಿ ನಡೆಯುತ್ತಿದೆ ಎನ್ನುವ ಬಗ್ಗೆ ಹೆಚ್ಚಿಗೆ ಯಾರೂ ಹೇಳಲಿಲ್ಲ. ಇವತ್ತು ಆಂಧ್ರಪ್ರದೇಶದಲ್ಲಿರುವ ವಿದ್ಯುಚ್ಛಕ್ತಿ ಮಂಡಳಿಯನ್ನು ನಮಗೆ ಹೋಲಿಸಿದರೆ ಅದು ಸುಧಾರಿಸಿದ ಮಟ್ಟದಲ್ಲಿದೆ. ಹಾಗೆಯೇ ಕೇರಳದಲ್ಲಿ ಸಹ ಸುಧಾರಿಸಿದ ಮಟ್ಟದಲ್ಲಿದೆ. ಆ ಮಟ್ಟಕ್ಕೆ ನಮ್ಮ ವಿದ್ಯುಚ್ಛಕ್ತಿ ಮಂಡಳಿಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು. ಹೊಸದಾಗಿ ಬೇದ್ತಿ ಅಂತಹ ಕೆಲವು ಪ್ರಾಜೆಕ್ಟ್‌ನ್ನು ನಾವು ಕಾರ್ಯಗತಕ್ಕೆ ತಂದಿದ್ದೇ ಆದರೆ ಕೆ.ಇ.ಬಿ.ಯಲ್ಲಿರುವ ಆರ್ಥಿಕ ಕೊರತೆ ಅಥವಾ

ನಷ್ಟ ಏನಿದೆ, ಅದನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಏನು ಹೇಳಬೇಕು ಎಂದರೆ, ಇದರಲ್ಲಿ ಆಡಳಿತ ದೋಷವೂ ಇದೆಯೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಕೆ.ಇ.ಬಿ.ಯ ನೌಕರರ ಯೂನಿಯನ್ ಇಂದು ಬೃಹದಾಕಾರವಾಗಿ ಬೆಳೆದುಬಿಟ್ಟು ಅದು ಇಡೀ ಅಡ್ಮಿನಿಸ್ಟ್ರೇಶನ್ ಅನ್ನು ಕಂಟ್ರೋಲ್ ಮಾಡುತ್ತಿದೆ. ಕೆ.ಇ.ಬಿ.ಯ ಚೇರಮನ್‌ರಾಗಲೀ ಅಥವಾ ಮುಖ್ಯ ಇಂಜಿನಿಯರ್ ಅವರೇ ಆಗಲಿ, ಈ ಯೂನಿಯನ್ನಿನ ಪದಾಧಿಕಾರಿಗಳು ಏನಿದ್ದಾರೆ, ಅವರು ಹೇಳಿದ ಹಾಗೆ ಮಾಡಬೇಕಾಗುತ್ತದೆಂಬುದು ನನ್ನ ಅನುಭವಕ್ಕೆ ಬಂದ ವಿಷಯ ಸುಮಾರು 15-20 ವರ್ಷಗಳಿಂದ ಒಂದೇ ಕಡೆ ಕೆ.ಇ.ಬಿ.ಯಲ್ಲಿ ಲೈನ್‌ಮನ್‌ಗಳಾಗಿ ಕೆಲಸ ಮಾಡಿದವರನ್ನು ಟ್ರಾನ್ಸ್‌ಫರ್ ಮಾಡುತ್ತಿಲ್ಲ. ಅವರೆಲ್ಲ ಯೂನಿಯನ್ ಮೆಂಬರ್ಸ್ ಅಂತೆ. ಹಾಗೆನೇ ಜಿಲ್ಲಾಮಟ್ಟದಲ್ಲಿ ಯೂನಿಯನ್ ಮೆಂಬರ್ಸ್ ಇದ್ದಾರೆ. ಅವರಿಗೆ ಟ್ರಾನ್ಸ್‌ಫರ್ಸ್ ಇಲ್ಲ. ಹಾಗೆಯೇ ರಾಜ್ಯಮಟ್ಟದಲ್ಲಿ ಯೂನಿಯನ್ ಮೆಂಬರ್ಸ್ ಇದ್ದಾರೆ. ಅವರಿಗೂ ಸಹ ಟ್ರಾನ್ಸಫರ್ಸ್ ಇಲ್ಲ. ಅವರೇನು ಮೇಲಿನಿಂದ ಇಳಿದು ಬಂದವರಾ? ಇವರನ್ನು ಏಕೆ ಟ್ರಾನ್ಸಫರ್ ಮಾಡಬಾರದು? ಇವರು ತಪ್ಪು ಮಾಡಿದ್ದರೆ, ಇವರಿಗೂ ಸಹ ಟ್ರಾನ್ಸಫರ್ ಆಗಬೇಕು. ಇವರನ್ನು ಕೂಡ ಬೇರೆ ಬೇರೆ ಕಡೆಗಳಿಗೆ ವರ್ಗಾವಣೆ ಮಾಡಿ. ಈ ಯೂನಿಯನ್‌ನವರು ನೌಕರರ ಸಮಸ್ಯೆಗಳು ಏನಿವೆ, ಅವುಗಳ ಬಗ್ಗೆ

ಫೈಟ್ ಮಾಡಬೇಕೇ ವಿನಹ ಕೆ.ಇ.ಬಿ.ಯನ್ನೇ ಕಂಟ್ರೋಲ್ ಮಾಡುವುದರಲ್ಲಿ ಅರ್ಥ ಇಲ್ಲಿ ಇವರುಗಳು ಕೆ.ಇ.ಬಿ. ಆಡಳಿತ ವ್ಯವಹಾರದಲ್ಲಿ ಕೈಹಾಕಿ ಈ ಇಂಜಿನಿಯರ್‌ನ್ನು ಅಲ್ಲಿ ಹಾಕಿ, ಆ ಇಂಜಿನಿಯರ್‌ನ್ನು ಇಲ್ಲಿ ಹಾಕಿ ಎಂದು ಹೇಳಿ ಆ ಇಂಜಿನಿಯರುಗಳ ಜೊತೆಗೆ ಶಾಮೀಲಾಗಿ ಈ ಯೂನಿಯನ್‌ನವರು ತುಂಬಾ ಮಿಸ್‌ಗೈಡ್ ಮಾಡುತ್ತಿದ್ದಾರೆ. ಇದು ಆಗಬಾರದು. ಇದನ್ನು ನಾನು ಶ್ರೀ ರಾಮಪ್ಪನವರಿಗೆ ಎರಡು-ಮೂರು ಸಲ ಹೇಳಿದೆ. ಶ್ರೀ ರಾಮಪ್ಪನವರೇ, ಇದಕ್ಕೆ ನೀವೇ ಸರಿಯಾದ ಜನ ಆಗುತ್ತೀರಿ ಎಂದು ಹೇಳಿದೆ. ಏನಾದರೂ ಮಾಡಿ ನೀವು ಈ ಯೂನಿಯನ್ ಅನ್ನು ಕಂಟ್ರೋಲ್ ಮಾಡಬೇಕು, ಇದನ್ನು ಸರಿಯಾಗಿ ಕಂಟ್ರೋಲ್ ಮಾಡಿ ಕೆ.ಇ.ಬಿ. ಆಡಳಿತವನ್ನು ಸರಿಮಾಡಬೇಕು ಎನ್ನುವ ಮಾತನ್ನು ನಾನು ಅವರಿಗೆ ಹೇಳಿದ್ದೆ. ಈ ಯೂನಿಯನ್‌ನವರು ಹೇಗೆ ಆಡಳಿತದಲ್ಲಿ ಇಂಟರ್‌ಫಿಯರ್ ಆಗುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಶ್ರೀ ಡಿ. ಅಣ್ಣಪ್ಪ ಎನ್ನುವ ಒಬ್ಬ ಜೂನಿಯರ್ ಇಂಜಿನಿಯರ್ ಸಿಂಧನೂರಿನಲ್ಲಿದ್ದರು. ಅವರನ್ನು ಚಿಕ್ಕಮಗಳೂರಿಗೆ ವರ್ಗಾವಣೆ ಮಾಡಿದರು. ನನ್ನ ತಾಲ್ಲೂಕಿನ ಕಳಸದಲ್ಲಿ ಒಂದು ಓ ಅಂಡ್ ಎಂ ಸೆಕ್ಷನ್ ಖಾಲಿ ಇತ್ತು. ಅವರನ್ನು ಅಲ್ಲಿಗೆ ಹಾಕಿಕೊಡಿ ಅಂತ ಹೇಳಿದೆ. ಏಕೆಂದರೆ ಅಲ್ಲಿ ಶ್ರೀ ಶಂಕರರಾವ್ ಅಂತ ಆರೇಳು ವರ್ಷಗಳಿಂದ ಇದ್ದರು. ಅವರು ಜಾಗಕ್ಕೆ ಹಾಕಿಕೊಡಿ ಅಂತ ಹೇಳಿ ನಾನು ಆರ್ಡರ್ ಮಾಡಿಸಿದೆ. ಅದಕ್ಕೆ ಮೊದಲು ಕಳಸಾದ ಜನರಿಂದ ಪ್ರೆಶರ್ ಬಂತು. ಏನೆಂದರೆ, ಇಲ್ಲಿಂದ ಶಂಕರರಾವ್ ಹೋದಮೇಲೆ, ಅಲ್ಲಿ ಇನ್ನೊಬ್ಬ ವ್ಯಕ್ತಿ ವೀರಭದ್ರಪ್ಪ ಅಂತ ಇದ್ದಾರೆ, ನೀವು ಅವರನ್ನು ಹಾಕಿಕೊಡಿ ಅಂತ. ನಾನು ಕೆ.ಇ.ಬಿ. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಫೋನ್ ಮಾಡಿದೆ, ಈ ವ್ಯಕ್ತಿಯನ್ನು ಹಾಕಿಕೊಡಿ ಅಂತ. ಅವರು ನನ್ನ ಹತ್ತಿರ ಹೇಳಿದರು, ಇಲ್ಲಿ ಅವರ ಬಗ್ಗೆ ಸಾಕಷ್ಟು ಕಂಪ್ಲೇಂಟ್ಸ್ ಇದೆ. ಅವರು ಸರಿಯಿಲ್ಲ, ಕುಡಿತದ ಚಟಕ್ಕೆ ಬಲಿಯಾಗಿದ್ದಾರೆ, ಅಂತಹವರನ್ನು ಹಾಕುವುದು ಸರಿಯಾಗುವುದಿಲ್ಲ, ಯೂನಿಯನ್‌ನವರು ಸಹ ವಿರೋಧ ಮಾಡುತ್ತಿದ್ದಾರೆ ಎಂದು ಹೇಳಿದರು. ಸರಿ ಹಾಗಿದ್ದರೆ ಬಿಟ್ಟುಬಿಡಿ ಎಂದು ನಾನು ಹೇಳಿದೆ. ಈ ಅಣ್ಣಪ್ಪ ಎನ್ನುವವರು ಟ್ರಾನ್ಸ್‌ಫರ್ ಆದಮೇಲೆ ಇಲ್ಲಿಗೆ ಹಾಕಿಕೊಟ್ಟರೆ ಅವರು ಯುವಕರು ಇದ್ದಾರೆ, ಹೊಸದಾಗಿ ಬಂದಿದ್ದಾರೆ ಹಾಕಿಕೊಡಿ ಎಂದು ಹೇಳಿದರೆ ಇಲ್ಲಿಂದ ಸಿ.ಎ. ಜನರಲ್‌ನಿಂದ 30.4.91ರಂದು ಹೋಗಿದೆ. ಅಷ್ಟರೊಳಗೆ ಯೂನಿಯನ್‌ನವರು ವೀರಭದ್ರಪ್ಪನವರನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಇ.ಬಿ.ಅವರ ಹತ್ತಿರ ಹಿಡಿದುಕೊಂಡು ಹೋಗಿದ್ದಾರೆ.

ವೀರಭದ್ರಪ್ಪನವರು ಒಬ್ಬ ಜೆ.ಇ. ಒಂದು ದಿನದಲ್ಲಿ ಹೇಗೆ ಸುಧಾರಿಸಿದ, ಹೇಗೆ ಸರಿ ಆದ. ಅಷ್ಟರೊಳಗೆ ಅವರನ್ನು ಕಳಸಕ್ಕೆ ಪೋಸ್ಟಿಂಗ್ ಮಾಡಿದ್ದಾರೆ. ಇಲ್ಲಿಂದ ಆರ್ಡರ್ಸ್ ಹೋಗಬೇಕಾದರೆ, ವೀರಭದ್ರಪ್ಪನನ್ನು ಸಂಜೆ ಹೊತ್ತಿಗೆ ಪೋಸ್ಟಿಂಗ್ ಕೊಟ್ಟಿದ್ದಾರೆ. ನಾನು ಮತ್ತೆ ಹೋಗಿ ಚೀಫ್ ಇಂಜಿನಿಯರ್‌ಗೆ ಫೋನ್ ಮಾಡಿದೆ. ಈ ರೀತಿ ನಿಮ್ಮ ಆರ್ಡರ್ ಅನ್ನು ಓವರ್ ಲುಕ್ ಮಾಡಿ, ಎಕ್ಸಿಕ್ಯುಟಿವ್ ಇಂಜಿನಿಯರ್ ಅವರೇ ತೀರ್ಮಾನ ತೆಗೆದುಕೊಂಡಿರುವುದು ತಪ್ಪಲ್ಲವೇ, ಇದನ್ನು ನೀವು ಪ್ರಶ್ನೆ ಮಾಡಬೇಕು ಎಂದು ಹೇಳಿದೆ. ಅದಕ್ಕೆ,ಅವರು ಸಾಮಾನ್ಯ ವರ್ಗಾವಣೆಯಲ್ಲಿ ಸರಿ ಮಾಡುವ ಎಂದು ಹೇಳಿದರು. ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಯೂನಿಯನ್‌ನಿಂದ ಒತ್ತಾಯ ಬಂದು ಹಾಕಿದ್ದಾರೆ. ಅವರು ನಮ್ಮ ಕೈಗೆ ಸಿಕ್ಕೇ ಸಿಕ್ಕುತ್ತಾರೆ, ಮತ್ತೆ ಅವರಿಗೆ ಶಿಕ್ಷೆ ಕೊಡುತ್ತೇವೆಂದು ಹೇಳಿದರು. ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಯೂನಿಯನ್‌ನಿಂದ ಒತ್ತಾಯ ಬಂದು ಹಾಕಿದ್ದಾರೆ. ಅವರು ನಮ್ಮ ಕೈಗೆ ಸಿಕ್ಕೇ ಸಿಕ್ಕುತ್ತಾರೆ, ಮತ್ತೆ ಅವರಿಗೆ ಶಿಕ್ಷೆ ಕೊಡುತ್ತೇವೆಂದು ಹೇಳಿದರು. ಈ ರೀತಿ

ಯೂನಿಯನ್‌ನವರು ಆಡಳಿತದಲ್ಲಿ ಹೇಗೆ ಭಾಗಿಯಾಗುತ್ತಾರೆ ಎನ್ನುವುದಕ್ಕೆ ಇದನ್ನು ಹೇಳಿದೆ. ಅಧಿಕಾರಿಗಳನ್ನು ಇವರು ಹೇಗೆ ಕಂಟ್ರೋಲ್ ಮಾಡುತ್ತಾರೆ ಎಂದು ಹೇಳಿದೆ. ಮಾನ್ಯ ಐನಾಪುರ್‌ರವರು ಹೇಳಿದಹಾಗೆ, ಒಬ್ಬ ಲೈನ್‌ಮನ್ ಅನ್ನು ಒಂದು ಮಂಡಲದವರು ಕಂಟ್ರೋಲ್ ಮಾಡುವಂತಿಲ್ಲ. ಅವರು ಯಾವಾಗಲೋ ಬರುತ್ತಾರೆ, ಯಾವಾಗಲೋ ಹೋಗುತ್ತಾರೆ. ಅದರಲ್ಲೂ ಮಲೆನಾಡಿನಲ್ಲಿ, ಟ್ರಾನ್ಸ್‌ಫಾರ್ಮರ್ ಇವತ್ತು ಸರಿ ಇರುತ್ತದೆ, ನಾಳೆ ಸುಟ್ಟುಹೋಗುತ್ತದೆ. ಇವತ್ತು ಕಂಬ ಸರಿ ಇರುತ್ತದೆ, ನಾಳೆ ಬಿದ್ದುಹೋಗಿರುತ್ತದೆ. ಇಂತಹ ಸಮಸ್ಯೆಗಳು ನಮ್ಮ ಭಾಗದ ಮೂಲೆ ಮೂಲೆಯಲ್ಲಿ ಇರುತ್ತದೆ. ಆಗ ಯಾವ ಲೈನ್‌ಮನ್ ಸಹ ಹೋಗಿ ಅಟೆಂಡ್ ಮಾಡುವುದಿಲ್ಲ. ವಾರಗಟ್ಟಲೆ, ಟ್ರಾನ್ಸ್‌ಫಾರ್ಮರ್ ಸುಟ್ಟುಹೋದರೂ ಅಟೆಂಡ್ ಮಾಡುವುದಿಲ್ಲ. ಏಕೆಂದರೆ ಅವರ ಮೇಲೆ, ಯಾರ ಕಂಟ್ರೋಲ್ ಸಹ ಇಲ್ಲ. ನಾನು ಸಾಕಷ್ಟು ಸಾರಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರಿಗೆ ಹೇಳಿದ್ದೇನೆ. ಲೈನ್‌ಮನ್‌ಗಳು ಏನಿದ್ದಾರೆ. ಅವರು ಪ್ರತಿ ವಾರಕ್ಕೊಮ್ಮೆ ಮಂಡಲಕ್ಕೆ ಭೇಟಿ ಕೊಡಬೇಕು,

ಕೆ.ಇ.ಬಿ.ಗೆ ಸಂಬಂಧಪಟ್ಟಂತೆ ಏನೇನು ತೊಂದರೆಗಳು ಇವೆ. ಅವುಗಳನ್ನು ಅಟೆಂಡ್ ಮಾಡಬೇಕು. ಇದರ ಬಗ್ಗೆ ಏನೇನು ದಾಖಲಾತಿಗಳು ಇವೆ, ಅವುಗಳನ್ನು ಒದಗಿಸಿಕೊಡಿ ಎಂದು ಕೇಳಿದೆ. ಆದರೆ, ಅವರು ಇದುವರೆಗೂ ಈ ಕೆಲಸವನ್ನು ಮಾಡುವುದಕ್ಕಾಗಿಲ್ಲ. ಒಬ್ಬ ಲೈನ್‌ಮನ್ . ಅನ್ನು ಕೂಡ ಅವರ ಕೈಯಲ್ಲಿ ಕಂಟ್ರೋಲ್ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ ತಮ್ಮ ಮೂಲಕ ಕಳಕಳಿಯ ಮನವಿ ಏನೆಂದರೆ, ಈ ಯೂನಿಯನ್ ಹಿಡಿತ ತಪ್ಪಿಸಬೇಕು ಮತ್ತು ಲೈನ್‌ಮನ್‌ಗಳು ಸರಿಯಾಗಿ ಕೆಲಸ ಮಾಡಬೇಕಾದರೆ, ನಾವು ಅವರನ್ನು 10-15 ವರ್ಷಗಳ ಕಾಲ ಒಂದೇಕಡೆ ಏಕೆ ಇಡಬೇಕು. ವರ್ಗಾವಣೆ ನೀತಿ ಅವರಿಗೂ ಅನ್ವಯವಾಗುವುದಿಲ್ಲವೇ ಅವರಿಗೂ ಮೂರು ವರ್ಷವೆಂದು ವರ್ಗಾವಣೆ ನಿಯಮ ಮಾಡಿ. ಯಾರೂ ಸಹ ಮೇಲಿಂದ ಇಳಿದು ಬಂದಿರುವುದಿಲ್ಲ. ಮೂರು ವರ್ಷವಾದ ನಂತರ ಎಲ್ಲರಿಗೂ ವರ್ಗಾವಣೆಯಾಗಲೇಬೇಕು. ಎಲ್ಲಿ ಹೋದರೂ ಕೆಲಸ ಮಾಡಲೇಬೇಕು. ಅವರ ಸಮಸ್ಯೆಗಳ ಬಗ್ಗೆ ಫೈಟ್ ಮಾಡುವ ವಿಚಾರದಲ್ಲಿ ನಿಯಮ ಮಾಡಬೇಕು. ಇದರ ಜೊತೆಗೆ ಮಳೆಗಾಲದಲ್ಲಿ ಸಿಕ್ಕಾಪಟ್ಟೆ ತೊಂದರೆಯಾಗುತ್ತದೆ. ಎಲ್ಲಿ ಲೈನ್‌ಮನ್ ಕೊಟ್ಟಿದ್ದಾರೆ. ಅವರು ವರ್ಷದಲ್ಲಿ ಹೆಚ್ಚು ಕೆಲಸ ಮಾಡಬೇಕಾಗಿರುವುದು ಮಳೆಗಾಲದಲ್ಲಿ. ಆದರೆ, ಮಳೆಗಾಲದಲ್ಲಿ ಕೆಲಸ ಮಾಡುವುದಕ್ಕೆ ಸಾಕಷ್ಟು ಉಪಕರಣಗಳೂ ಬೇಕಾಗುತ್ತದೆ. ನನಗೆ, ಕಂಬಗಳು ಬಿದ್ದುಹೋಗಿರುವ ಬಗ್ಗೆ ಲಿಸ್ಟ್ ಕೊಟ್ಟಿದ್ದಾರೆ. ಹಾಗೆಯೇ ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗಿರುವ ಬಗ್ಗೆ ಲಿಸ್ಟ್ ಕೊಟ್ಟಿದ್ದಾರೆ. ತಕ್ಷಣ ಒದಗಿಸಿಕೊಡುವುದಕ್ಕೆ ಅವರ ಹತ್ತಿರ ಮೆಟೀರಿಯಲ್ಸ್ ಇರುವುದಿಲ್ಲ. ಮೆಟೀರಿಯಲ್ಸ್ ಕಡಿಮೆ ಇರುತ್ತದೆ. ಯಾವಾಗ ನೋಡಿದರೂ ಮಲೆನಾಡಿನಲ್ಲಿ ಇದೇ ಸಮಸ್ಯೆ. ಜೊತೆಗೆ ನಮ್ಮಲ್ಲಿ 6 ತಿಂಗಳು ಮಳೆಗಾಲ, ಆದ್ದರಿಂದ ರಿಪೇರಿ ಕೆಲಸವನ್ನು ಉಳಿದ 6 ತಿಂಗಳಲ್ಲಿ ಮಾಡಬೇಕಾಗುತ್ತದೆ. ಬೇರೆ ಕಡೆ, ಉದಾಹರಣೆಗೆ ಮದ್ದೂರಿನಲ್ಲಿ ವರ್ಷರಿಡೀ ಕೆಲಸ ಮಾಡಬಹುದು. ಆದರೆ ಮೂಡಿಗೆರೆಯಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಶೃಂಗೇರಿಯಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ಆರು ತಿಂಗಳು ವಿಪರೀತ ಮಳೆ ಇರುತ್ತದೆ. ಆಗ ಕಂಬ ಎಳೆಯುವುದಕ್ಕಾಗುವುದಿಲ್ಲ. ಜೊತೆಗೆ ಗದ್ದೆ ನಾಟಿ ಮಾಡಿರುತ್ತಾರೆ, ಇದರಿಂದ ಅಲ್ಲಿ ಹೋಗುವುದಕ್ಕಾಗುವುದಿಲ್ಲ, ಇಂತಹ ಕಾಲದಲ್ಲಿ, ಮೊದಲ ಆರು ತಿಂಗಳು ಬಿಟ್ಟು, ಬೇಸಿಗೆಯಲ್ಲಿ ಸಾಕಷ್ಟು ಲೈನ್‌ಮನ್‌ಗಳನ್ನು ಕೊಟ್ಟು, ಹೆಚ್ಚಿಗೆ ಕೆಲಸ ಮಾಡಿಸಲಿ. ನಮಗೆ ಸ್ವಾತಂತ್ರ್ಯ ಬಂದು 45 ವರ್ಷವಾದರೂ, ದ್ವೀಪಗಳಂತಿರುವ ಎಷ್ಟೋ ಹಳ್ಳಿಗಳಿಗೆ ನಾವು ಲೈಟ್ ಕೊಟ್ಟಿಲ್ಲ. ನಾನು ನಿನ್ನೆ ನಮ್ಮಹಳ್ಳಿಯಲ್ಲಿ ಗಣಪತಿ

ಕಾರ್ಯಕ್ರಮಕ್ಕೆ ಹೋಗಿದ್ದೆ. ಆಗ ಅಲ್ಲಿನ ಜನರು ಶಾಸಕರಿಗೆ, ಇವತ್ತು ನಮ್ಮ ಊರಿಗೆ ಬರಲು ದೃಷ್ಟಿ ಹರಿಯಿತೇ ಎಂದು ಕೇಳಿದರು. ಇವತ್ತು ನಮಗೆ ಕುಡಿಯುವ ನೀರು ಇಲ್ಲ, ಲೈಟ್ ಇಲ್ಲ. ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ ನೀವು ನಮಗೆ ಲೈಟ್ ಕೊಡುವುದಕ್ಕಾಗಿಲ್ಲ. ನೀವೇನು ಸರ್ಕಾರ ನಡೆಸುತ್ತಿದ್ದೀರಿ, ಏಕೆ ನೀವು ಶಾಸಕರಾಗಿದ್ದೀರಿ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಅವರು ಹೇಳುವುದು ಸತ್ಯ ಜನರಿಗೆ ಬೇಕಾಗಿರುವುದು ಬೆಳಕು, ನೀರು. ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ ನಾವು ಈ ಸೌಲಭ್ಯಗಳನ್ನು ಕೊಡದಿದ್ದರೆ, ಜನರು ನಮ್ಮನ್ನು ಕ್ಷಮಿಸುತ್ತಾರೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕು. ಮಲೆನಾಡಿನಲ್ಲಿ ಇವತ್ತು ರೆವಿನ್ಯೂ ಗ್ರಾಮಗಳು ಸುಮಾರು 80 ಪರ್ಸೆಂಟ್ ಎಲೆಕ್ಟ್ರಿಫಿಕೇಷನ್ ಆಗಿದೆ ಎಂದು ದಾಖಲೆಯಲ್ಲಿದೆ. ಆದರೆ, ಉಪ ಗ್ರಾಮಗಳು ಇದರ ಎರಡರಷ್ಟು ಇವೆ. ಒಂದು ರೆವಿನ್ಯೂ ಗ್ರಾಮಕ್ಕೆ 10-12 ಉಪ ಗ್ರಾಮಗಳು ಬರುತ್ತವೆ. ಮತ್ತೆ ಹರಿಜನ ಬಸ್ತಿಗಳನ್ನು ಉದ್ದೇಶಪೂರ್ವಕವಾಗಿ ಕೈ ಬಿಟ್ಟಿದ್ದಾರೆ, ರೆವಿನ್ಯೂ ಗ್ರಾಮಗಳಿಗೆ ಈ ರೀತಿ ಎಲೆಕ್ಟ್ರಿಫಿಕೇಶನ್ ಮಾಡುವುದಕ್ಕೂ ಅನ್‌ಟಚ್‌ಬಿಲಿಟಿ ಏನೋ ಗೊತ್ತಿಲ್ಲ. ಹರಿಜನ ಬಸ್ತಿಗಳನ್ನು ಸಾಕಷ್ಟು ಬಿಟ್ಟಿದ್ದಾರೆ. ಹಾಗೆಯೇ ಹರಿಜನ ಕಾಲೋನಿಗಳನ್ನೂ ಬಿಟ್ಟಿದ್ದಾರೆ. ನಾನು ಮೊನ್ನೆ ಈ ಬಗ್ಗೆ ಪ್ರಶ್ನೆ ಮಾಡಿದ್ದೆ. ಎಷ್ಟು ಹರಿಜನ ಬಸ್ತಿಗಳಿಗೆ ಎಲೆಕ್ಟ್ರಿಫಿಕೇಷನ್ ಕೊಟ್ಟಿಲ್ಲ. ಈ ವರ್ಷದ ಗುರಿ ಏನು ಎಂದು ಕೇಳಿದ್ದೆ. ನನಗೆ ಹೋದವರ್ಷದ ಟಾರ್ಜೆಟ್ ಕೂಡ ಕೊಟ್ಟಿಲ್ಲ. ನಾನು ಪ್ರಶ್ನೆ ಹಾಕಿದಮೇಲೆ ನಿಮ್ಮ ತಾಲ್ಲೂಕಿಗೆ 30 ಹರಿಜನ ಬಸ್ತಿಗಳಿಗೆ ಗುರಿ ಇಟ್ಟುಕೊಂಡಿದ್ದೇವೆ, 30 ಟ್ರೈಬಲ್ ಕಾಲೋನಿಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಗುರಿ ಇಟ್ಟುಕೋಡಿದ್ದೇವೆ ಎಂದು ಹೇಳಿದ್ದಾರೆ. ನನ್ನ ಕಳಕಳಿಯ ಮನವಿ ಏನೆಂದರೆ, ಮಲೆನಾಡಿನ ಭಾಗಗಳಲ್ಲಿ, ದ್ವೀಪಗಳೆಂದು ಏನಿವೆ, ಇಂತಹ ಜಾಗಗಳಲ್ಲಿ ಹೆಚ್ಚು ಮೆಟೀರಿಯಲ್ಸ್ ಒದಗಿಸಿ, ಮತ್ತು ಹೆಚ್ಚು ಲೈನ್‌ಮನ್‌ಗಳನ್ನು ಕೊಟ್ಟು ಕೆಲಸ ಮಾಡಿಸಿ ಜನರಿಗೆ ಬೆಳಕನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯಮಂತ್ರಿಗಳಲ್ಲಿ ಒತ್ತಾಯಮಾಡುತ್ತೇನೆ. ಇದರ ಜೊತೆಗೆ ನಮ್ಮ ಸಣ್ಣ ನೀರಾವರಿ ಮಂತ್ರಿಗಳೂ ಇಲ್ಲಿದ್ದಾರೆ. ಆದುದರಿಂದ ಸಣ್ಣ ನೀರಾವರಿ ಬಗ್ಗೆ ನಾಲ್ಕು ಮಾತನಾಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರು, ಆದರೆ ನಮ್ಮ ಕ್ಷೇತ್ರದ ಕೆಲಸ ಹೆಚ್ಚು ತೆಗೆದುಕೊಂಡಿಲ್ಲ, ನಿಜ ಹೇಳಬೇಕೆಂದರೆ

ಶ್ರೀ ಎಚ್. ಏಕಾಂತಯ್ಯ : ಅದಕ್ಕೆ ಏನೋ ಕಾರಣ ಇರಬೇಕು.

ಶ್ರೀಮತಿ ಮೋಟಮ್ಮ : ಮೊನ್ನೆ ಎಷ್ಟು ಕೆರೆಗಳು ಮತ್ತು ಎಷ್ಟು ಚಾನಲ್‌ಗಳು ನಿಮ್ಮ ಇಲಾಖೆಯ ವ್ಯಾಪ್ತಿಯ ಒಳಗಡೆ ಬರುತ್ತದೆ ಎಂದು ನಾನು ಒಂದು ಪ್ರಶ್ನೆ ಕೇಳಿದ್ದೆ. ಎಷ್ಟು ಇವರ ಪರಿಮಿತಿಯಲ್ಲಿ ಸಾಕಷ್ಟು ಕೆರೆಗಳು ಇವೆ. ಐದುನೂರು ಎಕರೆಗೆ ಮೇಲ್ಪಟ್ಟು ಸಾಕಷ್ಟು ಕೆರೆಗಳು ಇವೆ. ಇಲಾಖೆಯವರನ್ನು ಕೇಳಿದರೆ ಕೆರೆಗಳನ್ನು ಒತ್ತುವರಿ ಮಾಡಿ ಕಾಫಿತೋಟ ಮಾಡಿರುತ್ತಾರೆ, ಅದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಿಬಿಡುತ್ತಾರೆ. ನಮ್ಮ ತಾಲೋಕಿನಲ್ಲಿ ಮೂಡನಕೆರೆ ಚಾನಲ್ ಮತ್ತು ನಾವಕೂವೆ ಚಾನಲ್ ಎಂದು ಎರಡು ಚಾನಲ್ ಗಳಿವೆ. ಮೊನ್ನೆ ಮಳೆ ಬಂದು ಎಲ್ಲಾ ಒಡೆದು ಹೋಗಿದೆ. ಇದು ಹಾಳಾಗಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೆ, ಇಲ್ಲ ಎಂದು ಉತ್ತರ ಕೊಟ್ಟರು. ಆದಕಾರಣ ಈಗ ಇರುವ ಎರಡು ಚಾನಲ್‌ಗಳನ್ನು ರಿಪೇರಿ ಮಾಡಿ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದ್ದಬದ್ದ ಕೆರೆಗಳಲ್ಲೆಲ್ಲಾ ಹೂಳು ತುಂಬಿಕೊಂಡಿದೆ. ಮಾನ್ಯ ಸಚಿವರು ಈ ಹೂಳು ತೆಗೆಸುವ ಕೆಲಸ ಮಾಡಿಸುತ್ತೇವೆ, ವರ್ಲ್ಡ್ ಬ್ಯಾಂಕ್‌ನಿಂದ

ಇದಕ್ಕಾಗಿ ಫಂಡ್ ತರುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಈ ಕೆಲಸವನ್ನು ಅಗತ್ಯವಾಗಿ ಮಾಡಲೇಬೇಕು. ಹಾಗೂ ಎಲ್ಲೆಲ್ಲಿ ಕೆರೆಗಳ ಜಾಗ ಒತ್ತುವರಿಯಾಗಿದೆ. ಯಾವುದು ನಿಮ್ಮ ವ್ಯಾಪ್ತಿಯಲ್ಲಿ ಬರುತ್ತದೆ, ಆ ಕೆರೆಗಳನ್ನು ಕೂಡಲೇ ಸರ್ವೆ ಮಾಡಿಸಿ, ಒತ್ತುವರಿಯನ್ನು ಎವಿಕ್ಟ್ ಮಾಡಿಸಬೇಕಾಗುತ್ತದೆ. ಒತ್ತುವರಿ ಮಾಡಿರುವವರಿಂದ ಮಾಡಿಸಬೇಕಾಗುತ್ತದೆ. ಇದನ್ನು ಮಾಡಿ ಜನರಿಗೆ ಹೆಚ್ಚು ಉಪಯೋಗವಾಗುವುದಕ್ಕೆ ಸಹಾಯ ಮಾಡಬೇಕೆಂದು ಹೇಳಿ,ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ನಾಳೆ ಎಷ್ಟು ಹೊತ್ತಿಗೆ ಕೂರೋಣ. ಇನ್ನೂ ಬಹಳ ಮಂದಿ ಸದಸ್ಯರು ಮಾತನಾಡಬೇಕೆಂದು ಇದ್ದಾರೆ. ನಾಳೆ ಬೆಳಗ್ಗೆ 10 ಘಂಟೆಗೆ ಸೇರಿ 11 ಘಂಟೆಯಷ್ಟು ಹೊತ್ತಿಗೆ ಡಿಸ್ಕಷನ್ ಮುಗಿಸಿ. ಅನಂತರ ಮಾನ್ಯ ಸಚಿವರುಗಳ ಉತ್ತರ ಆದಮೇಲೆ ಕೊಶ್ಚನ್ ಹವರ್ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಉತ್ತರ ಆದನಂತರ ಕೊಶ್ಚನ್‌ಹವರ್, ಕೊಶ್ಚನ್ ಅವರ್ ಆದಮೇಲೆ ಬೇರೆ ಡಿಮ್ಯಾಂಡ್ಸ್‌ತೆಗೆದುಕೊಳ್ಳೋಣ.

ಅಧ್ಯಕ್ಷರು : ಸದನ ಈಗ ವಿರಮಿಸಿ ಮತ್ತೆ ನಾಳೆ 10 ಘಂಟೆಗೆ ಸಮಾವೇಶವಾಗುತ್ತದೆ.

(ಸದನವು ರಾತ್ರಿ 7.02 ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 18.9.91 ನೇ ಬುಧವಾರ ಬೆಳಗ್ಗೆ 10.00 ಘಂಟೆಗೆ ಮತ್ತೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.